# ಅಧ್ಯಾಯ 14

# ಸಾಹಿತ್ಯ ಮತ್ತು ಸಂಸ್ಕೃತಿ*

ಕೊಡಗಿನ ಪರಿಸರದ ಚೆಲುವಿಕೆಗೆ ಮಾರುಹೋಗಿ ಅದನ್ನು ಸುಂದರವಾಗಿ ಮತ್ತು ಪರಿಣಾಮಕಾರಿಯಾಗಿ ತಮ್ಮ ಕವಿತೆಗಳ ಮೂಲಕ ಪ್ರಕಟಗೊಳಿಸಿರುವ ಪ್ರತಿಭಾನ್ವಿತ ಕವಿ–ಕವಯಿತ್ರಿಯರಿಂದಲೂ ಇಂಪಾದ ರಾಗಮಾಲಿಕೆಗಳಿಂದೊಡಗೂಡಿದ ಸಂಗೀತವನ್ನು ತಮ್ಮ ಮಧುರ ಕಂಠಶ್ರೀಯಿಂದ ಹೊಮ್ಮಿಸುವ ನುರಿತ ಗಾಯಕ–ಗಾಯಕಿಯರಿಂದಲೂ ನಾನಾ ತೆರನಾದ ನಯನ ಮನೋಹರ ಮೋಹಕ ಪಾರಂಪರಿಕ ನೃತ್ಯಗಳಿಂದ ರಂಜಿಸುವ ಕುಶಲ ನರ್ತಕ-ನರ್ತಕಿಯರಿಂದಲೂ ಶ್ರೇಷ್ಠ ಕೀರ್ತನಕಾರರು ಮತ್ತು ಗಮಕಿಗಳಿಂದಲೂ ಪ್ರಸಿದ್ಧ ಕಲಾವಿದರು ಮತ್ತು ಶಿಲ್ಪಿಗಳಿಂದಲೂ ಕೂಡಿ ಈ ಜಿಲ್ಲೆಯು ತನ್ನದೇ ಆದ ವಿಶಿಷ್ಟತೆಯನ್ನು ರೂಢಿಸಿಕೊಂಡಿದೆ. ಪ್ರಾಚೀನ ಕಾವ್ಯಕೃತಿಗಳ ಉತ್ಕೃಷ್ಟತೆಯ ಕಂಪಿನೊಡನೆ ಆಧುನಿಕ ವಿಚಾರ ಸಾಹಿತ್ಯದ ಪೆಂಪು ಸಹಾ ಬೆರೆತಿದ್ದು, ಈ ಎಲ್ಲಾ ತಲೆಮಾರುಗಳ ಸಾಹಿತ್ಯವಾಹಿನಿಯು ಕಳೆದ 600-700 ವರುಷಗಳಿಂದ ಈ ಜಿಲ್ಲೆಯಲ್ಲಿ ನಿರಂತರವಾಗಿ ಹರಿದುಬಂದಿದೆ. ಜನಮನ್ನಣೆಗಳಿಸಿದ ಹಾಗೂ ರಾಜ್ಯ ಪ್ರಶಸ್ತಿಗಳಿಗೆ ಪಾತ್ರರಾದ ಹಲವಾರು ವಿದ್ವಾಂಸರು ಮತ್ತು ಲೇಖಕ-ಲೇಖಕಿಯರು ಈ ಜಿಲ್ಲೆಯ ಖ್ಯಾತಿಯು ದೇಶ-ವಿದೇಶಗಳಲ್ಲಿ ಹರಡಲು ಕಾರಣರೆನಿಸಿದ್ದಾರೆ.

ಜಾನಪದ ಸೊಗಡಿನಿಂದ ಕೂಡಿರುವ ಇಲ್ಲಿಯ ಭಾಷೆ ಮತ್ತು ಸಾಹಿತ್ಯಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರವು ಶ್ರೀಮಂತವಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಸೃಷ್ಟಿಯಾದ ಕೃತಿಗಳೂ ವಿಪುಲವಾಗಿವೆ. ಮುಖ್ಯವಾಗಿ, ಉತ್ಕೃಷ್ಟ ಸಾಹಿತ್ಯವನ್ನೊಳಗೊಂಡಿರುವ ಕೊಡವ ಭಾಷಾ ಕೃತಿಗಳು ಈ ದಿಸೆಯಲ್ಲಿ ಪರಿಗಣಿಸಲರ್ಹವಾದುವು. ಈ ಜಿಲ್ಲೆಯ ಸಾಹಿತ್ಯದ ಪ್ರಭಾವವು ಇಲ್ಲಿಯ ರಂಗಭೂಮಿಯ ಮೇಲೆ ಆಗಿರುವುದೂ ವ್ಯಕ್ತಪಡುತ್ತದೆ. ಕೊಡವ ಮತ್ತು ಕನ್ನಡ ಭಾಷೆಯ ನಾಟಕಗಳು ಕೊಡಗು ಮತ್ತು ಇತರೆಡೆಗಳಲ್ಲಿಯ ರಂಗಮಂಚಗಳ ಮೇಲೆ ಪ್ರದರ್ಶಿತಗೊಂಡು ಪ್ರಸಿದ್ಧಿ ಪಡೆದಿವೆ. ಇವು ಮುಖ್ಯವಾಗಿ ಕೊಡಗಿನ ಪೌರಾಣಿಕ ಮತ್ತು ಚಾರಿತ್ರಿಕ ವಸ್ತುಗಳನ್ನೂ ಜನಜೀವನದ ಅಂಶಗಳನ್ನೂ ಅವಲಂಬಿಸಿವೆ. ಜಿಲ್ಲೆಯಾದ್ಯಂತ ಹಲವಾರು ಹವ್ಯಾಸಿ ನಾಟಕ ತಂಡಗಳು ಕ್ರಿಯಾಶೀಲವಾಗಿದ್ದು, ವಿಚಾರ ಪ್ರಚೋದಕ ವಸ್ತುಗಳನ್ನೊಳಗೊಂಡ ನೂತನ ನಾಟಕಗಳನ್ನು ರಂಗಕ್ಕೆ ತಂದಿವೆ. ಚಲನಚಿತ್ರ ರಂಗಕ್ಕೂ ಈ ಜಿಲ್ಲೆಯು ತನ್ನ ಕಾಣಿಕೆ ಸಲ್ಲಿಸಿದೆ. ಅನೂಚಾನವಾಗಿ ಬಂದ ಈ ಜಿಲ್ಲೆಯ ಜನಪದ ನೃತ್ಯ, ಸಂಗೀತಗಳೇ ಅಲ್ಲದೆ, ಕಾಲಕ್ಕೆ ತಕ್ಕಂತೆ ಇಲ್ಲಿಯ ಲಲಿತಕಲಾ ಕ್ಷೇತ್ರದಲ್ಲಿ ಸುಧಾರಣೆ ಹಾಗೂ ಬದಲಾವಣೆಗಳೂ ತೋರಿಬರುತ್ತಿವೆ. ಅಖಿಲ ಭಾರತ ಮತ್ತು ಜಿಲ್ಲಾಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳೂ ಇಲ್ಲಿ ಜರುಗಿವೆ. ಈ ದೃಷ್ಟಿಯಿಂದ ಕೊಡವ ಭಾಷಾ ಸಮ್ಮೇಳನಗಳ ಪ್ರಭಾವವೂ ಗಮನಾರ್ಹ. ದೇಶ, ಭಾಷೆ, ಜನಾಂಗ, ಪ್ರಕೃತಿ, ಸಾಹಿತ್ಯ, ಸಂಸ್ಕೃತಿ, ಇತ್ಯಾದಿಗಳ ರಕ್ಷಣೆ ಮತ್ತು ಬೆಳವಣಿಗೆಯಲ್ಲಿ ಈ ಜಿಲ್ಲೆಯ ವೃತ್ತಪತ್ರಿಕೆ

* ಪತ್ರಿಕೋದ್ಯಮವೂ ಇದರಲ್ಲಿ ಸೇರಿದೆ.

ಗಳು ಮುಖ್ಯಪಾತ್ರ ವಹಿಸಿವೆ. ಕನ್ನಡ, ಕೊಡವ, ಇಂಗ್ಲಿಷ್, ಇತ್ಯಾದಿ ಭಾಷೆಗಳಲ್ಲಿಯ ಪತ್ರಿಕೆಗಳು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ.

### ಶಾಸನ ಕವಿಗಳು

ಕೊಡಗು ಜಿಲ್ಲೆಯ ಸಾಹಿತ್ಯಿಕ ಮೂಲ ಆಕರಗಳಲ್ಲಿ ಶಾಸನ ಬರಹಗಳು ಮುಖ್ಯವೆನಿಸಿದ್ದು, ಇವುಗಳು ಕ್ರಿ.ಶ. 9 ನೇಯ ಶತಮಾನದ ಉತ್ತರಾರ್ಧದಿಂದ 19ನೇಯ ಶತಮಾನದವರೆಗೆ ರಚಿತವಾದವು; ಗಂಗ, ಕೊಂಗಾಳ್ವ, ಹೊಯ್ಸಳ ಮತ್ತು ಹಾಲೇರಿ ಅರಸರಿಗೆ ಸೇರಿದವು. ಇವುಗಳಲ್ಲಿ ಅಂಜನಗಿರಿಯ ಜೈನ ಬಸದಿಯಲ್ಲಿರುವ ಶಿಲಾಶಾಸನವನ್ನು[1] ಗಮನಿಸಬಹುದು. ಇದರಲ್ಲಿ ಪಂಡಿತದೇವನೆಂಬ ಜೈನಯತಿಯು ರೂಪಾಲಂಕಾರದಲ್ಲಿ ವರ್ಣಿಸಲ್ಪಟ್ಟಿದ್ದು, ಈ ಶಾಸನಪಾಠವು ಸಮರ್ಥ ಕವಿಯಿಂದಲೇ ರಚಿತವಾದುದು ವ್ಯಕ್ತಪಡುತ್ತದೆ. ಇದೇ ಬಗೆಯಲ್ಲಿ ಗದ್ಯದ ಚೆಲುವನ್ನು ಹೊಂದಿರುವ ಇಮ್ಮಡಿ ವೀರರಾಜೇಂದ್ರನ ಕಾಲದ ಇನ್ನೊಂದು ಶಾಸನವು ಮಡಿಕೇರಿಯಲ್ಲಿದ್ದು (ಶಾಸನ ಸಂಖ್ಯೆ 3), ಹಾಲೇರಿ ಅರಸರ ಇತರ ಶಾಸನಗಳಿಗಿಂತ ಇದು ಭಿನ್ನವಾಗಿದೆ. ಮದೋನ್ಮತ್ತ ಆನೆಗಳ ಸಮೂಹದಿಂದ ಕೂಡಿದ ಅರಣ್ಯವನ್ನು ಹೊಕ್ಕ ವೀರರಾಜೇಂದ್ರನು ತನ್ನ ಪರಾಕ್ರಮದಿಂದ ಅವುಗಳ ಹಾವಳಿಯನ್ನು ತಪ್ಪಿಸಿದುದನ್ನು ಕಾವ್ಯಮಯವಾಗಿ ವರ್ಣಿಸುತ್ತದೆ, ಈ ಶಾಸನ.

ಈ ಜಿಲ್ಲೆಯ ಕೆಲವು ಶಾಸನ ಪಾಠಗಳನ್ನು ರಚಿಸಿದ ಪ್ರಾಚೀನ ಕವಿಗಳಲ್ಲಿ ಚನ್ನ ನನ್ದಯಯ್ಯ (ಶಾ. ಸಂ. 98), ಧರ್ಮಶೆಟ್ಟಿ (ಶಾ. ಸಂ. 72-ಮುಳ್ಳೂರು), ಬಮ್ಮದೇವ (ಶಾ. ಸಂ. 62), ಸೇನಬೋವ ಜಿನಯ್ಯ (ಸಂಖ್ಯೆ 60), ಬೊಮ್ಮರಸೈಯ (ಸಂಖ್ಯೆ 88) ಮೊದಲಾದವರ ಹೆಸರುಗಳು ಶಾಸನ ಪಾಠಗಳಲ್ಲಿ ಕಂಡು ಬರುತ್ತವೆ. ಹದಿನೆಂಟನೇಯ ಶತಮಾನದಲ್ಲಿ ಕಂಡು ಬರುವ ಶಾಸನಕವಿಗಳಲ್ಲಿ ಹಾಲೇರಿ ಅರಸರ ಕಾಲದಲ್ಲಿದ್ದ ಖಾಸಾ ರಹಸ್ಯದ ಶಂಭೈಯನೆಂಬವನು ಮುಖ್ಯನೆನಿಸಿದ್ದಾನೆ. ಈತನು ಕ್ರಿ.ಶ. 1796ರ ಅಬ್ಬಿಮಠಕ್ಕೆ ಸಂಬಂಧಿಸಿದ ತಾಮ್ರಶಾಸನದಲ್ಲಿಯ ಕೆಲವು ಸಂಸ್ಕೃತ ಶ್ಲೋಕಗಳನ್ನೂ ಶಾಸನ ಪದ್ಯಗಳನ್ನೂ ರಚಿಸಿರುವನು. ಈತನು ಕೆಲವು ಗ್ರಂಥಗಳನ್ನು ರಚಿಸಿದ್ದಿರಬಹುದೆಂಬ ಊಹೆಯನ್ನು ಮಾಡಲಾಗಿದೆ.[2]

### ಪ್ರಾಚೀನ ಕವಿಗಳು

ಕೊಡಗಿನ ಪ್ರಾಚೀನ ಕವಿಗಳ ಪರಂಪರೆಯನ್ನು ಸುಮಾರು ಹತ್ತನೇಯ ಶತಮಾನದಿಂದಲೇ ಗುರುತಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. 'ಛಂದೋಂಬುಧಿ'ಯೆಂಬ ಗ್ರಂಥವನ್ನು ರಚಿಸಿದ ನಾಗವರ್ಮನು ಕೊಡಗಿನಲ್ಲಿದ್ದವನೆಂದೂ ಬೆದ್ದೊರೆಗೆರೆ ಎಂಬುದಾಗಿ ಕರೆಯಲಾಗುತ್ತಿದ್ದ (ಬಹುಶಃ ಈಗಿನ ಬಿಳಿಯೂರ ಸಮೀಪವಿದೆ) ಕೊಡಗಿನ ದಕ್ಷಿಣ ಭಾಗದಲ್ಲಿಯ ಲಕ್ಷ್ಮಣತೀರ್ಥ ನದಿಯ ಪ್ರಾಂತ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ರಕ್ಕಸಗಂಗನು ಈತನ ಆಶ್ರಯದಾತನಾಗಿದ್ದನೆಂದೂ ಈ ನಾಗವರ್ಮನನ್ನೇ ಕೊಡಗು ದೇಶದ ಪ್ರಥಮ ಸಾಹಿತ್ಯ ಸೇವಕನೆಂದು ಕರೆಯಬಹುದೆಂದೂ ಹೇಳಲಾಗಿದೆ.[3] ಕೊಂಗಾಳ್ವ ಅರಸರ ರಾಜಧಾನಿಯಾಗಿದ್ದ ಮುಳ್ಳೂರಿನಲ್ಲಿ 'ದ್ರಮಿಳ ನಂದಿ ಸಂಘ'ದ ಗುಣಸೇನ ಪಂಡಿತನೆಂಬವನು 11ನೇಯ ಶತಮಾನದಲ್ಲಿ ಇದ್ದುದು ಮತ್ತು ಈತನು ಸನಾತನಧರ್ಮದ ಷಡ್ದರ್ಶನಗಳಲ್ಲಿ ಪಾರಂಗತನಾಗಿದ್ದುದು ವ್ಯಕ್ತಪಟ್ಟಿದೆ.[4] ಈ ಕವಿಗೆ ಕನ್ನಡದಲ್ಲಿಯೂ ಪಾಂಡಿತ್ಯವಿದ್ದಿತು. ಈತನು 'ಪುಣ್ಯಾಸ್ರವ'ವೆಂಬ ಕಾವ್ಯವನ್ನು ಬರೆದಂತೆ ತಿಳಿದುಬರುತ್ತದೆ.[5] ಶ್ರವಣಬೆಳಗೊಳದ ಶಾಸನವೊಂದು, ಈತನ ಮರಣದಿಂದ ಮುಳ್ಳೂರಿನ 'ವೈಡೂರ್ಯಸಾರವಸಧಿ'ಯೇ ಕಳೆದುಹೋಯಿತೆಂದು ವರ್ಣಿಸಿದೆ.[6] ಶುಭಚಂದ್ರನೆಂಬ ಉದ್ದಾಮ ಕವಿಯೂ ಪ್ರಭಾಚಂದ್ರನೆಂಬ ಆತನ ಶಿಷ್ಯನೂ ಇದೇ ಶತಮಾನದಲ್ಲಿಯೇ ಕೊಡಗಿನಲ್ಲಿ ವಾಸಿಸಿದ್ದರೆಂದು ಭಾವಿಸಲ್ಪಟ್ಟಿದೆ.

ಕದಂಬ ವಂಶಕ್ಕೆ ಸೇರಿದ ಮನ್ನೆಯನಾದ ದಯಾಸಿಂಹನು ಮಂಜರಾಬಾದು ಮತ್ತು ಏಳುಸಾವಿರಸೀಮೆಗೆ ಸೇರಿದವನು ;

---

1. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 1, ಕೊಡಗು ಜಿಲ್ಲೆ (ಪರಿಷ್ಕೃತ), ಸಂಖ್ಯೆ 19, ಕ್ರಿ.ಶ. 1544
2. ಬಿ. ಎನ್. ಕೃಷ್ಣಮೂರ್ತಿ : 'ಕೊಡಗು ಕನ್ನಡ ಭಾಷೆಗೆ ಮಾಡಿರುವ ಸೇವೆ', ಕೊಡಗಿನ ಕಾಣಿಕೆ, ಪು. 52
3. ಅದೇ, ಪು. 51
4. ಬಿ. ಎನ್. ಕೃಷ್ಣಮೂರ್ತಿ : 'ಗುಣಸೇನ ಪಂಡಿತ', ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, 7–3, ಜನವರಿ 1922, ಪು. 280–282
5. ಕೊಡಗಿನ ಕಾಣಿಕೆ, ಪು. 52
6. ಎ. ಕ., ಸಂಪುಟ 2 (ಪರಿಷ್ಕೃತ), ಸಂಖ್ಯೆ 77 (ಶ್ರವಣಬೆಳಗೊಳ ಚಿಕ್ಕಬೆಟ್ಟ), ಕ್ರಿ.ಶ. 1129

11ನೇಯ ಶತಮಾನದವನು. ಈತನು ಕವಿ, ಕಾವ್ಯ ವಿಮರ್ಶಕ, ವೈಯ್ಯಾಕರಣಿ, ಚಿತ್ರಗಾರ ಮತ್ತು ಸಂಗೀತಜ್ಞನೆಂದು ಪ್ರಸಿದ್ಧಿ ಹೊಂದಿದ್ದನೆಂದು ತಿಳಿದು ಬರುವುದು.[1] 'ಕರ್ಣಾಟಕ ಕವಿಚರಿತೆ'ಯ ಸಂಪುಟ 1ರಲ್ಲಿ (ಪು. 157-158) ಉಕ್ತನಾದ ಮೌಕ್ತಿಕ ಕವಿಯು ಕ್ರಿ.ಶ. 1120ರಲ್ಲಿದ್ದವನೆಂದೂ 'ಚಂದ್ರನಾಥಾಷ್ಟಕ'ವನ್ನು ರಚಿಸಿದವನೆಂದೂ ಗುರುತಿಸಲ್ಪಟ್ಟಿದ್ದಾನೆ. ಈತನು ಕೊಡಗಿನ ಏಳುಸಾವಿರ ಸೀಮೆಯವನಾಗಿದ್ದು, ಸೋಮವಾರಪೇಟೆ ತಾಲೂಕು ಪ್ರದೇಶದ ಮೇಲೂ ಅಧಿಕಾರ ಸ್ಥಾಪಿಸಿದ್ದ ವೀರಕೊಂಗಾಳ್ವ ದೇವನ ಆಶ್ರಯದಲ್ಲಿದ್ದವನೆಂದು ವ್ಯಕ್ತಪಡುವುದು.[2] ಅರಕಲಗೂಡಿನ ಶಾಸನವೊಂದರ (ಸಂಖ್ಯೆ 99, ಕ್ರಿ.ಶ. 1079) ಪ್ರಕಾರ, ಕೊಡಗಿನ ರಾಜೇಂದ್ರ ಪೃಥ್ವಿಕೊಂಗಾಳ್ವನ ಸೇನಾಧಿಪತಿಯಾಗಿದ್ದ ನಕುಲಾರ್ಯನೆಂಬವನು ನಾಲ್ಕು ಭಾಷೆಗಳಲ್ಲಿ ಪ್ರವೀಣನಾಗಿದ್ದನು. ಈತನು ಕೆಲವು ಗ್ರಂಥಗಳನ್ನು ರಚಿಸಿದ್ದಾಗಿ ತಿಳಿದುಬಂದಿದ್ದರೂ ಇದುವರೆಗೆ ಯಾವ ಗ್ರಂಥವೂ ದೊರೆತಿರುವುದಿಲ್ಲ.[3]

ಹಿಂದೆ ಕೊಡಗಿನ ಭಾಗವಾಗಿಯೂ ಇದ್ದ ಕೆಲವು ಪ್ರದೇಶಗಳಲ್ಲಿ ವಾಸಿಸಿದ್ದು ಕಾವ್ಯರಚನೆ ಮಾಡಿದ ಕೆಲವು ಪ್ರತಿಭಾನ್ವಿತ ಕವಿಗಳು ಕೊಡಗು ಸಾಹಿತ್ಯ ಚರಿತ್ರೆಯಲ್ಲಿಯೂ ಗೌರವದ ಸ್ಥಾನ ಪಡೆದಿದ್ದಾರೆ. ಉತ್ತರ ಕೊಡಗಿನ ಚೆಂಗಾಳ್ವ ಅರಸರ ಮಂತ್ರಿ ಪ್ರಭು ವಿಜಯೇಂದ್ರನ ಮಗ (ಮೂರನೇಯ) ಮಂಗರಸ(ಮಂಗರಾಜ)ನು (ಕ್ರಿ.ಶ. 1508) 16ನೇಯ ಶತಮಾನದವನಾಗಿದ್ದು, 'ಜಯನೃಪಕಾವ್ಯ', 'ಸಮ್ಯಕ್ತ್ವ ಕೌಮುದಿ' ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ. ಈ ಕವಿಯು ಸೋಮವಾರಪೇಟೆ ತಾ|| ಕೊಡ್ಲಿಪೇಟೆ ಸಮೀಪದ ಕಲ್ಲಹಳ್ಳಿಯ ಜೈನಮಠದಲ್ಲಿದ್ದು ತನ್ನ ಕಾವ್ಯಗಳನ್ನು ರಚಿಸಿದನು.[4] (ಈತನು ಹುಣಸೂರು ತಾ|| ಕಲ್ಲಹಳ್ಳಿಯವನೆಂದೂ ಒಂದು ಅಭಿಪ್ರಾಯ). ಈ (ಮೂರನೇಯ) ಮಂಗರಸನ ಸಹೋದರನ ಮಗನೆಂಬುದಾಗಿ ತಿಳಿಯಲಾದ 'ಕುಮಾರ ರಾಮನ ಕಥೆ' ಗ್ರಂಥಕರ್ತೃ ನಂಜುಂಡನು (ಕ್ರಿ.ಶ. 1525) ಸಹಾ ಪಿರಿಯಾಪಟ್ಟಣದ ಚೆಂಗಾಳ್ವ ಅರಸರ ಆಶ್ರಯವನ್ನು ಹೊಂದಿ ತನ್ನ ಗ್ರಂಥವನ್ನು ರಚಿಸಿದನು.[5] ಕೊಡಗಿನ ಪ್ರಪ್ರಥಮ ಉಪಲಬ್ಧ ಮಹಾಕಾವ್ಯವೆಂದು ಕರೆಯಲ್ಪಟ್ಟ 'ರಾಮವಿಜಯಕಾವ್ಯ'ವು ದೇವಪ್ಪನೆಂಬ ಜೈನಕವಿಯಿಂದ (ಕ್ರಿ.ಶ. 1540) ರಚಿಸಲ್ಪಟ್ಟಿದು. ಈ ಕವಿಯು ಹುಣಸೂರು ತಾಲೂಕು ರಾಮಂದೂರಿಗೆ ಸೇರಿದವನಾದರೂ ಕೊಡಗು ಜಿಲ್ಲೆಯ ನಂಜರಾಯಪಟ್ಟಣದಲ್ಲಿ ಆಳುತ್ತಿದ್ದ ಚೆಂಗಾಳ್ವ ನಂಜುಂಡರಾಯನ ಆಶ್ರಯ ಪಡೆದು ಆತನ ಮಂತ್ರಿಯೂ ಆಗಿದ್ದನು.

ದೊಡ್ಡವೀರರಾಜೇಂದ್ರ ಒಡೆಯನು (ಕ್ರಿ.ಶ. 1789–1809) ಆಡಳಿತಕ್ಕೆ ಸಂಬಂಧಿಸಿದ ರಾಜಕೀಯ ವೃತ್ತಾಂತವನ್ನೊಳಗೊಂಡ 'ರಾಜೇಂದ್ರನಾಮೆ' ಎಂಬ ದಾಖಲೆಯನ್ನು ಕನ್ನಡದಲ್ಲಿ ಬರೆಸಿರುವನು. ಕೊಡಗಿನ ಹಿಂದಿನ ಚರಿತ್ರೆಯ ಬರವಣಿಗೆಗಳು ಮೊದಲಾದ ಸಾಧನಗಳಿಂದ ಈ ಚರಿತ್ರೆಯು ಬರೆಯಲ್ಪಟ್ಟಿದೆಯೆಂದು ವ್ಯಕ್ತಪಡುತ್ತದೆ. ಈ ಚರಿತ್ರೆಯನ್ನು ಲೆಫ್ಟಿನೆಂಟ್ ರಾಬರ್ಟ್ ಅಬರ್‌ಕ್ರಾಂಬಿಯು ಇಂಗ್ಲಿಷ್ ಭಾಷೆಗೆ ಪರಿವರ್ತಿಸಿರುವನು. ಕ್ರಿ.ಶ. 1810 ರಿಂದ 1820ರ ವರೆಗೆ ಕೊಡಗಿನ ಅರಸನಾಗಿದ್ದ ಎರಡನೇಯ ಲಿಂಗರಾಜೇಂದ್ರ ಒಡೆಯನು ಕವಿಯೂ ಗ್ರಂಥಕರ್ತೃವೂ ಆಗಿದ್ದ. ಈತನು ಕೊಡಗಿನ ಪ್ರತೀ ನಾಡಿನಲ್ಲಿಯೂ ಮಾಡಿಸಿದ ಭೂಮಿಯ ಅಳತೆ ಮತ್ತು ಕಂದಾಯದ ದೊಡ್ಡ ಪುಸ್ತಕಗಳಿಗೆ 'ಲಿಂಗರಾಜನ ಶಿಸ್ತು' ಎಂಬುದಾಗಿ ಕರೆಯಲಾಯಿತು.[6] ಇದರೊಡನೆ ಅರಮನೆಯ ಅಥವಾ ಸರಕಾರಿ ನೌಕರರು ಪ್ರಜೆಗಳೊಡನೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ವಿವರಿಸಿ ಈತನು ಒಟ್ಟು 54 ಹುಕುಂ ಅಥವಾ ಆಜ್ಞೆಗಳನ್ನು ಬರೆಯಿಸಿದ್ದು, ಈ ಆಜ್ಞೆಗಳಿಗೆ 'ಹುಕುಂನಾಮೆ' ಎಂದು ಹೆಸರು. ಲಿಂಗರಾಜೇಂದ್ರ ಒಡೆಯನು ಕನ್ನಡ ಮತ್ತು ಹಿಂದೂಸ್ತಾನಿ ಭಾಷೆಗಳಲ್ಲಿ ನಿಪುಣನಾಗಿದ್ದನಲ್ಲದೆ, ಕನ್ನಡದಲ್ಲಿ ಕವಿತೆಗಳನ್ನೂ ರಚಿಸುತ್ತಿದ್ದನು. ಈತನು ತನ್ನ ಪತ್ನಿಯರಲ್ಲಿ ಒಬ್ಬಳನ್ನು ಕುರಿತು ಬರೆದ ಕೆಲವು ಕನ್ನಡ

1. ಕೊಡಗಿನ ಬರಹಗಾರರು, ಪು. 2
2. ಕೊಡಗಿನ ಕಾಣಿಕೆ, ಪು. 51
3. ಅದೇ, ಪು. 51
4. ಕರ್ಣಾಟಕ ಕವಿಚರಿತೆ, ಸಂಪುಟ 2, ಪು. 125 ; ಕೊಡಗಿನ ಕಾಣಿಕೆ, ಪು. 52
5. ಅದೇ, ಸಂಪುಟ 2, ಪು. 148–149
6. ಡಿ. ಎನ್. ಕೃಷ್ಣಯ್ಯ : ಕೊಡಗಿನ ಇತಿಹಾಸ, ಪು. 390

ಕವಿತೆಗಳನ್ನು ತಾನು ಓದಿದ್ದಾಗಿ ಡಾ|| ಹರ್ಮನ್ ಮೊಗ್ಲಿಂಗನು ಹೇಳಿರುವನು (ಕೃಷ್ಣಯ್ಯ, ಕೊ.ಇ., ಪು. 450). ಅಲ್ಲದೆ, ನಿಜಗುಣ ಶಿವಯೋಗಿಯು ರಚಿಸಿದ 'ವಿವೇಕ ಚಿಂತಾಮಣಿ' ಎಂಬ ಗ್ರಂಥವನ್ನು ಈ ಅರಸನು ಸಂಸ್ಕೃತ ಭಾಷೆಗೆ ಭಾಷಾಂತರಿಸಿದನೆಂದೂ ತಿಳಿದುಬರುತ್ತದೆ (ಕೃಷ್ಣಯ್ಯ, ಪು. 450). 'ಬಸವರಾಜ ವಿಜಯ'ವೆಂಬ ಗ್ರಂಥವನ್ನೂ ಈತನು ರಚಿಸಿರುವನೆಂಬುದಾಗಿ ಪ್ರತೀತಿಯಿದ್ದರೂ ಆ ಗ್ರಂಥವಿನ್ನೂ ದೊರೆತಿರುವುದಿಲ್ಲ.[1] ಬಹುಶಃ ಇದೇ ಅರಸನ 'ಮಡಿಕೇರಿ ಲಿಂಗರಾಜರು' ಎಂಬ ಹೆಸರಿನಲ್ಲಿ ರಚಿಸಲ್ಪಟ್ಟ ಜಾವಳಿಗಳಲ್ಲಿ ಒಂದು ಕೃತಿಯು ಈಗಾಗಲೇ ಬೆಳಕಿಗೆ ಬಂದಿದೆ.[2]

ಕೊಡಗಿನ ಕೆಲವು ಪ್ರಮುಖ ಸಂಗತಿಗಳನ್ನು ಪ್ರಸ್ತಾಪಿಸುವ ಗಮನಾರ್ಹ ಸಾಹಿತ್ಯ ಕೃತಿಗಳನ್ನೂ ಇಲ್ಲಿ ಉಲ್ಲೇಖಿಸಬಹುದು. ಗೋವಿಂದವೈದ್ಯನ (ಕ್ರಿ.ಶ. 1648) 'ಕಂಠೀರವ ನರಸರಾಜವಿಜಯ'ವು ಈ ದಿಸೆಯಲ್ಲಿ ಗಮನಿಸಬೇಕಾದ ಕೃತಿ. ಇದು ಸಾಹಿತ್ಯದಲ್ಲಿ ಕೊಡಗನ್ನು ಸ್ಪಷ್ಟವಾಗಿ ಮೂಡಿಸುವ ಮೊದಲ ಕನ್ನಡ ಕಾವ್ಯವೆನಿಸಿದ್ದು, ಇದರಲ್ಲಿ ಕಾವೇರಿ ನದಿಯ ವರ್ಣನೆ, ಪಾಲ್ಪರೆ ಕೋಟೆಯ ವರ್ಣನೆ, ಕೊಡಗಿನ ದಟ್ಟ ಕಾಡಿನ ಚಿತ್ರಣ, ಕೊಡಗಿನ ಪರಿವಾರದ ವರ್ಣನೆ, ಇತ್ಯಾದಿಗಳು ಕಂಡುಬರುತ್ತವೆ.

ಪ್ರಾಚೀನ ಕೊಡಗಿಗೆ ಸಂಬಂಧಿಸಿದ ದಂತಕಥೆ, ಚರಿತ್ರೆ ಮತ್ತು ಕಾವೇರಿ ನದಿಯ ವೈಭವ ಕುರಿತಂತೆ ಸಂಸ್ಕೃತದ ಸ್ಕಾಂದ ಅಥವಾ ಕಾರ್ತಿಕೇಯ ಪುರಾಣದ 11 ರಿಂದ 14ನೇಯ ಅಧ್ಯಾಯಗಳನ್ನು 'ಕಾವೇರಿಪುರಾಣ' ವೆಂದು ಕರೆಯಲಾಗಿದ್ದು, ಪವಿತ್ರ ನದಿ ಕಾವೇರಿಯ ಮಹಿಮೆಯನ್ನು ಇದರಲ್ಲಿ ಮುಖ್ಯವಾಗಿ ಪ್ರಸ್ತಾಪಿಸಿದೆ. ಈ ಪುರಾಣದ ಕನ್ನಡ ಅನುವಾದವನ್ನು ಬಿದ್ದಿಯಂಡ ನಾಚಪ್ಪ ಅವರ ಕೋರಿಕೆಯಂತೆ 1864ರಲ್ಲಿ ಶ್ರೀನಿವಾಸ ಅಯ್ಯಂಗಾರ್ ಅವರು ಪೂರೈಸಿದರು.

### ಆರಂಭದ ಬರಹಗಾರರು

ಈ ಶತಮಾನದ ಆರಂಭದಲ್ಲಿ ಕೊಡಗಿನಲ್ಲಿ ಕನ್ನಡ ಮತ್ತು ಕೊಡವ–ಈ ಎರಡು ಭಾಷೆಗಳಲ್ಲೂ ಸಾಹಿತ್ಯ ರಚನೆಗೈಯಲು ಶ್ರಮಿಸಿದ ಹಲವಾರು ಹಿರಿಯ ಬರಹಗಾರರು ಕಂಡುಬರುತ್ತಾರೆ. ಅಂತಹ ಪ್ರಮುಖರಲ್ಲಿ 'ಕೊಡಗಿನ (ನಾಟಕ) ಕಲಾಪಿತಾಮಹ'ರೆಂದು ಕರೆಯಲ್ಪಟ್ಟ ಮಡಿಕೇರಿಯ ವೆಂಕಟಾದ್ರಿ ಶಾಮರಾವ್ ಒಬ್ಬರು. ಇವರು 1894 ರಿಂದ 1917 ರವರೆಗೆ ನಾಟಕ, ದೇವರನಾಮ, ಕಥೆ, ಗೌರಿಹಾಡು, ಪದ್ಯ, ಇತ್ಯಾದಿಗಳನ್ನು ರಚಿಸಿದ್ದು, 'ಸ್ವರ್ಣಗೌರಿಕಥೆ', 'ರತ್ನಾವಳಿ ಪರಿಣಯ', 'ಚಂದ್ರಹಾಸ', 'ಚಂಪಕಮಾಲಿನಿ ಪರಿಣಯ' ಮೊದಲಾದವು ಇವರ ಕೆಲವು ರಚನೆಗಳಾಗಿವೆ. ಮಡಿಕೇರಿ ತಾಲೂಕು ಕಡಗದಾಳು ಗ್ರಾಮದ ಡಾ|| ಕೊರವಂಡ ಅಪ್ಪಯ್ಯ ಅವರು ಮೈಸೂರು ಅರಮನೆಯ ವೈದ್ಯರೂ ಜಿಲ್ಲಾ ಸರ್ಜನ್ನರೂ ಆಗಿದ್ದು, ಕೊಡವ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಅಪಾರ ಸೇವೆ ಸಲ್ಲಿಸಿದವರು. ಇವರ ಕೃತಿಗಳೆಂದರೆ 'ನೀರಿನ ಜಲರತ್ನಾಕರ', 'ಗೋರಕ್ಷಣೆ', 'ಕೊಡಗರ ಕುಲಾಚಾರಾದಿ ತತ್ವೋಜ್ಜೀವಿನಿ', 'ಇಹಪರಗ್ರಂಥ', 'ಅಸ್ಥಿ ಪಂಜರ', 'ವ್ಯವಸಾಯ ಬೋಧಿನಿ', 'ಭಗವದ್ಗೀತೆ',ಇತ್ಯಾದಿ. 1887 ರಲ್ಲಿ ಪ್ರಕಟವಾದ ಇವರ 'ಕೊಡಗು ಲಿಪಿ'ಯು ಕೊಡವ ಭಾಷೆಗೊಂದು ಲಿಪಿಯನ್ನು ರಚಿಸಲೋಸುಗ ಬರೆಯಲಾದ ಮೊದಲನೇಯ ಪುಸ್ತಕವೆಂತಲೂ ಇವರನ್ನು ಕೊಡವ ಲಿಪಿ ಕಂಡುಹಿಡಿದ ಪ್ರಪ್ರಥಮ ವ್ಯಕ್ತಿಯೆಂತಲೂ ಕರೆಯಲಾಗಿದೆ. ಆದರೆ ಪ್ರಕಟಿತ ಕೊಡವ ಸಾಹಿತ್ಯವೆಲ್ಲ ಇಂದಿಗೂ ಕನ್ನಡ ಲಿಪಿಯಲ್ಲೇ ಇದೆ.

ಇದೇ ತಲೆಮಾರಿನ ಮತ್ತೋರ್ವ ಬರಹಗಾರರೆಂದರೆ 'ಕೊಡಗಿನ ಆದಿಕವಿ'ಯೆಂದು ಪ್ರಖ್ಯಾತರಾದ ಮಡಿಕೇರಿ ತಾಲೂಕು ಕಿರುಂದಾಡುವಿನ ಹರದಾಸ ಅಪ್ಪಚ್ಚಕವಿ. ಇವರು ಕೊಡವ ಭಾಷೆಯಲ್ಲಿ ನಾಲ್ಕು ನಾಟಕಗಳನ್ನು ರಚಿಸಿರುವರಲ್ಲದೆ, 'ಕೊಡಗು ನಾಪೋಕ್ಲುನಾಡು ಕಿರುಂದಾಡು ಗ್ರಾಮದ ಹರದಾಸ ಅಪ್ಪನೆರವಂಡ್ರ ಅಪ್ಪಚ್ಚ ಕವಿಯ ಜೀವಮಾನ ಚರಿತ್ರೆ' (1936) ಎಂಬ ಹೆಸರಿನಲ್ಲಿ ಕನ್ನಡ ಭಾಷೆಯಲ್ಲಿ ತಮ್ಮ ಆತ್ಮಕಥೆಯನ್ನು ಬರೆದುಕೊಂಡಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಇದು ಅಪ್ರಕಟಿತ. ಇದೇ ತಾಲೂಕು ಬೇಂಗೂರಿನ ನಡಿಕೇರಿಯಂಡ ಚಿಣ್ಣಪ್ಪ ಅವರು ಕೊಡವ ಭಾಷೆಯಲ್ಲಿ ಕೊಡವರ ಮೂಲ, ಬದುಕು ಮತ್ತು ಸಂಸ್ಕೃತಿಗಳನ್ನು ಕುರಿತ 'ಪಟ್ಟೋಲೆ ಪಳಮೆ' (1924) ಯನ್ನು ಪ್ರಕಟಿಸಿ ಪ್ರಸಿದ್ಧರಾಗಿರುವರು.

ಸಾರ್ವಜನಿಕ ಜೀವನದಲ್ಲಿ ಹೆಸರು ಮಾಡಿದ ಮೂರ್ನಾಡಿಗೆ ಸೇರಿದ ಪಾಂಡಂಡ ಮುತ್ತಣ್ಣ ಅವರು 'ಕೊಡಗಿನ ಕೈಪಿಡಿ',

1. ಕೊಡಗಿನ ಕಾಣಿಕೆ, ಪು. 52
2. ಕೆ. ವಿ. ಆಚಾರ್ (ಸಂ.) : ಕನ್ನಡದ ಜಾವಳಿಗಳು, ಪು. 146

'ಕುಲವೃದ್ಧಿ', 'ಸ್ವರ್ಗಮಾನ', 'ನಾಗರಿಕತೆಯ ಪರಿಣಾಮ', ಎಂಬ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕೊಡಗು ರಾಜರ ಕಾಲದಿಂದ ಕೊಡಗಿನಲ್ಲಿ ನಡೆದ ಕಾಂಗ್ರೆಸ್ ಚಳವಳಿಯವರೆಗಿನ ವೃತ್ತಾಂತವನ್ನು ಇವರು ತಮ್ಮ 'ಕೊಡಗಿನ ಕೈಪಿಡಿ'ಯಲ್ಲಿ ನಿರೂಪಿಸಿದ್ದು, ಇವೇ ಕೆಲವು ಸಂಗತಿಗಳನ್ನು ಸೇರಿಸಿ 'ಕೂರ್ಗ್ ಅಂಡ್ ಕೂರ್ಗ್ಸ್' ಎಂಬ ಗ್ರಂಥವನ್ನು ಇಂಗ್ಲಿಷ್‌ನಲ್ಲಿಯೂ ಹೊರತಂದಿರುವರು. ಬೆಟ್ಟತ್ತೂರು ಗ್ರಾಮದ ಅಪಾಡಂಡ ಗಣಪತಿ ಅವರು ಕನ್ನಡ ಮತ್ತು ಕೊಡವ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದು, 'ಕಲಿಕಾಲ ಕುಮ್ಮಾಯ', 'ಕೊಡವಡ ಆರಬೇರ ಪುರಾಣ', 'ಕೊಡವ ಮಹಾಪುರಾಣ', 'ಶಿವಭಕ್ತಿ ಸಾರ', 'ವಿಷ್ಣುಭಕ್ತಿ ಸ್ತೋತ್ರ', 'ನವೀನ ಕಲಿಸ್ತ್ರೀ ಮಹಿಮೆ' ಮೊದಲಾದವು ಇವರ ಬರಹಗಳಾಗಿವೆ. ಕೊಡಗು ವಿಧಾನ ಸಭೆಯ ಅಧ್ಯಕ್ಷರೂ ಕೊಡಗು ಕರ್ನಾಟಕ ಸಂಘದ ಸ್ಥಾಪಕರಲ್ಲೊಬ್ಬರೂ ಆಗಿದ್ದ ವೀರರಾಜಪೇಟೆ ತಾಲೂಕು ಮೈತಾಡಿಯ ಬಿದ್ದಂಡ ಸುಬ್ಬಯ್ಯ ಕುಶಾಲಪ್ಪ ಅವರು, ಕೊಡಗಿನ ಚಾರಿತ್ರಿಕ ಮತ್ತು ಜನಪದ ಕಥೆಗಳೆನಿಸಿದ 'ಓಂಕಾರೇಶ್ವರ', 'ಚೋನಿರ ಮುತ್ತಣ್ಣ', 'ಅಚ್ಚುನಾಯಕ', 'ಹೊನ್ನಮ್ಮನ ಕೆರೆ', 'ಕಲಿಯಾಟಂಡ ಅಜ್ಜಪ್ಪ', 'ಪನ್ನಂಗಾಲತ್ತಮ್ಮೆ' ಮುಂತಾದ ಕೃತಿಗಳನ್ನು ರಚಿಸಿರುವರು; ಭೂಗೋಳ ಮತ್ತು ವಿಜ್ಞಾನ ಕ್ಷೇತ್ರಗಳ ಬಗೆಗೂ ಇವರಿಂದ ಕೃತಿಗಳು ರಚಿಸಲ್ಪಟ್ಟಿವೆ. ಇದೇ ತಾಲೂಕು ಹಾಲಗುಂಪದ ತೇಲಪಂಡ ಎಂ. ಕಾರ್ಯಪ್ಪ ಆವರು 'ಸಂಪಿಗೆ' ಕವನ ಸಂಕಲನ, ಎರಡು ನಾಟಕಗಳು ಮತ್ತು 'ಐವತ್ತಾರು ಆಟಗಳು' ಎಂಬ ಮಕ್ಕಳ ಸಾಹಿತ್ಯ ಕೃತಿ—ಇವುಗಳನ್ನು ಪ್ರಕಟಿಸಿದ್ದರೆ, ಮಡಿಕೇರಿ ತಾಲೂಕು ಕರಡ ಗ್ರಾಮದ ನಡಿಕೇರಿಯಂಡ ಸುಬ್ಬಯ್ಯ ಅವರು ಸಹಾ ಅನೇಕ ಕಥೆ, ಕವನ ಮತ್ತು ನಾಟಕಗಳನ್ನು ರಚಿಸಿರುವರು.

### ಆಧುನಿಕ ಬರಹಗಾರರು

ಇಪ್ಪತ್ತನೇಯ ಶತಮಾನದಲ್ಲಿ ಹುಟ್ಟಿಕೊಂಡ ಈ ಜಿಲ್ಲೆಯ ಲೇಖಕರ ಕಾವ್ಯ, ನಾಟಕ, ಚರಿತ್ರೆ ಮತ್ತಿತರ ಗದ್ಯ ಕೃತಿಗಳು ಸಮಕಾಲೀನ ಶೈಲಿ, ವೈಶಿಷ್ಟ್ಯ ಹಾಗೂ ವಸ್ತುಗಳನ್ನೊಳಗೊಂಡಿದ್ದು, ಹಿರಿಯ ಮತ್ತು ಯುವ ತಲೆಮಾರಿನ ಕವಿಗಳು ಮತ್ತು ಲೇಖಕರ ಬರಹಗಳಲ್ಲಿ ಕಂಡುಬರುವ ಭಾಷೆ ಮತ್ತು ಶೈಲಿಗಳ ವ್ಯತ್ಯಾಸವನ್ನು ಗುರುತಿಸಲು ಸಹಕಾರಿಯಾಗಿವೆ. ಈ ಆಧುನಿಕ ಬರಹಗಾರರಲ್ಲಿ ಕೆಲವರು ತಮ್ಮ ಸಾಹಿತ್ಯಿಕ ಸಾಧನೆ ಮತ್ತು ಉತ್ಕೃಷ್ಟ ಕೃತಿ ರಚನೆಗಳಿಗಾಗಿ ಪ್ರಶಸ್ತಿಗಳನ್ನು ಮತ್ತು ಪುರಸ್ಕಾರಗಳನ್ನು ಗಳಿಸಿಕೊಂಡಿರುವರು. ಇಂತಹವರಲ್ಲಿ ಹಿರಿಯ ತಲೆಮಾರಿನ ಲೇಖಕರೂ 'ನವೀನ ಶಿಕ್ಷಕ' ವಾರಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದವರೂ ಆದ ಮಡಿಕೇರಿಯ ಜಿ. ಎಸ್. ಕೇಶವಾಚಾರ್ಯ (ಕೆ. ಶ್ರೀ. ಘಾಟ) ಅವರ ಕೊಡಗಿನ ರಾಜಪರಂಪರೆಯ ಪರಿಚಯ ನೀಡುವ 'ಕೊಡಗಿನ ಒಡೆಯರು' ಎಂಬ ಕೃತಿಗೆ ಕರ್ನಾಟಕ ಸರ್ಕಾರದ ಶಿಶು ಸಾಹಿತ್ಯದ ಬಹುಮಾನ ಸಂದಿದೆ. 'ಸಭ್ಯ ಯೋಧ ಜನರಲ್ ತಿಮ್ಮಯ್ಯ', 'ಇಬ್ಬರೂ ಘಾಟಿಗಳೇ' ಮತ್ತು 'ಕೊಡಗು ಜಿಲ್ಲಾ ದರ್ಶನ' ಇವರ ಇತರ ಕೃತಿಗಳು. ಕನ್ನಡದ ಅಗ್ರಗಣ್ಯ ಲೇಖಕರೂ ಕಾದಂಬರಿಕಾರರೂ ಆದ ಎಸ್. ಆರ್. ನಾರಾಯಣರಾವ್ (ಭಾರತೀಸುತ) ಅವರು ಮಡಿಕೇರಿ ತಾಲೂಕು ಬಿಳಿಗೇರಿಯವರಾಗಿದ್ದು, ಕಾದಂಬರಿ, ಸಣ್ಣಕಥೆ, ವ್ಯಕ್ತಿಚಿತ್ರ, ಅನುವಾದ, ಶಿಶುಸಾಹಿತ್ಯ, ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು 64 ಕೃತಿಗಳನ್ನು ಪ್ರಕಟಿಸಿರುವರು. ಕೊಡಗಿನ ಸಾಮಾಜಿಕ, ಚಾರಿತ್ರಿಕ ಮತ್ತು ಜಾನಾಂಗಿಕ ಹಿನ್ನೆಲೆಯಲ್ಲಿ ಇವರ ಕೆಲವು ಕಾದಂಬರಿಗಳು ಸೃಷ್ಟಿಯಾಗಿವೆ. ಇವರ 'ಗಿರಿಕನ್ಯಕಾ' ಮತ್ತು 'ಗಿಳಿಯು ಪಂಜರದೊಳಿಲ್ಲ' ಕಾದಂಬರಿಗಳಿಗೆ ಕ್ರಮವಾಗಿ 1967 ಮತ್ತು 1974ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳೂ 'ಹುಲಿಬೋನು', 'ಗಿರಿಕನ್ಯಕಾ' ಕಾದಂಬರಿಗಳು ಮತ್ತು 'ಚಿಂಬ ಹಿಡಿದ ಮೀನು' ಕಥಾಸಂಕಲನ—ಇವುಗಳಿಗೆ ರಾಜ್ಯ ಸರ್ಕಾರದ ಬಹುಮಾನಗಳೂ ಸಾಕ್ಷರರಿಗಾಗಿ ರಚಿಸಿದ 'ಸೊಳ್ಳೆ ಹರಡುವ ರೋಗಗಳು' ಕೃತಿಗೆ ಕೇಂದ್ರ ಸರ್ಕಾರದ ಬಹುಮಾನವೂ 'ಎಡಕಲ್ಲುಗುಡ್ಡದ ಮೇಲೆ' ಎಂಬ ಪ್ರಸಿದ್ಧ ಕಾದಂಬರಿಗೆ 'ಸುಧಾ ಕಾದಂಬರಿ ಸ್ಪರ್ಧೆ' ಬಹುಮಾನವೂ ಲಭ್ಯವಾಗಿವೆ. ಕೆ. ಸಚ್ಚಿದಾನಂದಯ್ಯ ('ಚಿರಂತನ'), ಎನ್. ಮಹಾಬಲೇಶ್ವರ ಭಟ್ ಮತ್ತು ಎಲ್. ಆರ್. ಭಟ್ ಅವರುಗಳು ಸಂಯುಕ್ತವಾಗಿ 1977ರಲ್ಲಿ 'ಭಾರತೀಸುತ'ರ ನೆನಪಿಗೆ 'ಬ್ರಹ್ಮಗಿರಿ' ಎಂಬ ಗ್ರಂಥವನ್ನು ಸಂಪಾದಿಸಿ ಹೊರತಂದಿದ್ದಾರೆ.

ಕೊಡಗಿನ ಸಾಹಿತ್ಯ ಪ್ರತಿಭೆಯನ್ನು ತಮ್ಮ ಕೃತಿಗಳ ಮೂಲಕ ವ್ಯಕ್ತಗೊಳಿಸಿರುವ ವೀರರಾಜಪೇಟೆ ತಾಲೂಕು ಮೈತಾಡಿ ಗ್ರಾಮದ ಡಾ॥ ಐ. ಮಾ. ಮುತ್ತಣ್ಣ ಅವರು ಸಂಶೋಧಕರೂ ಕವಿಗಳೂ ಆಗಿದ್ದು, 60 ಕ್ಕಿಂತಲೂ ಅಧಿಕ ಕೃತಿಗಳನ್ನು ಕನ್ನಡ, ಇಂಗ್ಲಿಷ್ ಮತ್ತು ಕೊಡವ ಭಾಷೆಗಳಲ್ಲಿ ಪ್ರಕಟಿಸಿದ್ದಾರೆ. 'ಲೋಕದರ್ಶನ', 'ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ', 'ಮುತ್ತಣ್ಣನ ಕವನಗಳು' (ಸಮಗ್ರ), 'ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ', 'ಕೂರ್ಗ್ ಮೆಮೊಯರ್ಸ್', 'ಎ ಹಿಸ್ಟರಿ ಆಫ್ ಕರ್ನಾಟಕ', 'ಟಿಪ್ಪುಸುಲ್ತಾನ್ ಎಕ್ಸ್‌ರೇಡ್' ಮೊದ

ಲಾದವು ಇವರು ರಚಿಸಿರುವ ಗಮನಾರ್ಹ ಕೃತಿಗಳು. ಜನರಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರುಗಳ ಜೀವನಚರಿತ್ರೆಗಳು ಮತ್ತು 'ಕೊಡವ ಕನ್ನಡ ನಿಘಂಟು' ಇವರ ಇತರ ಮುಖ್ಯ ಪ್ರಕಟಣೆಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇವರ ಕಾವೇರಿ ನಾಟಕ ಕೃತಿಗೆ 1967ರ ಸಾಲಿನ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ. ಕೊಡಗಿನ ಚರಿತ್ರೆ ಕುರಿತು ಆಳವಾದ ವ್ಯಾಸಂಗ ನಡೆಸಿದವರಲ್ಲಿ ವೀರರಾಜಪೇಟೆಯ ಡಿ. ಎನ್. ಕೃಷ್ಣಯ್ಯ ಅವರು ಪ್ರಮುಖರಾಗಿದ್ದು, ಇವರ 'ಕೊಡಗಿನ ಇತಿಹಾಸ'ವು ಸರ್ವಾದರಣೀಯ ಸಂಶೋಧನಾತ್ಮಕ ಬೃಹತ್ ಕೃತಿಯೆನಿಸಿದೆ. ಇವರು ಪ್ರಕಟಿಸಿರುವ ಹಲವಾರು ವಿದ್ವತ್ಪೂರ್ಣ ಲೇಖನಗಳು ಕೊಡಗು ಚರಿತ್ರೆಯ ವಿವಿಧ ಘಟನೆಗಳನ್ನು ಆಧರಿಸಿವೆಯಲ್ಲದೆ, 'ಸುಂದರ ನಾಡು ಕೊಡಗು' ಎಂಬ ಪರಿಚಯಾತ್ಮಕ ಕೃತಿ, 'ವೀರರಾಜ ವಿಜಯ' ಮತ್ತು 'ನಾಗಪ್ಪಯ್ಯನ ಒಳಸಂಚು' ಎಂಬ ಕಾದಂಬರಿಗಳೂ ಇವರ ಲೇಖನಿಯಿಂದ ಮೂಡಿಬಂದಿವೆ. ಕೊಡಗಿನ ಚರಿತ್ರೆ ಕುರಿತ ಆಕರ ಕೃತಿ 'ಕೊಡಗು ಸಂಸ್ಥಾನದ ರಾಜೇಂದ್ರನಾಮೆ'ಯನ್ನು ಎಂ. ಎಸ್. ಸುಬ್ಬರಾಯರೊಡನೆ ಸಂಪಾದಿಸಿ ಕೃಷ್ಣಯ್ಯ ಪ್ರಕಟಿಸಿದ್ದಾರೆ. ಹಾಗೆಯೇ, ವೀರರಾಜಪೇಟೆ ತಾಲೂಕು ಬೆಸಗೂರಿನ ಬಾಚಮಾಡ ಡಿ. ಗಣಪತಿ ಅವರು ಸ್ವಾತಂತ್ರ್ಯಯೋಧರೂ ಪತ್ರಕರ್ತರೂ ಆಗಿದ್ದು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 40ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ, ಕೊಡವ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇವರು ಸಾಹಿತ್ಯ ಕೃಷಿ ನಡೆಸಿರುವರು. ಕೊಡವರ ಸಂಸ್ಕೃತಿ, ಸಂಪ್ರದಾಯ ಮತ್ತು ಜೀವನ ವೈಶಿಷ್ಟ್ಯಗಳನ್ನು ಕುರಿತ 'ಕೊಡಗು ಮತ್ತು ಕೊಡವರು' ಎಂಬ ಇವರ ಗ್ರಂಥಕ್ಕೆ ರಾಜ್ಯ ಸರ್ಕಾರ ಮತ್ತು ಲೋಕ ಶಿಕ್ಷಣ ವಿಶ್ವಸ್ಥ ನಿಧಿ ಬಹುಮಾನಗಳೂ ಶಾಸ್ತ್ರೀಯ ಸಾಹಿತ್ಯ ಪ್ರಕಾರದಲ್ಲಿ ಗುರುತಿಸಲ್ಪಟ್ಟ 'ಸತ್ಯಶೋಧನೆ' ಎಂಬ ಕೃತಿಗೆ 1974ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆತಿವೆ. 'ಕೊಡವರು : ಜೀವನ ಪದ್ಧತಿಗಳು' ಎಂಬ ಇವರ ಗ್ರಂಥವು ಕೊಡವ ಜನಾಂಗ, ಸಂಸ್ಕೃತಿ, ಭಾಷೆ, ಸಾಹಿತ್ಯ, ಇತ್ಯಾದಿಗಳ ಪರಿಚಯವನ್ನು ಸಮಗ್ರವಾಗಿ ಮಾಡಿಕೊಡುತ್ತದೆ. 'ಕಾವೇರಿ' ಎಂಬುದು ಗಣಪತಿ ಅವರ ಅಧ್ಯಾತ್ಮಿಕ ನಾಟಕ ಕೃತಿಯಾಗಿದ್ದು, ಕೊಡಗಿನ ಸಾಹಿತ್ಯಲೋಕದ ಶ್ರೇಷ್ಠ ಕೃತಿಗಳಲ್ಲೊಂದೆಂದು ವಿಮರ್ಶಕರಿಂದ ಗುರುತಿಸಲ್ಪಟ್ಟಿದೆ.*

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆಯಲ್ಲಿ ಸಿದ್ಧಹಸ್ತರಾಗಿರುವ ಮಡಿಕೇರಿಯ ಜಿ. ಟಿ. ನಾರಾಯಣರಾವ್ ಅವರು, ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಖಗೋಳ ವಿಜ್ಞಾನದಲ್ಲಿ ವಿಶೇಷ ಕೆಲಸ ಮಾಡಿರುವರು. 'ನಕ್ಷತ್ರ ಲೋಕ', 'ಇನ್ನೊಂದು ಆಯಾಮ', 'ಮಾನವ ಚಂದ್ರನ ಮೇಲೆ', 'ಕೊಪರ್ನಿಕಸ್', 'ವೈಜ್ಞಾನಿಕ ಮನೋಧರ್ಮ', 'ಜಾತಕ ಮತ್ತು ಭವಿಷ್ಯ', 'ವನಸುಮ', 'ಕೊಡಗಿನ ಕಥೆಗಳು', 'ಎನ್.ಸಿ.ಸಿ. ದಿನಗಳು' ಮೊದಲಾದವು ಇವರ ರಚನೆಗಳು. 'ಆಲ್ಬರ್ಟ್ ಐನ್‌ಸ್ಟೈನ್' ಮಹಾಕೃತಿಗೆ ಪ್ರೊ|| ಸ. ಸ. ಮಾಳವಾಡ ಪ್ರಶಸ್ತಿ ಮತ್ತು 'ಬಲವಿಜ್ಞಾನ ತತ್ವಗಳು' ಎಂಬ ಅನುವಾದ ಕೃತಿಗೆ 1975ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೆ, ಇವರ ವಿಜ್ಞಾನ ಸಾಹಿತ್ಯ ಸೇವೆಗೆ ಪ್ರೊ|| ದೇಜಗೌ ಟ್ರಸ್ಟಿನ ವಿಶ್ವಮಾನವ ಪ್ರಶಸ್ತಿಯೂ ಸಂದಿವೆ.

ವಿದ್ವಾನ್ ತಲಕಾವೇರೀ ನಾರಾಯಣಾಚಾರ್ಯ (ಟಿ. ಪಿ. ನಾರಾಯಣಾಚಾರ್ಯ) ಅವರು ಕಾವೇರಿಯನ್ನು ಕುರಿತ ಮೂಲ ಸಂಸ್ಕೃತದ ಕೃತಿಯನ್ನು 'ಶ್ರೀ ಸ್ಕಾಂದಪುರಾಣಾಂತರ್ಗತ ಶ್ರೀ ಕಾವೇರೀ ಮಹಾತ್ಮ್ಯೆ' ಎಂಬ ಹೆಸರಿನಲ್ಲಿ ಅಚ್ಚಗನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವರು. ಇದಲ್ಲದೆ, ಶ್ರೀ ಕಾವೇರಿ, ಉಡುಪಿ ಶ್ರೀಕೃಷ್ಣ, ಸುಬ್ರಹ್ಮಣ್ಯ, ಧರ್ಮಸ್ಥಳ, ಭಗಂಡೇಶ್ವರ ದೇವರುಗಳ ಸುಪ್ರಭಾತಗಳೂ ಇವರಿಂದ ರಚಿತವಾಗಿವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿದ ಅಬ್ದುಲ್ ಗಫೂರ್‌ಖಾನ್ ಅವರು ವೀರರಾಜಪೇಟೆ ತಾಲೂಕು ಬಿಳುಗುಂದದವರಾಗಿದ್ದು, 'ಕೊಡಗರೂ ಅರಬಿಯವರೂ' ಎಂಬ ವಿಚಾರಾತ್ಮಕ ಗ್ರಂಥವನ್ನು ರಚಿಸಿರುವರು. ಬಲಮುರಿಯ ಕೆ. ಪಿ. ಮುತ್ತಣ್ಣ ಅವರು ಪ್ರಕಟಿಸಿರುವ 'ಜಗತ್ತಿಗೊಂದೇ ಕೊಡಗು' ಎಂಬುದು ಕೊಡಗಿನ ಪರಿಚಯ ನೀಡುವ ಕೃತಿ. 'ಬಲಮುರಿ ಕೋಟೇರ ಕುಟುಂಬದ ಸಂಕ್ಷೇಪ ಚರಿತ್ರೆ' ಎಂಬುದೂ ಇವರ ಇನ್ನೊಂದು ಪುಸ್ತಕ. ಬಾಚೆಟ್ಟೀರ ಅಪ್ಪಯ್ಯ ಅವರು 'ದಕ್ಷಿಣ ಕಾಶಿ ಕಾವೇರಿ ಮಹಾತ್ಮೆ' ಕೃತಿ ಮತ್ತು ಮಡಿಕೇರಿಯ ಪುಲಿಯಂಡ ಐಯ್ಯಪ್ಪ ಅವರು 'ದೇವದತ್ತ' ಕಾದಂಬರಿಗಳನ್ನು ಹೊರ ತಂದಿರುವರು.

ಕೊಡಗಿನ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರಾದ ವಿ. ಎಸ್. ರಾಮಕೃಷ್ಣ ಅವರು ವೀರರಾಜಪೇಟೆ ತಾಲೂಕು ಕೈಕೇರಿಯವರಾಗಿದ್ದು, ಕನ್ನಡ ಮತ್ತು ಕೊಡವ ಭಾಷೆಗಳಲ್ಲಿ ಹಲವಾರು ಉತ್ಕೃಷ್ಟ ಕೃತಿಗಳನ್ನು ರಚಿಸಿರುವರು. ಇವರು ಬರೆದ 'ಶ್ರೀರಾಮಚರಿತಾಮೃತಂ' (ಕುಶಲರಾಮಾಯಣ) 2,600

* ವಿ. ಎಸ್. ರಾಮಕೃಷ್ಣ : 'ಕೊಡಗಿನ ಆರು ಮಹಾಕೃತಿಗಳು', ಕನ್ನಡ ಕಾವೇರಿ – ಸ್ಮರಣ ಸಂಚಿಕೆ, ಪು. 110–111

ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡ ಮಹಾಕಾವ್ಯವಾಗಿದ್ದರೆ, 'ಶ್ರೀ ರಾಘವೇಂದ್ರ ವಿಜಯ', 'ಶ್ರೀ ಕಾವೇರಿ ವಿಜಯ', 'ಶ್ರೀ ಸದ್ಗುರು ಅಪ್ಪಯ್ಯ ವಿಜಯ' – ಇವು ವಾರ್ಧಕ ಷಟ್ಪದಿಯಲ್ಲಿಯ ಇವರ ಇತರ ರಚನೆಗಳಾಗಿವೆ. ಕೊಡಗಿನ ಸಾಹಿತ್ಯ ಚಟುವಟಿಕೆ ಮತ್ತು ಬೆಳವಣಿಗೆಗಳನ್ನು ಕುರಿತು ಹಲವಾರು ಉಪಯುಕ್ತ ಲೇಖನಗಳನ್ನು ಪ್ರಕಟಿಸಿರುವುದು ಮತ್ತು ಬಿ. ಡಿ. ಗಣಪತಿ ಅವರ ಅಧ್ಯಾತ್ಮಿಕ ನಾಟಕ 'ಕಾವೇರಿ', ಎಡುರ್ಕಳ ಶಂಕರನಾರಾಯಣಭಟ್ಟರ 'ಶ್ರೀ ಕಾವೇರಿ ವೈಭವ', ಅಪ್ಪಚ್ಚ ಕವಿವರ್ಯರ 'ಶ್ರೀ ಮೂಲ ಕಾವೇರಿ ನಾಟಕ', ಡಿ. ಎನ್. ಕೃಷ್ಣಯ್ಯ ಅವರ 'ಕೊಡಗಿನ ಇತಿಹಾಸ', ಐ. ಮಾ. ಮುತ್ತಣ್ಣ ಅವರ 'ಮುತ್ತಣ್ಣನ ಕವನಗಳು' ಹಾಗೂ ಮೈ. ಶೇ. ಅನಂತಪದ್ಮನಾಭರಾವ್ (ಕವಿ ಕಪ್ಪಣ್ಣ) ಅವರ 'ಶ್ರೀಕೃಷ್ಣ ಚರಿತ್ರಾಮೃತಂ' – ಇವುಗಳನ್ನು ಕೊಡಗಿನ ಆರು ಮಹಾಕೃತಿಗಳೆಂದು ಗುರುತಿಸಿ ಕೊಟ್ಟಿರುವುದು ಇವರ ವಿಶಿಷ್ಟತೆ. ಶ್ರೀ ಕಾವೇರಿಯನ್ನು ಕುರಿತು ಒಂದು ವಿಶ್ವಕೋಶದಂತಿರುವುದೆಂದು ಪರಿಗಣಿಸಲಾಗಿರುವ ಮತ್ತು ತಲಕಾವೇರಿಯಿಂದ ಕಾವೇರಿ ಪೂಂಪಟ್ಟಣದ ತನಕ ನಡೆದು ಸಾಗಿ ನದಿ ತೀರದಲ್ಲಿರುವ ಪುಣ್ಯಕ್ಷೇತ್ರಗಳೊಡನೆ ಕಾವೇರಿ ಮಾತೆಯ ಲೌಕಿಕ ಮತ್ತು ಅಧ್ಯಾತ್ಮಿಕ ವೈಭವಗಳನ್ನು ವಿವರವಾಗಿ ತಿಳಿಸುವ 'ಶ್ರೀ ಕಾವೇರಿ ವೈಭವ' ಕೃತಿಯನ್ನು ರಚಿಸಿರುವವರು ಭಾಗಮಂಡಲದ ಎಡುರ್ಕಳ ಕೆ. ಶಂಕರನಾರಾಯಣ ಭಟ್ಟ ಅವರು; ಧಾರ್ಮಿಕ ಸಾಹಿತ್ಯ ರಚನಾಕುಶಲರು. ಇವರು ಸಹಾ ಕಾವೇರಿ ಪುರಾಣವನ್ನು ಕನ್ನಡಕ್ಕೆ ಅನುವಾದಿಸಿದ್ದು, ತಮ್ಮ ಕೃತಿಯಲ್ಲಿ ಸೇರಿಸಿರುವರು. ಇದಲ್ಲದೆ, 'ಶ್ರೀ ಕಾವೇರಿ ದರ್ಶನ', 'ಶ್ರೀ ಕಾವೇರಿ ಮಹಾತ್ಮೆ', 'ಮಹರ್ಷಿ ಯಾಜ್ಞವಲ್ಕ್ಯ', 'ವಿಚಾರದೀಪಿಕೆ', ಇತ್ಯಾದಿ ಕೃತಿಗಳನ್ನೂ ಸನಾತನ ವೈದಿಕ ಧರ್ಮ ಮತ್ತು ಸಂಸ್ಕೃತಿಯ ಮುಖಗಳನ್ನು ಸಮರ್ಥವಾಗಿ ಪರಿಚಯಿಸುವ 'ಹಿಂದೂಧರ್ಮದ ಪರಿಚಯ' ಎಂಬ ಬೃಹತ್ ಗ್ರಂಥವನ್ನೂ ಇವರು ರಚಿಸಿ ಪ್ರಕಟಿಸಿದ್ದಾರೆ.

ಮಡಿಕೇರಿ ತಾಲೂಕು ಪೆರಾಜೆಯ ಡಾ|| ಕೆ. ಕುಶಾಲಪ್ಪ ಗೌಡ ಅವರು ಪ್ರಸಿದ್ಧ ಭಾಷಾವಿಜ್ಞಾನಿಯಾಗಿದ್ದು, ದಕ್ಷಿಣ ಕನ್ನಡದ ಪುತ್ತೂರು ಮತ್ತು ಸುಳ್ಯಗಳಲ್ಲಿ ಮತ್ತು ಮಡಿಕೇರಿಯ ಸುತ್ತಲಿನ ಕೆಲವು ಭಾಗಗಳಲ್ಲಿ ಬಳಕೆಯಲ್ಲಿರುವ ಗೌಡ ಜನಾಂಗದವರ ಆಡುನುಡಿ ಅಥವಾ ಅರೆಗನ್ನಡದ ಬಗೆಗೆ 'ಗೌಡ ಕನ್ನಡ' ಎಂಬ ಗ್ರಂಥವನ್ನು ಇಂಗ್ಲಿಷ್‌ನಲ್ಲಿಯೂ 'ಕನ್ನಡ, ತಿಗುಳ ಕನ್ನಡ ಮತ್ತು ಸಮಾಜ' ಎಂಬ ಗ್ರಂಥವನ್ನು ಕನ್ನಡದಲ್ಲಿಯೂ ರಚಿಸಿರುವರು. 'ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ' ಎಂಬ ಕೃತಿ ಮುಂತಾದ ವಿದ್ವತ್ ಗ್ರಂಥಗಳನ್ನೂ ರಚಿಸಿರುವರು. ಇವರು 1987ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಶಾಂತಳ್ಳಿ ಗ್ರಾಮದವರೂ ಪತ್ರಿಕೋದ್ಯಮಿ, ವಿದ್ವಾಂಸ ಮತ್ತು ಗಮಕಿಗಳಾಗಿ ಪ್ರಸಿದ್ಧಿ ಹೊಂದಿದವರೂ ಆದ ಬಿ.ಎಸ್. ಗೋಪಾಲಕೃಷ್ಣ ಅವರು ಆಯುರ್ವೇದ ಚಿಕಿತ್ಸಾ ವಿಧಾನವನ್ನು ಕುರಿತ 'ಸರಳ ಚಿಕಿತ್ಸೆ', 'ರತ್ನಗರ್ಭ','ಸೊಡರು', ಭಗವದ್ಗೀತೆಯ ಬಗೆಗಿನ ವ್ಯಾಖ್ಯಾನವನ್ನು ಒಳಗೊಂಡ 'ಸತ್ಯದರ್ಶನ' ಹಾಗೂ ಮಹಾಭಾರತದ ಕುರಿತು ವ್ಯಾಪಕ ಸಾಹಿತ್ಯರಚನೆ ಮಾಡಿದ್ದಾರೆ.

ಕೊಡಗಿನ ಪ್ರಾಕ್ಚರಿತ್ರೆಯನ್ನಲ್ಲದೆ, ಆ ಜಿಲ್ಲೆಯ ಶಾಸನ, ಶಿಲ್ಪ, ಜನಾಂಗ, ಸಂಸ್ಕೃತಿ, ಇತ್ಯಾದಿ ಸಂಗತಿಗಳನ್ನು ನಿರೂಪಿಸುವ 'ಆರ್ಕಿಯಾಲಜಿ ಆಫ್ ಕೂರ್ಗ್' ಎಂಬ ಸಂಶೋಧನ ಕೃತಿಯನ್ನು ಇಂಗ್ಲಿಷ್‌ನಲ್ಲಿ ರಚಿಸಿರುವವರು ಪುರಾತತ್ತ್ವಜ್ಞರಾದ ಡಾ|| ಕೆ. ಕೆ. ಸುಬ್ಬಯ್ಯ ಅವರು ; ಇವರು ವೀರರಾಜಪೇಟೆ ತಾ|| ಬಿರುನಾಣಿಯವರು. ಇವರು ಕೊಡವರ ಮೂಲದ ಕುರಿತು ಹಲವಾರು ಪ್ರಬಂಧಗಳನ್ನು ಪ್ರಕಟಿಸಿರುವರಲ್ಲದೆ, ಸೋಮವಾರಪೇಟೆಯ ಹೆಗ್ಗಡೆಹಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ದೊರೆತ ಪ್ರಾಚ್ಯಾವಶೇಷಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಆ ಕುರಿತು ಅಮೂಲ್ಯ ಮಾಹಿತಿ ಒದಗಿಸಿದ್ದಾರೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಹಾಗೂ ಖ್ಯಾತ ಪುರಾತತ್ತ್ವ ಶಾಸ್ತ್ರಜ್ಞರಾದ ಡಾ|| ಕೆ. ಪಿ. ಪೂಣಚ್ಚ ಅವರು ಇದೇ ತಾಲೂಕಿನ ಆರ್ಜಿ ಗ್ರಾಮದವರು. ಕೊಡಗಿನ ವೈಶಿಷ್ಟ್ಯಗಳನ್ನು ಮತ್ತು ಬೇಟೆಯ ಕಥೆಗಳನ್ನು ರೋಚಕ ಮತ್ತು ಹೃದಯಂಗಮ ಶೈಲಿಯಲ್ಲಿ ನಿರೂಪಿಸುವಲ್ಲಿ ಸಿದ್ಧಹಸ್ತರಾಗಿರುವವರು ಇದೇ ತಾಲೂಕು ಬೆಸಗೂರಿನ ಬಿ. ಡಿ. ಸುಬ್ಬಯ್ಯ ('ಕಾಕೆಮಾನಿ') ಅವರು. 'ಬಿಲ್ಲು ಬಾಣ–ಕಥಾಗುಚ್ಛ', 'ಕೊಡಗಿನ ಇತಿಹಾಸ ಪುಟಗಳಿಂದ' ಎಂಬ ಕಥಾಸಂಕಲನಗಳು ಹಾಗೂ ಅನೇಕ ಇತರ ಗ್ರಂಥಗಳನ್ನು ಇವರು ಪ್ರಕಟಿಸಿರುವರು. ಉತ್ತಮ ಕಥೆಗಾರರೆನಿಸಿರುವ ವೀರರಾಜಪೇಟೆಯ ಕ.ಶಂ. ಕರುಣಾಕರನ್ ಅವರು ಕನ್ನಡದಲ್ಲಿ ಮಕ್ಕಳ ಕಾದಂಬರಿ, ವೈಜ್ಞಾನಿಕ ಹಾಗೂ ಮನೋವೈಜ್ಞಾನಿಕ ಕಾದಂಬರಿಗಳನ್ನು ಬರೆದಿದ್ದಾರೆ. ಮಲೆಯಾಳಂ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸಿರುವ ಇವರ ಕಥಾಸಾಹಿತ್ಯವು 'ದಕ್ಷಿಣ ಭಾಷಾ ಕಥಾಮಂಜರಿ–ಭಾಗ 2' ಮತ್ತು 'ಮಲೆಯಾಳಂ ಕಥೆಗಳು' ಎಂಬ ಕೃತಿಗಳಲ್ಲಿ ಸಂಗ್ರಹಗೊಂಡಿದೆ.

ಭಾರತದ ನಿವೃತ್ತ ಮಹಾದಂಡನಾಯಕ ಫೀಲ್ಡ್‌ಮಾರ್ಷಲ್ ಕೆ. ಎಂ. ಕಾರ್ಯಪ್ಪ ಅವರು ವೃತ್ತಪತ್ರಿಕೆಗಳಲ್ಲಿ ಹಲವಾರು ಇಂಗ್ಲಿಷ್ ಲೇಖನಗಳನ್ನು ಪ್ರಕಟಿಸಿರುವರಲ್ಲದೆ, 'ಕಾಲ್ ಟು ಯೂತ್' ಎಂಬ ಪುಸ್ತಿಕೆಯನ್ನೂ ಹೊರತಂದಿರುವರು. ಎಂ. ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮ ಕಾರ್ಯಪ್ಪ ಅವರುಗಳು ಸಂಯುಕ್ತವಾಗಿ ಬರೆದಿರುವ 'ದಿ ಕೂರ್ಗ್ಸ್ ಅಂಡ್ ದೆಯರ್ ಆರಿಜಿನ್', ಪಿ. ಎಂ. ಮುತ್ತಣ್ಣ ಅವರ 'ಕೂರ್ಗ್ ಅಂಡ್ ಕೂರ್ಗ್ಸ್' ಮತ್ತು ಬಿಟ್ಟಂಗಾಲದ ಸಿ. ಎಂ. ಕುಶಾಲಪ್ಪ ಅವರ 'ಒರಿಜಿನ್ ಆಫ್ ದಿ ಕೂರ್ಗ್ಸ್'— ಇವು ಕೊಡವ ಜನಾಂಗ, ಭಾಷೆ, ಸಂಸ್ಕೃತಿ ಇತ್ಯಾದಿಗಳ ಬಗೆಗೆ ವಿವರಗಳನ್ನು ಒದಗಿಸುವ ಇಂಗ್ಲಿಷ್ ಕೃತಿಗಳು. ಪಿ. ಎಂ. ಚಂಗಪ್ಪ ಅವರು ಕನ್ನಡದಲ್ಲಿ ರಚಿಸಿರುವ 'ಶ್ರೀ ಕಾವೇರಿ (ದಕ್ಷಿಣಗಂಗೆ) ಕ್ಷೇತ್ರ ವರ್ಣನೆ' ಕೃತಿಯು ಕೊಡಗು ಮತ್ತು ಜನತೆಯ ಸಂಕ್ಷಿಪ್ತ ವಿವರಣೆ, ಕಾವೇರಿಯ ಪೌರಾಣಿಕ ಹಿನ್ನೆಲೆ, ಆ ಕ್ಷೇತ್ರದ ವರ್ಣನೆ, ಇತ್ಯಾದಿಗಳನ್ನು ಒಳಗೊಂಡಿದೆ. ಅಂತೆಯೇ, ಸಿ. ಎನ್. ಮುತ್ತಣ್ಣ ಅವರ 'ಕೊಡಗು ಪ್ರಾಂತದ ಮುಂದಿನ ಆಡಳಿತ ವ್ಯವಸ್ಥೆ' (1934) ಎಂಬ ಪುಸ್ತಕವು ಕೊಡಗಿನ ಆಡಳಿತ ಮತ್ತು ರಾಜಕೀಯ ಹಿನ್ನೆಲೆಗಳನ್ನು ವಿವೇಚಿಸುವ ಪುಸ್ತಕವಾಗಿದೆ. 'ಬೆಡಗಿನ ನಾಡು ಕೊಡಗು' ಪುಸ್ತಕವನ್ನು ಹಾತೂರಿನಲ್ಲಿದ್ದ ಶ್ರೀಪತಿರಾವ್ ಫಲಿನಾರ್ಕರ್ ಅವರು ರಚಿಸಿದರು. ಇವರ ಅನೇಕ ವಿನೋದಾತ್ಮಕ ಲೇಖನಗಳೂ ಪ್ರಕಟವಾಗಿವೆ. ಆಧ್ಯಾತ್ಮಿಕ ಸಾಧನೆಯ ಹಿನ್ನೆಲೆಯಲ್ಲಿ ವೀರರಾಜಪೇಟೆಯ ಶ್ರೀಕಾವೇರಿ ಭಕ್ತಜನ ಸಂಘ ಮತ್ತು ಶ್ರೀಕಾವೇರಿ ಆಶ್ರಮಗಳ ಸ್ಥಾಪನೆಗೆ ಕಾರಣಕರ್ತರಾದ ಕಲ್ಲುಮಾಡ ಗ್ರಾಮದ ಶ್ರೀ ಪಳಂಗಂಡ ಅಪ್ಪಯ್ಯಸ್ವಾಮಿಗಳು ತಮ್ಮ ಆತ್ಮಕಥನವನ್ನು ರಚಿಸಿರುವುದನ್ನೂ ಇಲ್ಲಿ ಪ್ರಸ್ತಾಪಿಸಬಹುದು. ಈ ಕಥನದೊಡನೆ ಸ್ವಾಮಿಗಳವರ ರಚನಾತ್ಮಕ ಕಾರ್ಯಗಳನ್ನು ಕುರಿತ ವೃತ್ತಾಂತವನ್ನು ಒಳಗೊಂಡ ಲೇಖನಗಳನ್ನು ಎರಡನೇಯ ಭಾಗವಾಗಿ ಸೇರಿಸಿ ಕುಯ್ಯಂಡ ಕಾಳಯ್ಯ ಅವರು 'ಶ್ರೀ ಸದ್ಗುರು ಅಪ್ಪಯ್ಯಸ್ವಾಮಿಯವರ ಆತ್ಮಕಥೆ ಮತ್ತು ಸಂದೇಶ' ಎಂಬ ಕೃತಿಯನ್ನು ಹೊರತಂದಿರುವರು. ಕೊಡಗು ಮೂಲ ನಿವಾಸಿಗಳ ಹಕ್ಕು ಸಂರಕ್ಷಣಾ ಸಮಿತಿಗಾಗಿ ಕಲ್ಯಾಟಂಡ ಬೋಪಯ್ಯ ಗಣಪತಿ ಅವರು ಹೊರತಂದಿರುವ 'ಕೊಡಗಿನ ಜಮ್ಮ ಕರ್ನಾಟಕ ಸರ್ಕಾರಕ್ಕೆ ಒಂದು ಎಚ್ಚರಿಕೆ' ಎಂಬ ಪುಸ್ತಕವನ್ನೂ ಇಲ್ಲಿ ಗಮನಿಸಬಹುದಾಗಿದೆ.

ಗಮನಾರ್ಹ ಲೇಖಕರಲ್ಲಿ ಪೆರಾಜೆಯ ಎಂ. ಬಿ. ಶಿವರಾಯರೂ ಒಬ್ಬರಾಗಿದ್ದು, ಇವರು ಪ್ರಬಂಧ, ಕವನ ಮತ್ತು ಕಥೆಗಳನ್ನು ರಚಿಸಿದ್ದಾರೆ. 'ನೆರಳಡಿಯಲ್ಲಿ', 'ಬಳ್ಳಿ', 'ಪುಷ್ಪ ಮಂದಿರ', 'ರಸನಿಧಿ', 'ಹೊಂಗನಸುಗಳು' ಮೊದಲಾದವು ಇವರ ಪುಸ್ತಕಗಳು. 'ಸಮಾಧಿ ನಿರ್ಣಯ' ಎಂಬುದು ಭಾಗಮಂಡಲದ ಸ್ವಾಮಿ ಆನಂದತೀರ್ಥ ಅವರು ಹೊರತಂದ ಬಂಗಾಲಿ ಮೂಲದ ಕೃತಿಯ ಕನ್ನಡಾನುವಾದ. 'ಗುರುಗಳೊಡನೆ ಸಂವಾದ', 'ದುಃಖಾರ್ತರು', 'ರಾಜಾಜಿಯವರ ಭಾಷಣಗಳು' ಮುಂತಾದ ಆರು ಕೃತಿಗಳನ್ನು ರಚಿಸಿದ ಆಡಮನೆ ಪಳತಡಕಸುಬ್ಬಯ್ಯ ಅವರೂ ಭಾಗಮಂಡಲದವರು. ಪತ್ರಿಕೋದ್ಯೋಗಿಯೂ ಲೇಖಕರೂ ಆದ ವೀರರಾಜಪೇಟೆಯ ಕೆ. ಗೋವಿಂದರಾಯರು 'ಗೋರಾ' ಎಂಬ ಕಾವ್ಯನಾಮದಿಂದ ಪ್ರಸಿದ್ಧಿ ಹೊಂದಿದ್ದು, 'ಬಾಪೂರವರ ಅಮರಕಥೆ'ಯನ್ನೂ 'ಪ್ರೇಮಬಲಿ', 'ತಪಸ್ಸಿದ್ಧಿ' ಮುಂತಾದ ನಾಟಕಗಳನ್ನೂ ಬರೆದರು. 'ಭಾರತದ ಸಂವಿಧಾನ ಶಿಲ್ಪಿ ಅಂಬೇಡ್ಕರ್' ಎಂಬುದು ಕೆದಮುಳ್ಳೂರಿನ ಸಿ.ಎಚ್. ಜಾಕೋಬ್ ಲೋಬೋ ಅವರ ಕಾಣಿಕೆ. ಇವರು ಡಾ|| ಜಿ. ಎಸ್. ಲೋಖಂಡೆ ಅವರ ಇಂಗ್ಲಿಷ್ ಕೃತಿಯನ್ನು 'ಭೀಮ್‌ರಾವ್ ರಾಮ್‌ಜೀ ಅಂಬೇಡ್ಕರ್ – ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಅಧ್ಯಯನ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಲುಗುಂದದ ಟಿ. ಯಂ. ಕಾರ್ಯಪ್ಪ ಅವರು 'ಸಂಪಿಗೆ (ಚಂಪಕಮಾಲಾ)' ಎಂಬ ಕವನ ಸಂಗ್ರಹ ಪ್ರಕಟಿಸಿದ್ದು, ಟಿ. ಕೆ. ಮುತ್ತಣ್ಣ ಅವರೊಡನೆ ಅದೇ ಹೆಸರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಕವನ ಸಂಗ್ರಹವನ್ನೂ ಹೊರತಂದಿರುವರು. ಮಲೆಯಾಳ ಭಾಷಾಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಸೋಮವಾರಪೇಟೆ ತಾ|| ಕೊಟಾರಿ ಎಸ್ಟೇಟ್‌ನ ಕೋವರಕೊಲ್ಲಿ ಕರುಣಾಕರ ಅವರ ಪ್ರಯತ್ನವು ಗಮನಾರ್ಹ. ಹಾಗೆಯೇ, ಕುವೆಂಪು ಅವರ ಕಾದಂಬರಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಕಾರ್ಯವನ್ನು ಪೊನ್ನಂಪೇಟೆಯ ಹೆಚ್. ಆರ್. ಕೃಷ್ಣಯ್ಯ ಅವರು ಮಾಡಿದ್ದಾರೆ. 'ಹಾರುವ ತಟ್ಟೆಗಳ ಲೋಕದಲ್ಲಿ' ಎಂಬ ವೈಜ್ಞಾನಿಕ ಕಥೆಯುಳ್ಳ ಕೃತಿಯನ್ನು ಪ್ರಕಟಿಸಿದ ಗಾಳಿಬೀಡಿನ ಕೆ.ಎ. ತಂಗವೇಲು, 'ಸ್ತೋತ್ರ ಸಿಂಧೂರ'ವನ್ನು ಸಂಯುಕ್ತವಾಗಿ ಹೊರತಂದಿರುವ ಕೆ.ಪಿ. ಗೋಪಾಲಕೃಷ್ಣ ಭಟ್ ಮತ್ತು ಜಿ. ಯದುಮಣಿ, ಜೇನು ಕೃಷಿ ಕುರಿತ ಕೈಪಿಡಿ ಮತ್ತು ಲೇಖನಗಳನ್ನು ರಚಿಸಿರುವ ಮಡಿಕೇರಿಯ ಬೊ.ಮಾ. ಮುತ್ತಪ್ಪ, 'ಸತ್ಯಾನ್ವೇಷಣೆ' ಮತ್ತು 'ಮನೋರಂಜನೆ' ಕೃತಿಗಳ ಕರ್ತೃ ಕೊಳುವದಂಡ ಉತ್ತಪ್ಪ, 'ದಿವ್ಯಜೀವನ-ಭವ್ಯಮಾನವ' ಪುಸ್ತಕವನ್ನು ಬರೆದ ನೋಟನಾಳಿರ ಸೋಮಯ್ಯ, 'ಜ್ಞಾನಸುಧಾ' ಕರ್ತೃ ಅಜ್ಜಮಾಡ ಡಿ. ಮುಂದಣ್ಣ, 'ಮಹಾನಾರಿ ನಾಳಾಯಿನಿ' ಕಾವ್ಯ ಮತ್ತು 'ವಿಚಿತ್ರಾ' ಕಾದಂಬರಿಗಳನ್ನು ಹೊರತಂದ ಡಿ. ವಿಷ್ಣು

ಭಟ್, 'ಸವಿಯ ಸರಸ' ಕೃತಿಯನ್ನು ಪ್ರಕಟಿಸಿದ ಕೆ.ಎಸ್. ನಾರಾಯಣಮೂರ್ತಿ ಮೊದಲಾದವರೂ ಗಮನೀಯರಾದ ವರು. ಜಿ. ಯದುಮಣಿ ಅವರ 'ಮಡಿಕೇರಿ ತಾಲೂಕು ದರ್ಶನ'ವು ಉಪಯುಕ್ತವಾದ ಕೃತಿ.

ಇವರೇ ಅಲ್ಲದೇ, ಪತ್ರಿಕೋದ್ಯೋಗಿಯಾಗಿಯೂ ಕಥೆಗಾರ ರಾಗಿಯೂ ಪ್ರಸಿದ್ಧರಾದ ವೀರರಾಜಪೇಟೆಯ ಟಿ. ಎ. ಮದುರೆಸೆಟ್ಟಿ, ಕಥೆಗಾರ ಕೆ. ಎ. ಲಿಂಗಪ್ಪ, ವೀರರಾಜಪೇಟೆಯ ಮತ್ತೊಬ್ಬ ಪತ್ರಿಕೋದ್ಯೋಗಿ ಮತ್ತು ಕಥೆಗಾರ ಕೆ. ಸಿ. ಉತ್ತಯ್ಯ, ಅದೇ ತಾಲೂಕು ಪಾಲಂಗಾಲದ ಕವಿ ತಿಮ್ಮಯ್ಯ ಕೆ. ಪಾಲಕಂಡ, ಸಾಹಿತ್ಯ ಮತ್ತು ವಿಜ್ಞಾನ ಬರಹಗಳನ್ನು ಪ್ರಕಟಿಸಿರುವ ನಾಪೋಕ್ಲು ವಿನ ಕೆ. ಬಿ. ಐಯ್ಯಪ್ಪ, ಕೊಡಗು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದ ಮಡಿಕೇರಿಯ ಲೇಖಕ ಎಚ್. ಟಿ. ದೇವರಾಜ, ಕೆ. ಸಿ. ಭೀಮಯ್ಯ, ನಾಟಕ ವಿಮರ್ಶೆ ಮತ್ತು ಸಣ್ಣಕಥೆಗಳ ಹೆಚ್. ವಿ. ರಘು, 'ಪೂರಾನಾ' ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪತ್ರಿಕೋ ದ್ಯೋಗಿ ಮತ್ತು ಲೇಖಕ ಪಿ. ಆರ್. ನಾರಾಯಣರಾವ್, ಕವನ ಮತ್ತು ಕಥಾಸಂಕಲನಗಳನ್ನೂ ಸಂಪಾದಿತ ಕೃತಿ ಗಳನ್ನೂ ಹೊರತಂದಿರುವ ಬಲಮುರಿಯ ಬಿ. ಈ. ಶೇಷಾದ್ರಿ, ಕೊಡಗಿನ ವಿವಿಧ ವಿಷಯಗಳನ್ನು ಮತ್ತು ಸಮಸ್ಯೆಗಳನ್ನು ಕುರಿತು ವಿಚಾರಪೂರಿತ ಲೇಖನಗಳನ್ನು ಪ್ರಕಟಿಸಿರುವ ಹಾಗೂ ಹಿರಿಯ ಮತ್ತು ಯುವತಲೆಮಾರುಗಳನ್ನು ಪ್ರತಿನಿಧಿ ಸುವ ಶ್ರೀ ವಿವೇಕಾನಂದ ಶರಣ ಸ್ವಾಮೀಜಿ, ಕೆ. ಎ. ಕಾಶಿಯಪ್ಪ, ಡಾ|| ಐ. ಆರ್. ಅಶ್ರಣ್ಣ, ಎಂ. ಪಿ. ತಿಮ್ಮಪ್ಪ, ಮುಚ್ಚಂಡ ಸೋ. ಮುತ್ತಪ್ಪ, ಪುಗ್ಗೇರ ಎಂ. ಕರುಂಬಯ್ಯ, ಬಿ. ಸಿ. ಪೊನ್ನಪ್ಪ, ಕೆ. ಎ. ಸೋಮಣ್ಣ, ಪಿ. ಕೆ. ಚಂಗಪ್ಪ, ಸಿ. ಎಂ. ಚರಮಣ್ಣ, ಕೆ. ಎಸ್. ಚಂಗಪ್ಪ, ಐ. ಕೆ. ಬಿದ್ದಪ್ಪ, ಕೆ. ಸಿ. ಉತ್ತಯ್ಯ, ಐನಂಡ ಧನಂಜಯ, ಹಾಡ್ಲಹಳ್ಳಿ ನಾಗರಾಜು, ಫಾ|| ವಿನ್ಸೆಂಟ್ ಫರ್ನಾಂಡೀಸ್, ಕೆ. ಸಿ. ರಾಮಮೂರ್ತಿ, ಜೆ. ರಾಜಗೋಪಾಲರಾವ್, ಕೆ. ಬಿ. ಡಾಲ್, ಪಿ. ಷಣ್ಮುಖಪ್ಪ, ಎಂ. ಪಿ. ಕೃಷ್ಣರಾಜು, ಮೂಕಚಂಡ ಬಿ. ಅಪ್ಪಣ್ಣ (ಅರುಣ), ಎನ್. ಎಸ್. ನಾರಾಯಣ, ಕೊ. ರಾ. ರವೀಂದ್ರ, ಬಲ್ಯಮೀದೇರಿರ ಸುಬ್ರಮಣಿ ಮೊದಲಾದವರು ಮುಖ್ಯರೆನಿಸಿದ್ದಾರೆ.

ಕನ್ನಡ ಭಾಷೆ, ಸಾಹಿತ್ಯ ಮತ್ತು ಪತ್ರಿಕಾ ರಂಗಗಳಿಗೆ ಲೇಖನ, ಕವನ, ನಾಟಕ, ಇತ್ಯಾದಿಗಳನ್ನು ರಚಿಸುವ ಮೂಲಕ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಕೆಲವು ಮುಸ್ಲಿಂ ಬರಹ ಗಾರರಲ್ಲಿ ಮಡಿಕೇರಿಯ ಬಿ.ಎ. ಹಸನಬ್ಬ, ಬಿ.ಎ. ಷಂಶು ದ್ದೀನ್, ಲಿಯಾಕತ್ ಅಲಿ, ಇ.ಎಸ್. ಗಫೂರ್, ಇ. ಸುಲೇ ಮಾನ್ ಶೇಕ್, ಸಂಪಾಜೆಯ ಜಬ್ಬಾರ್ ಸಮೊ, ಸೋಮ ವಾರಪೇಟೆಯ ಸಯ್ಯದ್ ಗೌಸ್ ಮತ್ತು ರವೂಫ್ ಬೇಗ್, ತಣ್ಣೀರುಹಳ್ಳದ ಅಬ್ದುಲ್ ರಹಿಮಾನ್ ಮುಸಲಿಯಾರ್, ಶನಿವಾರಸಂತೆಯ ಅಬ್ದುಲ್ ರಹೀಂ, ಕೊಡ್ಲಿಪೇಟೆಯ ಮೊಹಮ್ಮದ್ ಗೌಸ್ ಮತ್ತಿತರರನ್ನು ಪ್ರಸ್ತಾಪಿಸಬಹುದು. ಶಿಕ್ಷಣತಜ್ಞರೂ ವಿಚಾರವಾದಿಗಳೂ ವಾಗ್ಮಿಗಳೂ ಆಗಿ ಪ್ರಸಿದ್ಧ ರಾಗಿರುವ ಸೋಮವಾರಪೇಟೆಯ ಪಿ.ಆರ್.ಬಷೀರ್ಅಹಮದ್ ಅವರು ಶಿಕ್ಷಣ, ಭಾಷೆ, ಸಮಾಜ, ಧರ್ಮ, ರಾಷ್ಟ್ರೀಯ ಭಾವೈಕ್ಯತೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಬರಹಗಳನ್ನು ಪ್ರಕಟಿಸಿದ್ದಾರೆ.

ಕೊಡಗಿನ ಯುವಪೀಳಿಗೆಯ ಬರಹಗಾರರು ಹೊಸ ಧೋರಣೆಗಳ ಜಾಡಿನಲ್ಲಿ ಕೃತಿಗಳನ್ನು ರಚಿಸಿ ಪ್ರಕಟಿಸಿರುವು ದುಂಟು. ವೀರರಾಜಪೇಟೆಯ ಐ.ಆರ್. ಪ್ರಮೋದ್ ಅವರು ಹೊರತಂದಿರುವ 'ನಕ್ಸಲ್‌ವಾದದ ಬೇರುಗಳು' ಕೃತಿಯು ಎಡಪಂಥೀಯ ವಿಚಾರಗಳನ್ನು ಕುರಿತದ್ದು. ಕೊಡಗಿನ ಲೇಖಕರು ಮತ್ತು ಕಲಾವಿದರ ಸಂಘಟಕರಾದ ಮಡಿಕೇರಿಯ ಟಿ. ಕೆ. ತ್ಯಾಗರಾಜ್ ಅವರು ಕೊಡಗಿನ ಸಾಂಸ್ಕೃತಿಕ ಮತ್ತು ಭಾಷಿಕ ಹಿನ್ನೆಲೆಯೊಡನೆ ಪ್ರಚಲಿತ ಸಮಸ್ಯೆಗಳ ಬಗೆಗೆ ಬರೆ ದಿರುವ ಲೇಖನಗಳು ವಿಮರ್ಶಾತ್ಮಕವಾಗಿವೆ. ಕಥೆ, ಕವನ ಮತ್ತು ಕಾದಂಬರಿಗಳು ಇವರಿಂದ ರಚಿಸಲ್ಪಟ್ಟಿವೆ. ಪತ್ರಕರ್ತ ರಾದ ಜಿ. ಯದುಮಣಿ, ಚಿದ್ವಿಲಾಸ್ ಮತ್ತು ಜಿ. ರಾಜೇಂದ್ರ ಅವರುಗಳು ಪ್ರಕಟಿಸಿರುವ ವಿಮರ್ಶೆಗಳೂ ಲೇಖನಗಳೂ ಈ ದಿಸೆಯಲ್ಲಿ ಗಮನಾರ್ಹವಾದುವು. ಸುಂಟಿಕೊಪ್ಪದ ಅಬ್ದುಲ್ ರಷೀದ್ ಪ್ರತಿಭಾನ್ವಿತ ಬರಹಗಾರರಾಗಿದ್ದು, ಕಥಾ ಸಂಕಲನ ವನ್ನೂ ಬ್ಯಾರಿ ಭಾಷೆಯ ಬಗೆಗೆ ವಿಶೇಷ ಲೇಖನವನ್ನೂ ಬೆಳಕು ಕಾಣಿಸಿದ್ದಾರೆ. 'ಹಕ್ಕಿ ಹಾಡುತಿದೆ' ಮತ್ತು 'ಕನ್ನಡ ಜ್ಯೋತಿ' ಕವನ ಸಂಕಲನಗಳನ್ನೂ 'ಭಾರತಮಾತೆಯ ಮಕ್ಕಳು' ಮತ್ತು 'ನಮ್ಮ ಭಾರತ' ಶಿಶುಗೀತೆಗಳ ಸಂಗ್ರಹ ಗಳನ್ನೂ ಹೊರತಂದಿರುವ ಶ.ಚಂ. ರಾಜಶೇಖರ ಅವರೂ ಶನಿವಾರಸಂತೆಯವರು. ಶಿಲ್ಪಿ, ಚಿತ್ರಗಾರ ಮತ್ತು ಕವಿಗಳಾದ ಕಿರಣ್ ಸುಬ್ಬಯ್ಯ ಅವರು ಸಹಾ ಕೊಡವ ಭಾಷಾ ಲಿಪಿ ಯನ್ನು ರೂಪಿಸಿದ್ದು, ಇದರಲ್ಲಿ 35 ಮುಖ್ಯಾಕ್ಷರಗಳೂ 25 ಅರ್ಧಾಕ್ಷರಗಳೂ ಇವೆ; ಅಲ್ಲದೆ, 336 ಕಾಗುಣಿತಾಕ್ಷರಗಳೂ ಸೇರಿ ಒಟ್ಟು 396 ಅಕ್ಷರಗಳಿವೆ.

ಇವರಲ್ಲದೆ, ಮಡಿಕೇರಿಯ ಕೊಡಕಂಡಿರ ಎ. ಪೊನ್ನಪ್ಪ, ಎಂ. ಶ್ರೀಧರ ಹೂವಲ್ಲಿ, ಲೈನ್ಕಜೆ ರಾಮಚಂದ್ರ, ಬಿ. ಶೇಷಪ್ಪ,

ಡಿ. ಆರ್. ನಾಗಪ್ಪಗೌಡ, ಡಾ॥ ದಯಾನಂದ ಪ್ರಭು, ಡಿ. ಬಿ. ಲಕ್ಷ್ಮೀನಾರಾಯಣ, ಗುರುದೇವ್ ಕೊಪ್ಪ, ಜಿ. ವಿಶ್ವನಾಥ್, ಮಡಿಕೇರಿ ಕೇಶವ, ರಾಜನ್ ಮಡಿಕೇರಿ, ಕೆ. ಪಿ. ಬಾಲಸುಬ್ರಹ್ಮಣ್ಯ, ವೇಣುಕಿಶೋರ್, ಹೆಚ್. ಎಂ. ಶಿವಾನಂದ, ಎಸ್. ಕೇಶವಮೂರ್ತಿ, ಡಾ॥ ಸುಧೀರ್‌ಶೆಟ್ಟಿ, ಡಾ॥ ನಡುಬೈಲು ಉದಯಶಂಕರ, ಪಿ.ಆರ್. ಮಂಜುನಾಥ್, ಡಿ. ಎಸ್. ಕೃಷ್ಣಾಚಾರ್, ಡಾ॥ ಸೂರ್ಯಕುಮಾರ್, ನಾರಾಯಣ ಭ. ಮೂಲಿಮನಿ, ಟಿ. ಎ. ನಾರಾಯಣಸ್ವಾಮಿ ನಾಯ್ಡು, ಚೆಂಬಾಂಡ ಬಿ. ಚಿಣ್ಣಪ್ಪ (ಶಿವಿ), ಕೆ. ವಿ. ವೀರಣ್ಣ, ಪಿ. ಎನ್. ವೆಂಕಟಾಚಲಶೆಟ್ಟಿ, ಎ. ಟಿ. ಸದೆಬೋಸ್, ಕ. ಗೋ. ಚಂದ್ರಶೇಖರಾಚಾರಿ, ವೈ. ಎಸ್. ಗೋಪಾಲರಾವ್, ಎಸ್. ಪುಟ್ಟರಾಜು, ತೊರೆನೂರು ಪ್ರೇಮಕುಮಾರ್, ಕಗ್ಗೋಡ್ಲಿನ ಪೂ. ರಾ. ಶ್ರೀನಿವಾಸ್, ಸಿ. ಎನ್. ಸುರೇಶ್, ಮದೆಗ್ರಾಮದ ಸಿ. ಬಿ. ರಾಮಚಂದ್ರ ಮೊದಲಾದವರು.

ವೀರರಾಜಪೇಟೆಯ ದೇವರಾಯ ಯು. ನಾಯಕ, ಬಿ. ಎಸ್. ಮನು ಶೆಣೈ, ಬಿ. ಜಿ. ರಘುನಾಥ ನಾಯಕ್, ಸೋಮಶೇಖರ ಮ. ವಾಲಿ, ತಿ. ರಾ. ನಾರಾಯಣ, ಆರ್. ಶಿವಪ್ರಸಾದ್, ನಾಗೇಶ್, ಪಿ. ಕೆ. ಎ. ಲತೀಫ್ ಕುರುಪನ್, ಗಣೇಶ್ ನಾಯ್ಡು, ಆರ್.ಸಿ. ದೇವರಾಜ್, ಮುರವಂಡ ಎಂ. ಪ್ರಕಾಶ್, ಬಿ. ಶೀನಪ್ಪ, ಸ್ಟ್ಯಾನ್ಲಿ ವಾಜ್, ಕೆ. ರಂ. ಗೋಪಾಲ, ಹೆಚ್. ರಾಮಕೃಷ್ಣ, ಚೆಟ್ಟಳ್ಳಿಯ ಪಿ. ಜಿ. ಅಂಬೆಕಲ್ ಮೊದಲಾದವರು; ಸೋಮವಾರಪೇಟೆಯ ಭಾರದ್ವಾಜ್, ಹಾ. ತಿ. ಜಯಪ್ರಕಾಶ್, ಬಿ. ಎಸ್. ರಾಘವೇಂದ್ರ, ಪಿ. ಎಂ. ಮುತ್ತಣ್ಣ, ನೆಂ. ಪು. ಕೃಷ್ಣಭಟ್ಟ, ಹಾ. ರಾ. ಕೇಶವಮೂರ್ತಿ, ಎಂ. ಎಸ್. ಶೇಖರ್, ಜ್ಞಾನೇಶ್ವರ, ನ. ಲ. ವಿಜಯ, ಹಾನಗಲ್ಲಿನ ಜಲ. ಕಾಳಪ್ಪ, ಸುಂಟಿಕೊಪ್ಪದ ಬಿ. ಸಿ. ದಿನೇಶ್‌ರಾವ್, ಬೆಸೂರಿನ ಮೋಹನ್ ಕಾಳೇಗಾರ್, ಮಾದಾಪುರದ ಯು. ಎಸ್. ರೇಣುಕಾರಾಧ್ಯ, ತೋಳೂರು ಶೆಟ್ಟಳ್ಳಿಯ ಸಿ. ಕೆ. ಮಲ್ಲಪ್ಪ, ಮಡಿಕೇರಿಯ ಕಾಯಪಂಡ ಸಿ. ದೇವಯ್ಯ, ವಾಲ್ನೂರು ಗ್ರಾಮದ ಬಿ. ಆರ್. ಶಶಿಧರ್, ಕೆ. ಬಿ. ನಾಚಪ್ಪ, ಸೋಮವಾರಪೇಟೆಯ ಕೆ. ಟಿ. ರಾಮಾಚಾರ್ಯ ಮೊದಲಾದವರು ಯುವತಲೆಮಾರಿನ ಪ್ರಾತಿನಿಧಿಕ ಕವಿಗಳೂ ಕಥೆಗಾರರೂ ಬರಹಗಾರರೂ ಆಗಿರುವರು.

ಕೊಡಗಿನ ಭೌಗೋಳಿಕ, ಚಾರಿತ್ರಿಕ, ಭಾಷಿಕ, ಸಾಮಾಜಿಕ, ಆರ್ಥಿಕ, ಇತ್ಯಾದಿ ಪರಿಸ್ಥಿತಿಗಳನ್ನು ಕುರಿತು ವಿಶೇಷ ವ್ಯಾಸಂಗ ನಡೆಸಿರುವ ಕೆಲವು ಸಂಶೋಧಕರು, ತಮ್ಮ ಅಧ್ಯಯನದ ಮೂಲಕ ಇಲ್ಲಿಯ ಸ್ಥಿತಿಗತಿಗಳ ಅಧಿಕೃತ ಚಿತ್ರಣ ನೀಡಲೆತ್ನಿಸಿರುವರು. ಅಂತಹವರಲ್ಲಿ, 1931ರಷ್ಟು ಹಿಂದೆಯೇ, ಕೊಡಗು ಮತ್ತು ಹಾಲೇರಿ ಅರಸರನ್ನು ಕುರಿತ 'ಕೂರ್ಗ್ ಅಂಡ್ ಇಟ್ಸ್ ರೂಲರ್ಸ್' ಎಂಬ ಸಂಪ್ರಬಂಧವನ್ನು ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಬಿ. ಜಿ. ಕಂಠಿ ಅವರ ಪ್ರಯತ್ನ ಇಲ್ಲಿ ಉಲ್ಲೇಖನೀಯ. ಉತ್ಸಾಹಿ ಯುವ ಸಂಶೋಧಕರು ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚಾಗಿ ಕಾರ್ಯಪ್ರವೃತ್ತರಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಮಡಿಕೇರಿಯ ಟಿ. ಪಿ. ವಿಜಯ್ ಅವರು 1800 ರಿಂದ 1947 ರ ಅವಧಿಯ ಕೊಡಗಿನ ಜಮ್ಮ ಪದ್ಧತಿ ಮತ್ತು ಸಮಾಜೋ–ಆರ್ಥಿಕ ಬದಲಾವಣೆಗಳನ್ನೂ ಅದೇ ತಾಲೂಕು ಬಿಟಗೇರಿಯ ಕೆ. ಸಿ. ಯತೀಶ್‌ಕುಮಾರ್ ಅವರು 1840 ರಿಂದ 1910 ರವರೆಗೆ ಕೊಡಗಿನ ಭೂ ಹಿಡುವಳಿ ಮತ್ತು ಸಾಮಾಜಿಕ ಪರಿವರ್ತನೆಯನ್ನೂ ಕುರಿತು ಅಧ್ಯಯನ ನಡೆಸಿರುವರು. ಕೊಡಗಿನ ಕಾಫಿ ತೋಟಗಳ ಹಿನ್ನೆಲೆಯಲ್ಲಿ ಅಲ್ಲಿಯ ಸಮಾಜೋ-ಆರ್ಥಿಕ ಪರಿಸ್ಥಿತಿಗಳ ಬಗೆಗೆ ವೀರರಾಜಪೇಟೆಯ ಕೆ. ಎಂ. ಲೋಕೇಶ್ ಅವರು ಮಾಡಿರುವ ಅಧ್ಯಯನವು 1834 ರಿಂದ 1947ರ ವರೆಗಿನ ಕಾಲಾವಧಿಯನ್ನು ಒಳಗೊಂಡಿದೆ. ಕೊಡಗಿನ ಕಾದಂಬರಿ ಸಾರ್ವಭೌಮರೆಂದು ಕರೆಸಿಕೊಂಡ ಎಸ್. ಆರ್. ನಾರಾಯಣರಾವ್ (ಭಾರತೀಸುತ) ಅವರ ಕಾದಂಬರಿಗಳಲ್ಲಿಯ ಪ್ರಾದೇಶಿಕತೆಯನ್ನು ಕುರಿತು ಮರಗೋಡಿನ ಪಿ. ಎಂ. ಸುಬ್ರಹ್ಮಣ್ಯ ಅವರು ಸಂಪ್ರಬಂಧವನ್ನು ಸಿದ್ಧಪಡಿಸಿರುವರು. ಇವರಲ್ಲದೆ, ಎನ್. ಪ್ರಭಾಕರ್ ಅವರು ಉತ್ತರ ಮಲಬಾರ್ ಮತ್ತು ಕೊಡಗಿನ ದೇವತೆಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ.

ಕೊಡಗಿನಲ್ಲಿಯೇ ಹುಟ್ಟಿ ಸಾಹಿತ್ಯ ರಚನೆಯಲ್ಲಿ ತೊಡಗಿದವರೇ ಅಲ್ಲದೆ, ಬೇರೆಡೆಯಿಂದ ಇಲ್ಲಿಗೆ ಬಂದು ನೆಲಸಿದ ಮತ್ತು ಬೇರೆ ಜಿಲ್ಲೆಯಲ್ಲಿದ್ದು ಇಲ್ಲಿಯ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸೇವೆ ಸಲ್ಲಿಸಿದ ಹಲವಾರು ಪ್ರಮುಖ ಬರಹಗಾರರು ಇರುವರು. ಅಂತಹವರಲ್ಲಿ, ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನ ಪ್ರಥಮ ಭಾರತೀಯ ಮುಖ್ಯೋಪಾಧ್ಯಾಯರಾಗಿದ್ದ ಹಿರಿಯ ತಲೆಮಾರಿನ ಪ್ರಸಿದ್ಧ ಕವಿ ಪಂಜೆ ಮಂಗೇಶರಾಯರು ಗಮನಾರ್ಹರು. ಕೊಡಗಿನ ಬೆಡಗನ್ನು ಬಣ್ಣಿಸುವ 'ಹುತ್ತರಿಹಾಡು' ಜನಪ್ರಿಯ ಪದ್ಯಗಳಲ್ಲೊಂದು. ಮಡಿಕೇರಿಯಲ್ಲಿಯೇ ಇದ್ದ ಓಡ್ಲಮನೆ ಆತ್ಮಾರಾಮಶಾಸ್ತ್ರಿ (ವಿದ್ಯಾವಾಚಸ್ಪತಿ) ಅವರು ತ್ರಿಭಾಷಾ ವಿದ್ವಾಂಸರಾಗಿದ್ದು, 'ಸತ್ವಸಂಜೀವಿನಿ' (2 ಭಾಗಗಳು) ಮೊದಲಾದ ಕೃತಿಗಳನ್ನು ಸಂಸ್ಕೃತದಲ್ಲಿಯೂ 'ಹಿಂದೂವ್ರತವಿವೇಕ', 'ಸಂಕ್ಷೇಪ ಗೀತಾ',

'ಶ್ರೀಕೃಷ್ಣಚರಿತ್ರಾಮೃತ' ಮೊದಲಾದವನ್ನು ಕನ್ನಡದಲ್ಲಿಯೂ ಅನೇಕ ಲೇಖನಗಳನ್ನು ಮರಾಠಿಯಲ್ಲಿಯೂ ಬರೆದರು. 'ಲೋಕಪಾವನ' ಪತ್ರಿಕೆಯ ಉಪಸಂಪಾದಕರೂ 'ಸ್ವಾಮಿ ದಯಾನಂದ ಸರಸ್ವತಿ', 'ಉಮಾಸುಂದರಿ', 'ದೊಡ್ಡವೀರ ರಾಜ', 'ಚೌರಿರ ಅಪ್ಪಣ್ಣ ದಿವಾನ' ಮೊದಲಾದ ಗ್ರಂಥಗಳ ಕರ್ತೃವೂ ಆದ ಬಿ. ಎನ್. ಕೃಷ್ಣಮೂರ್ತಿ ಅವರು ಮಡಿಕೇರಿಯಲ್ಲಿದ್ದವರು. 'ಕೊಡಗು ನಾಡ ಚರಿತ್ರೆ' ಎಂಬ ಕೃತಿ, ಕೊಡಗಿನ ಶಾಸನಗಳು ಮತ್ತು ಸಾಹಿತ್ಯ ಕೃತಿಗಳನ್ನು ಕುರಿತ ಲೇಖನಗಳು, ಇತ್ಯಾದಿಯನ್ನು ಇವರು ಪ್ರಕಟಿಸಿದ್ದಾರೆ. ಕೊಡಗಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದು, ಅನೇಕ ಉತ್ಕೃಷ್ಟ ಗ್ರಂಥಗಳನ್ನು ರಚಿಸಿದ ಶ್ರೇಷ್ಠ ಗಮಕಿ ಮ್ಯೆ. ಶೇ. ಅನಂತಪದ್ಮನಾಭರಾವ್ (ಕವಿ ಕಪ್ಪಣ್ಣ) ಅವರು ಸಹಾ ಮಡಿಕೇರಿಯಲ್ಲಿದ್ದರು. 1950ರ ಸಾಲಿನ ದೇವರಾಜ ಬಹದ್ದೂರ್ ಪ್ರಥಮ ಬಹುಮಾನ ಗಳಿಸಿದ 'ತುಳಸೀದಾಸ ರಾಮಾಯಣ', ವಾರ್ಧಕ ಷಟ್ಪದಿ ಕಾವ್ಯವಾದ 'ಶ್ರೀಮನ್ಮಧ್ವಚರಿತ ಮಾನಸ', 'ಶ್ರೀಕೃಷ್ಣ ಚರಿತಾಮೃತಂ', 'ಕಾವೇರಿ ಕಥಾಮೃತಂ', 'ಕರ್ಣ' ಮೊದಲಾದ ಪ್ರಸಿದ್ಧ ಕೃತಿಗಳನ್ನು ಅವರು ಹೊರತಂದರು. ಸಣ್ಣ ಕಥೆಗಳನ್ನೂ ಹಬ್ಬಗಳ ವಿಚಾರ, ಇತ್ಯಾದಿ ವಿಷಯಗಳನ್ನೂ ಒಳಗೊಂಡಂತೆ ಸುಮಾರು ಹತ್ತು ಕೃತಿಗಳನ್ನು ರಚಿಸಿದ ಎ. ಕೃಷ್ಣಮೂರ್ತಿ, ಮಕ್ಕಳ ಕಥೆಗಳನ್ನು ಬರೆದ ಯು. ಎಂ. ಕೃಷ್ಣರಾಯರು, ಧಾರ್ಮಿಕ ವಿಚಾರಗಳನ್ನು ಕುರಿತು ಸಾಕಷ್ಟು ಲೇಖನಗಳನ್ನು ಮತ್ತು 'ಭಗವದ್ಗೀತೆ'ಯ ಕನ್ನಡ ಅನುವಾದವನ್ನು ಪ್ರಕಟಿಸಿರುವ ವೀರರಾಜಪೇಟೆಯ ಕೋರಿಕ್ಕಾರು ಕೇಶವಭಟ್, ಭಕ್ತಿ ಪ್ರಧಾನವಾದ ಹಲವಾರು ಗ್ರಂಥಗಳನ್ನು ಹೊರತಂದ 'ಭಕ್ತಪ್ರಶಾಂತ, ಕವಿತಾ ಭಕ್ತ' ಕೆ. ಕೆ. ಭಕ್ತಾ ಮೊದಲಾದವರ ಸಾಹಿತ್ಯ ಸೇವೆಯೂ ಪರಿಗಣನಾರ್ಹ.

ವೀರರಾಜಪೇಟೆ ತಾಲೂಕು ಬಾಳೆಲೆ ಗ್ರಾಮದಲ್ಲಿದ್ದ ಎಚ್. ಶಂಕರನಾರಾಯಣ ಭಟ್ ಅವರು ಬರೆದ 'ಕೊಡವ ಭಾಷೆಯ ವ್ಯಾಕರಣ' ಗ್ರಂಥವು, ಕೊಡವ ಭಾಷೆಯ ವ್ಯಾಕರಣದ ಸಮಗ್ರ ಸ್ವರೂಪವನ್ನು ಸಂಜ್ಞಾ ಪ್ರಕರಣದಿಂದ ವಾಕ್ಯ ರಚನೆಯ ವರೆಗಿನ ಒಂಭತ್ತು ಪ್ರಕರಣಗಳಲ್ಲಿ ಸ್ಪಷ್ಟವಾಗಿ ನಿರೂಪಿಸುವ ಮಹತ್ವಪೂರ್ಣ ಕೃತಿಯಾಗಿದೆ. ಇವರ ಹಲವಾರು ಉತ್ತಮ ರಚನೆಗಳಲ್ಲಿ ವಾರ್ಧಕ ಷಟ್ಪದಿಯಲ್ಲಿ ಸುಮಾರು 1,500 ಪದ್ಯಗಳುಳ್ಳ ಕಾವೇರಿಯನ್ನು ಕುರಿತ ಕಾವ್ಯಕೃತಿಯೂ ಒಂದು. ಕಥೆ, ವಿಮರ್ಶೆ, ಸಂಶೋಧನೆ, ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೃತಿಗಳನ್ನೂ ಲೇಖನಗಳನ್ನೂ ಪ್ರಕಟಿಸಿರುವ ಪ್ರೊ|| ಕೆ. ರಾಮಕೃಷ್ಣ ಉಡುಪ ಅವರೂ ಗಮನಾರ್ಹ ಬರಹಗಾರರೆನಿಸಿರುವರು. ಕೊಡಗಿಗೆ ಸಂಬಂಧಿಸಿದಂತೆ ನವಸಾಕ್ಷರರಿಗಾಗಿ ಬರೆದ 'ಕೊಡವ ನಾನು ಕೊಡಗು ನಾಡು' ಎಂಬ ಪ್ರಶಸ್ತಿ ವಿಜೇತ ಪುಸ್ತಕವನ್ನೂ 'ಕ್ರಾಂತಿಯ ಕಿಡಿ ಕಲ್ಯಾಣಸ್ವಾಮಿ' ಎಂಬ ಕಥಾಸಂಕಲನವನ್ನೂ ಇನ್ನಿತರ ಕೃತಿಗಳನ್ನೂ ಹೊರತಂದವರು ಕೆ. ಸಚ್ಚಿದಾನಂದಯ್ಯ (ಚಿರಂತನ) ಅವರು. ಎನ್. ಮಹಾಬಲೇಶ್ವರ ಭಟ್ಟ ಅವರು ಎಸ್. ಆರ್. ನಾರಾಯಣರಾವ್ (ಭಾರತೀಸುತ) ಅವರೊಡನೆ ಸಂಪಾದಿಸಿ ಕೊಟ್ಟ 'ಕೊಡಗಿನ ಬರಹಗಾರರು' ಪುಸ್ತಿಕೆಯು ಕೊಡಗಿನ ಸುಮಾರು 73 ಲೇಖಕ–ಲೇಖಕಿಯರ ಮತ್ತು ಕೊಡಗಿನ 17 ಪತ್ರಿಕೆಗಳ ಸಂಕ್ಷಿಪ್ತ ಪರಿಚಯವನ್ನೊಳಗೊಂಡಿದೆ. ಗೋಣಿಕೊಪ್ಪಲಿನ ಡಾ|| ಡಿ. ಬಿ. ರಾಮಚಂದ್ರಾಚಾರ್ ಅವರ ಸಾಹಿತ್ಯ ಸೇವೆಯು ನಾನಾ ಮುಖನಾಗಿದ್ದು, ಭಾವಗೀತೆ, ನಾಟಕ, ಕಾದಂಬರಿ, ಜೀವನಚರಿತ್ರೆ, ಪ್ರವಾಸ ಸಾಹಿತ್ಯ, ವಚನ ಸಾಹಿತ್ಯ, ವಿಮರ್ಶೆ ಮೊದಲಾದ ಕ್ಷೇತ್ರಗಳಿಗೆ ಇವರ ಕೃತಿಕಾಣಿಕೆಗಳು ಸಂದಿವೆ. ಕನ್ನಡ ಮತ್ತು ಇತರ ಭಾಷಾ ಸಾಹಿತ್ಯ ಕ್ಷೇತ್ರಗಳಿಗೆ ಕೊಡಗಿನ ಸುಮಾರು 50 ಬರಹಗಾರರು ಸಲ್ಲಿಸಿರುವ ಸಾಹಿತ್ಯ ಕೊಡುಗೆ ಕುರಿತು ವ್ಯಾಪಕವಾಗಿ ಅಧ್ಯಯನಿಸಿರುವರಲ್ಲದೆ, ಹೊಸಗನ್ನಡದ ಕವಿತ್ರಯರಲ್ಲಿ ಒಬ್ಬರಾದ ಡಾ|| ಪು. ತಿ. ನರಸಿಂಹಾಚಾರ್ ಅವರ ನಾಟಕಗಳನ್ನು ಕುರಿತಂತೆ ಮಹಾಪ್ರಬಂಧವನ್ನು ರಚಿಸಿದ್ದಾರೆ. ಕೊಡಗಿನ ಸುಂದರ ಪರಿಸರ, ಜನಾಂಗ, ಆಚರಣೆ, ಇತ್ಯಾದಿ ಕುರಿತು ವಿವಿಧ ಕವಿಗಳ ರಚನೆಗಳುಳ್ಳ 'ಕವಿಗಳು ಕಂಡ ಕೊಡಗು' ಎಂಬ ಇವರ ಸಂಗ್ರಹ ಉಲ್ಲೇಖನೀಯ.

ಮಡಿಕೇರಿಯ ಅಂಬಳೆ ಸುಬ್ಬರಾವ್ ಅವರ ಕೃತಿಗಳೆಂದರೆ, ಭಾಮಿನೀ ಷಟ್ಪದಿಯಲ್ಲಿಯ 'ಶ್ರೀರಾಮಕೃಷ್ಣ ಚರಿತಾಮೃತಂ' ಮತ್ತು 'ಪ್ರಾರ್ಥನೆ', 'ಗೀತಾತರಂಗ', ಇತ್ಯಾದಿ. ವೀರರಾಜಪೇಟೆಯ ಅಮ್ಮಂಬಳ ನಾರಾಯಣ ಶರ್ಮ (ಅ.ನಾ. ಶರ್ಮ) ಅವರು ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ವಿದ್ವಾಂಸರಾಗಿದ್ದು, 'ರಾಷ್ಟ್ರೀಯ ಸಮಗ್ರತೆ ಮತ್ತು ಭಾವೈಕ್ಯ' ಎಂಬ ಸಂಗೀತ ಪದ್ಯಗಳ ಕೃತಿ, 'ದಕ್ಷಿಣಾಪಥ ಸಂದರ್ಶನ', 'ಸಂಸ್ಕೃತಿ ಸಂಗಮ' ಯುಗಳ ನಾಟಕ ಮೊದಲಾದುವನ್ನು ಪ್ರಕಟಿಸಿರುವರು. 'ಕನ್ನಡನುಡಿ' ಬೋಧನೆಯು ಪ್ರೊ|| ಬಿ.ವಿ. ರಮಣ ಅವರು ಪ್ರಕಟಿಸಿದ ಗಮನಾರ್ಹ ಸಂಶೋಧನ ಗ್ರಂಥ. ಕೊಡಗಿನ ಕಲಿ ಕಲ್ಯಾಟಪ್ಪ ಹಾಗೂ ಸತ್ಯಾಶ್ರಯ ಪುಲಿಕೇಶಿ, ರಾಣಿ ಅಬ್ಬಕ್ಕದೇವಿ, ಕೆಳದಿಯ ಚೆನ್ನಮ್ಮ ಮೊದಲಾದ ಚಾರಿತ್ರಿಕ ವ್ಯಕ್ತಿಗಳನ್ನು ಕುರಿತು ಪುಸ್ತಕಗಳೂ ಇವರಿಂದ ರಚಿಸಲ್ಪಟ್ಟವೆ. ವಿದ್ವಾನ್ ಟಿ.ಎಸ್.

ನಾರಾಯಣರಾಯರು ಶಿಕ್ಷಣ ಇಲಾಖೆಗಾಗಿ ಬರೆದ ನಾನಾ ವಿಷಯ ಕುರಿತ ಪುಸ್ತಕಗಳು, 'ಶಿವಸುತ' ಪ್ರಕಟಿಸಿದ 'ಕೊಡಗಿನ ರಾಮೇಶ್ವರ ಕ್ಷೇತ್ರ' ಎಂಬ ಪರಿಚಯಾತ್ಮಕ ಕೃತಿ, ಎ.ಡಿ. ಮಂದಣ್ಣ ಅವರ 'ಜ್ಞಾನಸುಧಾ' ಮತ್ತು 'ವಿದ್ಯಾಯನಿ', ಮಡಿಕೇರಿಯ ಕಾವೇರಿ ಪ್ರಕಟಣಾಲಯದವರು ಹೊರತಂದ 'ನವನೀತ'ವೆಂಬ ಕೊಡಗಿನ ಕಥೆಗಾರರ ಸಂಕಲನ, ಪರಮೇಶ್ವರಯ್ಯ ಪೊನ್ನಂಗಾಲ ಅವರು ರಚಿಸಿದ ಕೀರ್ತನೆ, ದೇವರನಾಮಗಳು ಮತ್ತು ಕೊಡಗಿನ ಚರಿತ್ರೆಗೂ ಸಂಬಂಧಿಸಿದ ನೂರಾರು ಹಾಡುಗಳ ಸಂಗ್ರಹ, ಇತ್ಯಾದಿಗಳು ಈ ದಿಸೆಯಲ್ಲಿ ಗಮನಿಸಬಹುದಾದ ಪ್ರಯತ್ನಗಳಾಗಿವೆ.

ಕೊಡಗಿನಲ್ಲಿ ಕನ್ನಡದ ಸ್ಥಾನ, ಭಾಷೆ, ಜನಪದ ಸಾಹಿತ್ಯ, ಇತ್ಯಾದಿ ವಿಚಾರಗಳನ್ನು ಕುರಿತು ಹಲವಾರು ಬರಹಗಳನ್ನು ಪ್ರಕಟಿಸಿರುವ ಗೋಣಿಕೊಪ್ಪಲಿನ ಕೆ.ಆರ್. ಕೃಷ್ಣಯ್ಯ ಅವರು ಬಿ.ಎಸ್. ರಾಮರಾವ್ ಅವರ ಅಭಿನಂದನೆಯ ಕಿರು ಹೊತ್ತಗೆಯನ್ನು ಹೊರತಂದಿರುವರು. ಹಾಗೆಯೇ, ವಿ.ಎನ್. ನಾಯಕ್ ಅವರು ಕೊಡಗಿನ ಪರಿಸರದಲ್ಲಿಯ ಕಾಫಿ ಬೆಳೆಯನ್ನು ಕುರಿತಂತೆ ಇಂಗ್ಲಿಷ್‌ನಲ್ಲಿ 'ಕಾಫಿ ಗ್ರೋಯಿಂಗ್ ಇನ್ ಕೂರ್ಗ್' ಎಂಬ ಸಂಶೋಧನ ಕೃತಿಯನ್ನು ಪ್ರಕಟಿಸಿರುವರಲ್ಲದೆ, ಕೊಡಗಿನ ಹವಾಮಾನ, ಬೆಟ್ಟ, ಗುಡ್ಡ, ನದಿ, ನೆಲ, ಇತ್ಯಾದಿಗಳ ವೈಶಿಷ್ಟ್ಯವನ್ನು ಪರಿಚಯಿಸುವ 'ಕೊಡಗಿನ ಭೌಗೋಳಿಕ ಸಮೀಕ್ಷೆ' ಎಂಬ ಇನ್ನೊಂದು ಕೃತಿಯನ್ನು ರಚಿಸಿರುವರು. ಶ್ರೀಮಂಗಲದ ಟಿ.ಎಸ್. ಗೋಪಾಲ್ ಅವರ ಪುಸ್ತಕಗಳೆಂದರೆ ಲಿಪಿ ಮತ್ತು ಭಾಷೆಗಳಿಗೆ ಸಂಬಂಧಿಸಿದ 'ಕನ್ನಡ ವ್ಯಾಕರಣದ ಪ್ರಾಯೋಗಿಕ ಪಾಠಗಳು' ಮತ್ತು 'ಅಕ್ಷರ ಕಲಿಕೆ ಮತ್ತು ಬಳಕೆ'. ಕವನಗಳನ್ನು, ಸಾಕಷ್ಟು ಸಂಖ್ಯೆಯಲ್ಲಿ ವೈಚಾರಿಕ ಮತ್ತು ಯೋಗ ಸಂಬಂಧದ ವಿಷಯಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸಿರುವವರು ಅಮ್ಮತ್ತಿಯ ಪೇಜಾವರ ತಾರಾನಾಥರಾವ್ (ಕೊಳಲ ಜೋಗಿ) ಅವರು. ರಂಗನಟರೂ ಲೇಖಕರೂ ಆಗಿರುವ ಸೋಮವಾರಪೇಟೆಯ ಡಾ|| ಜಿ.ಎಸ್. ಪರಮೇಶ್ ಅವರು ಕವನ ಮತ್ತು ಕಥಾಸಂಕಲನಗಳನ್ನೂ ಕಾದಂಬರಿ ಮತ್ತು ನಾಟಕ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಕೊಡಗಿನ 51 ಕವಿಗಳ ಪ್ರಾತಿನಿಧಿಕ ಕವನ ಸಂಕಲನ 'ಕೊಡಗಿನ ಕವನಗಳು' ಎಂಬುದು ಇವರಿಂದ ಸಂಪಾದಿಸಲ್ಪಟ್ಟಿದೆ. ಬಾಗೂರು ಆರ್. ನಾಗರಾಜಪ್ಪ ಮತ್ತು ಡಾ|| ಜಿ.ಎಸ್. ಪರಮೇಶ್ ಅವರು ಸಂಪಾದಿಸಿ ಪ್ರಕಟಿಸಿದ ಕೊಡಗು ಜಿಲ್ಲಾ ಸಂಯುಕ್ತ ಕವನ ಸಂಕಲನವೇ 'ಕವನ ಚೈತ್ರ'. ಹಾಗೆಯೇ, ಆರ್.ಎಸ್. ಪ್ರಸಾದ್, ವೈ.ಎಸ್. ಗೋಪಾಲರಾವ್ ಮತ್ತು ಕೆ.ರಂ. ಗೋಪಾಲ್ ಅವರುಗಳು ಸಂಯುಕ್ತವಾಗಿ ವೀರರಾಜಪೇಟೆಯಿಂದ ಪ್ರಕಟಿಸಿರುವ ಕವನ ಸಂಕಲನದ ಹೆಸರು 'ನಮ್ಮೊಳಗೊಂದಿಷ್ಟು ಪ್ರಶ್ನೆಗಳು'. ಎ. ಸಿ. ಲಕ್ಷ್ಮಣ ಅವರ 'ನಾಗರಹೊಳೆ' ಎಂಬುದು ಪರಿಚಯಾತ್ಮಕ ಕೃತಿಯೆನಿಸಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ (1988) ಪಡೆದ 'ಕಲಮುರಹಳ್ಳಿಯ ಕಥೆಗಳು' ಎಂಬ ಜನಪದ ಕಥೆಗಳ ಸಂಕಲನವನ್ನು ಮಡಿಕೇರಿಯ ಕಲಮುರಹಳ್ಳಿ ಮಲ್ಲಿಕಾರ್ಜುನ ಅವರು ಪ್ರಕಟಿಸಿರುವರು. ಕೊಡ್ಲಿಪೇಟೆಯ ಮ. ಕ. ಚಂದ್ರಶೇಖರ ಮಲ್ಲೋರಹಟ್ಟಿ ಅವರ 'ಚೆಲುವು ಚೆಲ್ಲಿದಾಗ' ಕವನ ಸಂಕಲನವೂ ಗಮನ ಸೆಳೆಯುತ್ತದೆ. ಕೊಡಗು ಜಿಲ್ಲೆಯ ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳನ್ನು ಕುರಿತ ಬೆ.ಗೋ. ರಮೇಶ್ ಅವರ ಪುಸ್ತಿಕೆ, ಬಾಗೂರು ಆರ್. ನಾಗರಾಜಪ್ಪ ಅವರ 'ಸೋಮವಾರಪೇಟೆ ತಾಲೂಕು ದರ್ಶನ'ಗಳೂ ಗಮನೀಯವಾದುವು. ಕೊಡಗಿನ ಸರ್ವತೋಮುಖ ಅಭಿವೃದ್ಧಿಯ ಚಿತ್ರಣವನ್ನು ನೀಡುವ ಮತ್ತು ಸಮಸ್ಯೆಗಳನ್ನು ಪರಿಚಯಿಸುವ ಲೇಖನಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪತ್ರಕರ್ತರಾದ ಸುಚೇತನ ಸ್ವರೂಪ ಮತ್ತು ಸುಬ್ರಹ್ಮಣ್ಯಂ ಅವರುಗಳು ಪ್ರಕಟಿಸಿದ್ದಾರೆ. ಅರವಿಂದ ಆರ್ಯ ಅವರು ಕೊಡಗಿನ ಭಾಷೆ, ಇತಿಹಾಸ, ಜಾನಪದ, ಸಂಸ್ಕೃತಿ ಮೊದಲಾದವುಗಳ ಬಗೆಗೆ ತಮ್ಮ ಪತ್ನಿ ಸೋಮವಾರಪೇಟೆ ಬ್ಯಾಡಗೋಟ ಗ್ರಾಮದ ಪಾಲಚ್ಚಂಡ ಎ. ತುಳಸೀದೇವಿ ಅವರೊಂದಿಗೆ ಸಮಗ್ರ ಹಾಗೂ ಸಂಶೋಧನಾತ್ಮಕ ಅಧ್ಯಯನವನ್ನು ಕೈಗೊಂಡಿದ್ದಾರೆ.

ಗಣಿತಶಾಸ್ತ್ರದಲ್ಲಿ ನೂತನ ಸಿದ್ಧಾಂತಗಳನ್ನು ಸ್ಥಾಪಿಸುವುದರೊಡನೆ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಗಣಿತಶಾಸ್ತ್ರಜ್ಞ ಪ್ರೊ|| ಚಂದ್ರಶೇಖರ ಸಿ. ಯಲವಿಗಿ ಅವರು ಮಡಿಕೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಗ್ರಂಥಗಳನ್ನೂ ನೂರಾರು ಪ್ರಬಂಧಗಳನ್ನೂ ಬೆಳಕಿಗೆ ತಂದಿದ್ದಾರೆ. ಮಡಿಕೇರಿ ತಾಲೂಕು ಕುಂಜಿಲ ಮತ್ತು ಕೊಳಕೇರಿ ಗ್ರಾಮಗಳಲ್ಲಿರುವ ಕಲಿಯಂಡ ಮನೆತನದ ಕುಟುಂಬಸ್ಥರ ಮತ್ತು ಮೂಲಪುರುಷರ ಚರಿತ್ರೆಯನ್ನು ದಾಖಲಿಸಿಕೊಂಡಿರುವ 'ವೀರಪುತ್ರ ಕಲಿಯಂಡ ಮುತ್ತಣ್ಣ ಕುಡಿಬೀರನ ಚರಿತ್ರೆ' ಎಂಬ ಪ್ರಕಟಣೆಯು ಕಲಿಯಂಡ ಎಂ. ಎಫ್. ಬಿ. ಫಂಡ್ ವತಿಯಿಂದ ಹೊರಬಿದ್ದಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು.

ಕೊಡಗು ಭಾಷೆ, ಜನಾಂಗ, ಸಾಹಿತ್ಯ, ಸಂಸ್ಕೃತಿ, ಇತ್ಯಾದಿ ಕುರಿತು ಈ ಜಿಲ್ಲೆಯ ಹೊರಗಿನ ಹಲವಾರು ವಿದ್ವಾಂಸರು ಅಧ್ಯಯನಪೂರ್ವಕ ಉತ್ಕೃಷ್ಟ ಕೃತಿಗಳನ್ನು, ಲೇಖನಗಳನ್ನು ಮತ್ತು ವರದಿಗಳನ್ನು ಪ್ರಕಟಿಸಿರುವರು. ಈ ಪೈಕಿ ಡಾ|| ಆರ್. ಬಾಲಕೃಷ್ಣನ್ ಅವರು ಕೊಡಗಿನ ವಿವರಣಾತ್ಮಕ ವ್ಯಾಕರಣವನ್ನು ಕೊಡವ ಭಾಷೆಯ ಸ್ವರಪದ್ಧತಿ ಮತ್ತು ಶಬ್ದ ಸಂಪತ್ತನ್ನು ಕುರಿತು ಎರಡು ಭಾಗಗಳಲ್ಲಿ 'ಫೋನಾಲಜಿ ಆಫ್ ಕೊಡಗು ವಿತ್ ವೊಕ್ಯಾಬ್ಯುಲರಿ' ಮತ್ತು 'ಎ ಗ್ರಾಮರ್ ಆಫ್ ಕೊಡಗು' ಎಂಬ ಇಂಗ್ಲಿಷ್ ಕೃತಿಗಳನ್ನು ಹೊರ ತಂದಿರುವರು. ಡಾ|| ಎಂ. ವಿ. ಶ್ರೀನಿವಾಸ್ ಅವರು ಕೊಡಗಿನಲ್ಲಿ ಜಮ್ಮ ಪದ್ಧತಿ,ಕ್ರೈಸ್ತಧರ್ಮ, ಜೈನಧರ್ಮ ಪ್ರಚಾರಕರು, ಅಸ್ಪೃಶ್ಯತೆ, ಪ್ರಜಾಪ್ರತಿನಿಧಿ ಸಭೆಯ ಕಲಾಪ, ಸ್ವಾತಂತ್ರ್ಯ ಹೋರಾಟ, ಇಂಗ್ಲಿಷರ ಆರಣ್ಯ ನೀತಿ, ಕರಕುಶಲ ಕಲೆ, ಪೊಲೆಯ ಜನಾಂಗದವರ ಸಾಮಾಜಿಕ ಪರಿಸ್ಥಿತಿ–ಇವೇ ಮೊದಲಾದ ವಿಷಯಗಳನ್ನು ಕುರಿತು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಹಲವಾರು ಅಧ್ಯಯನಾತ್ಮಕ ಲೇಖನಗಳನ್ನು ಪ್ರಕಟಿಸಿರುವರಲ್ಲದೆ, ಕೊಡಗಿನ ಭೂಸ್ವಾಮ್ಯ ಪದ್ಧತಿ ಕುರಿತು ವಿಶೇಷ ಅಧ್ಯಯನ ಕೈಗೊಂಡಿರುವರು. ಕೊಡಗಿನ ಚರಿತ್ರೆ, ಸಾಹಿತ್ಯ, ಜಾನಪದ, ಹಬ್ಬಗಳು, ದೇವಾಲಯಗಳ ವಾಸ್ತು ಮತ್ತು ಶಿಲ್ಪ, ಕೊಲೆಕಲ್ಲುಗಳು, ಇತ್ಯಾದಿ ಕುರಿತು ಹಲವಾರು ಸಂಶೋಧನಾತ್ಮಕ ಲೇಖನಗಳನ್ನು, ಕೊಡವ ಮತ್ತು ಇತರ ಜನಾಂಗದವರ ಚಿತ್ರಣವುಳ್ಳ ಕಥೆಗಳನ್ನು ಬೆಳಕು ಕಾಣಿಸಿರುವವರು ಎಂ. ಜಿ. ನಾಗರಾಜ್ ಅವರು. ಕೊಡಗಿನ ಅರಸ ಎರಡನೇಯ ಲಿಂಗರಾಜನ 'ಹುಕುಂನಾಮಾ'ವನ್ನು ಡಾ|| ಪುರುಷೋತ್ತಮ ಬಿಳಿಮಲೆ ಅವರು ಸಂಕಲಿಸಿ 'ಲಿಂಗರಾಜರ ಹುಕುಂನಾಮಾಗಳು' ಎಂಬ ಹೆಸರಿನಲ್ಲಿ ಹೊರತಂದಿರುವರು. ಕೊಡಗಿನ ಗೌಡಜನಾಂಗದವರನ್ನು ಕುರಿತ 'ಸುಳ್ಯ ಪರಿಸರದ ಗೌಡಜನಾಂಗ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಕೃತಿಯೂ ಇವರಿಂದ ರಚಿತವಾಗಿದೆ. ಡಾ|| ಕೆ. ವಿ. ರಮೇಶ್ ಅವರು 'ಭಾರತೀಸುತ' ಸಂಸ್ಮರಣ ಗ್ರಂಥ 'ಬ್ರಹ್ಮಗಿರಿ'ಯಲ್ಲಿ ಶಾಸನಗಳ ಹಿನ್ನೆಲೆಯಲ್ಲಿ ಕೊಡಗಿನ ಸಂಸ್ಕೃತಿಯನ್ನು ನಿರೂಪಿಸಿದ್ದರೆ, ಈ ಜಿಲ್ಲೆಯ ಶಾಸನಕವಿಗಳು, ಲಿಪಿಕಾರರು ಮತ್ತು ಸಾಹಿತ್ಯವನ್ನು ಕುರಿತು ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರು ಇದೇ ಸಂಪುಟದಲ್ಲಿಯೇ ವಿವೇಚಿಸಿದ್ದಾರೆ. ಕೊಡಗಿನ ಏಳುಸಾವಿರಸೀಮೆಗೆ ಸೇರಿದ್ದ 12ನೇಯ ಶತಮಾನದ ಮೌಕ್ತಿಕ ಕವಿಯು ರಚಿಸಿದ 'ಚಂದ್ರನಾಥಾಷ್ಟಕ'ವನ್ನು ಎಸ್. ಶಿವಣ್ಣ ಅವರು ಸಂಪಾದಿಸಿ ಪ್ರಕಟಿಸಿರುವರು. 'ಜೈನ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಡಾ|| ಶುಭಚಂದ್ರ ಅವರ ಕೃತಿಯಲ್ಲಿ ಕೊಡಗಿನ ಜೈನಾವಶೇಷಗಳ ಬಗೆಗೆ ಸಾಕಷ್ಟು ಪ್ರಸ್ತಾಪಿಸಲ್ಪಟ್ಟಿದೆ. ಡಿ. ಎನ್. ಕೃಷ್ಣಯ್ಯ ಅವರ 'ಕೊಡಗಿನ ಇತಿಹಾಸ'ವನ್ನು ಶ್ರೀಕರ ಭಂಡಾರ್‌ಕರ್ ಅವರು ಇಂಗ್ಲಿಷ್‌ಗೆ ಅನುವಾದಿಸಿರುವರು.

ಕೊಡಗು ಚರಿತ್ರೆಯ ಬಗೆಗೆ ಸಂಶೋಧನಾತ್ಮಕ ವ್ಯಾಸಂಗ ನಡೆಸಿದವರಲ್ಲಿ, ಎಚ್. ಪಿ. ಶಶಿಧರಮೂರ್ತಿ ಅವರು ಕೊಡಗಿನ ಕಡೆಯ ದೊರೆ ಚಿಕ್ಕವೀರರಾಜ ಒಡೆಯನ ಕಾಲದ ದಾಖಲೆಗಳ ಬಗೆಗೆ ವಿಶೇಷ ಅಧ್ಯಯನ ನಡೆಸಿದ್ದು, ಹಲವಾರು ಬರಹಗಳನ್ನು ಪ್ರಕಟಿಸಿದ್ದಾರೆ. ಕೊಡಗಿನ ಚರಿತ್ರೆ ಬಗೆಗೆ ನಡೆದಿರುವ ಸಂಶೋಧನೆ ಕುರಿತು ಡಾ|| ಸೂರ್ಯನಾಥ ಕಾಮತ್ ಅವರು ಸಮೀಕ್ಷೆ ಮಾಡಿರುವರಲ್ಲದೆ, ಇವರದೇ ಆದ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಪುಟದ ಒಂದು ಮತ್ತು ಮೂರನೆಯ ಭಾಗಗಳಲ್ಲಿ ಕೊಡಗಿನ 30ಕ್ಕೂ ಹೆಚ್ಚು ಸ್ವಾತಂತ್ರ್ಯ ಯೋಧರ ನೆನಹುಗಳನ್ನು ಉಲ್ಲೇಖಿಸಿರುವರು. ಕೊಡಗಿನ ಚರಿತ್ರೆ, ಸಾಹಿತ್ಯ, ಪತ್ರಿಕೋದ್ಯಮ, ಸಂಸ್ಕೃತಿ, ವ್ಯಕ್ತಿವಿಚಾರ, ಇತ್ಯಾದಿ ಕುರಿತು ಬರಹಗಳನ್ನು ಪ್ರಕಟಿಸಿರುವವರಲ್ಲಿ ವಿದ್ವಾನ್ ಟಿ. ಕೇಶವಭಟ್ಟ, ಪ್ರೊ|| ಎಲ್. ಎಸ್. ಶೇಷಗಿರಿರಾವ್,'ರಾಧೇಯ', ಡಾ|| ಎಂ. ಚಿದಾನಂದಮೂರ್ತಿ, ಡಾ|| ಪ್ರತಿಭಾ ಚಿಣ್ಣಪ್ಪ, ಬಿ. ಶಾಮಸುಂದರ, ಎಸ್. ಎಸ್. ನಾಗಶೆಟ್ಟಿ, ಡಿ.ಕೆ. ನಾರಾಯಣ, ಲಕ್ಷ್ಮಣ್ ತೆಲಗಾವಿ, ಡಾ|| ವಿ. ಶಿವಾನಂದ, ಚೆನ್ನಬಸಪ್ಪ ಬೆಟ್ಟದೂರು, ಆರ್. ಸುಬ್ರಹ್ಮಣ್ಯ, ಇ. ವಿ. ಸತ್ಯನಾರಾಯಣ ಮುಂತಾದವರನ್ನು ಪ್ರಸ್ತಾಪಿಸಬಹುದು.

ಕೊಡಗಿನ ಚಾರಿತ್ರಿಕ ಸಂಗತಿಗಳನ್ನು ಆಧರಿಸಿ ಕಾದಂಬರಿ ಸಾಹಿತ್ಯವನ್ನು ಸೃಷ್ಟಿಸಿರುವವರಲ್ಲಿ ಕನ್ನಡದ ಪ್ರಸಿದ್ಧ ಸಾಹಿತಿಗಳೂ ಇರುವುದು ಗಮನಾರ್ಹ. 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಪ್ರಸಿದ್ಧರೂ ಜ್ಞಾನಪೀಠ ಪ್ರಶಸ್ತಿ ವಿಜೇತರೂ ಆಗಿದ್ದ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು, ಕೊಡಗಿನ ಕಡೆಯ ದೊರೆ ಚಿಕ್ಕವೀರರಾಜೇಂದ್ರನನ್ನು ಕುರಿತ ಚಿತ್ರಣವಿರುವ 'ಚಿಕ್ಕವೀರರಾಜೇಂದ್ರ' ಎಂಬ ಕಾದಂಬರಿಯನ್ನು ರಚಿಸಿದರು. ಸುಪ್ರಸಿದ್ಧ ಕಾದಂಬರಿಕಾರ ನಿರಂಜನ ಅವರು ಚಿಕ್ಕವೀರರಾಜೇಂದ್ರನು ರಾಜ್ಯಭ್ರಷ್ಟನಾದ ತರುವಾಯ ಕೊಡಗಿನ ದಾಸ್ಯ ವಿಮೋಚನೆಗೆ ಹೂಡಲಾದ ಬಂಡಾಯದ ಮುಂಚೂಣಿಯಲ್ಲಿದ್ದ ಅಪರಂಪರಸ್ವಾಮಿಯನ್ನು ಕುರಿತು 'ಸ್ವಾಮಿ ಅಪರಂಪಾರ' ಮತ್ತು ಈ ಅಪರಂಪರ ಸ್ವಾಮಿಯ ಅಪ್ತಾನುಯಾಯಿಯೂ ಆದ ಕಲ್ಯಾಣಸ್ವಾಮಿಯನ್ನು ಕುರಿತು 'ಕಲ್ಯಾಣಸ್ವಾಮಿ' ಎಂಬ ಎರಡು ಚಾರಿತ್ರಿಕ ಕಾದಂಬರಿಗಳನ್ನು ಕಾಣಿಕೆಯಾಗಿತ್ತರು. ಕೆ. ಸಚ್ಚಿದಾನಂದಯ್ಯ

(ಚಿರಂತನ) ಅವರ 'ಕ್ರಾಂತಿಯ ಕಿಡಿ ಕಲ್ಯಾಣಸ್ವಾಮಿ'ಯೂ ಈ ದಿಸೆಯಲ್ಲಿ ಗಮನಿಸ ಬೇಕಾದ ಕೃತಿ. ಹಲವಾರು ಸಾಹಿತ್ಯ ಪುರಸ್ಕಾರಗಳಿಗೆ ಪಾತ್ರವೆನಿಸಿರುವ 'ಪ್ರೌಢಪ್ರತಾಪ ವೀರ ರಾಜೇಂದ್ರ' ಕಾದಂಬರಿಯು ಎಸ್.ವಿ. ಶ್ರೀನಿವಾಸರಾವ್ ಅವರಿಂದ ರಚಿಸಲ್ಪಟ್ಟಿದ್ದು, ಕೊಡಗಿನ ಚಾರಿತ್ರಿಕ ಸಂದರ್ಭ ಗಳನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಕೊಡವ ಭಾಷೆಯ ಬಗೆಗೆ ಲೇಖನಗಳನ್ನು ಪ್ರಕಟಿಸುವುದ ರೊಡನೆ ಎಂ.ಬಿ. ಎಮೆನೊ ಅವರು, 'ಕಿನ್‌ಷಿಪ್ ಅಂಡ್ ಮ್ಯಾರೇಜ್ ಎಮಂಗ್ ಕೂರ್ಗ್ಸ್' ಎಂಬ ಪ್ರಮುಖ ಲೇಖನ ವನ್ನು 1938ರ 'ಜರ್ನಲ್ ಆಫ್ ರಾಯಲ್ ಏಷಿಯಾಟಿಕ್ ಸೊಸಾಯಿಟಿ ಆಫ್ ಬೆಂಗಾಲ್'ನಲ್ಲಿ ಪ್ರಕಟಿಸಿದರು. ಡಿ. ಮರ್ಫಿ ಎಂಬ ಐರಿಷ್ ಮಹಿಳೆಯು 1976ರಲ್ಲಿ 'ಆನ್ ಎ ಶೂ ಸ್ಟ್ರಿಂಗ್ ಟು ಕೂರ್ಗ್–ಏನ್ ಎಕ್ಸ್‌ಪೀರಿಯೆನ್ಸ್ ಆಫ್ ಸದರ್ನ್ ಇಂಡಿಯಾ' ಎಂಬ ಗ್ರಂಥವನ್ನು ಹೊರತಂದಿದ್ದು, ಕೊಡಗು ಅಧ್ಯಯನದ ದೃಷ್ಟಿಯಿಂದ ಇದು ಗಮನಾರ್ಹ ವೆನಿಸಿದೆ. ರಷಿಯಾದ ಮಾಸ್ಕೋ ವಿಶ್ವವಿದ್ಯಾನಿಲಯದ ನರ ವಿಜ್ಞಾನಶಾಸ್ತ್ರ ನಿಪುಣೆ ಶಪಸ್ ನಿಕೋವಾ ಅವರು ಬರೆದಿರುವ 'ಮೈ ಕುರ್ಗ್' ಎಂಬ ಕೃತಿಯು ರಷಿಯಾ ಭಾಷೆಯಲ್ಲಿದ್ದು, ಅದು ಕೊಡವರ ಭಾಷೆ, ಜನಾಂಗ, ಆಚಾರ, ಪದ್ಧತಿ, ಬದುಕು, ಇತ್ಯಾದಿಗಳನ್ನು ಕುರಿತ ಅಧ್ಯಯನವೆನಿಸಿದೆ. ಎಡಿನ್‌ಬರೊ ವಿಶ್ವವಿದ್ಯಾ ನಿಲಯದ ಎ. ಜಿ. ಗಾರ್ಮೆನ್ ಅವರು ಕೊಡವ ಭಾಷೆಯ ವ್ಯಾಕರಣವನ್ನು ಕುರಿತು ನಡೆಸಿರುವ ಅಧ್ಯಯನವೂ ಗಮ ನಾರ್ಹವಾದುದು. ಹಾಗೆಯೇ, ರಷಿಯಾದ ಭಾಷಾವಿಜ್ಞಾನಿ ಎಂಡೋನೋವ್ ಅವರೂ ಕೊಡವ ಭಾಷಾಧ್ಯಯನ ನಡೆ ಸಿರುವರು. ಕೊಡವ ಭಾಷಾಭಿವೃದ್ಧಿ ಮತ್ತು ಸಾಹಿತ್ಯ ಕುರಿತು ಎಸ್. ಆಗಸ್ತ್ಯಲಿಂಗಮ್, ಕೋದಂಡರಾಮನ್, ಎಲ್. ವಿ. ರಾಮಸ್ವಾಮಿ ಅಯ್ಯರ್, ಡಾ|| ಎ. ಎಸ್. ಆಚಾರ್ಯ, ಪಿ. ಎಸ್. ಸುಬ್ರಹ್ಮಣ್ಯಂ, ಡಾ|| ಹಂಪ. ನಾಗರಾಜಯ್ಯ, ಡಾ|| ಕೆ. ಕೆಂಪೇಗೌಡ, ಡಾ|| ವಿ. ಕೃಷ್ಣಮೂರ್ತಿ, ಡಾ|| ಕಾಳೇಗೌಡ ನಾಗವಾರ, ಡಾ|| ಸಿದ್ಧಯ್ಯ ಪುರಾಣಿಕ, ಬಿ. ಡಿ. ಗಣಪತಿ, ಬಲ್ಯಾಟಂಡ ಜೆ. ಚಿಣ್ಣಪ್ಪ ಮೊದಲಾದವರು ತಮ್ಮ ಚಿಂತನೆಗಳನ್ನು ಸಂಶೋ ಧನೆ, ಕೃತಿ, ಲೇಖನ ಮತ್ತು ಉಪನ್ಯಾಸಗಳ ಮೂಲಕ ಪ್ರತಿ ಪಾದಿಸಿರುವರು. (ಕೊಡಗಿನ ಬಗ್ಗೆ ಮಾಹಿತಿ ನೀಡಿ ಈ ಸಂಪುಟ ರಚನೆಯಲ್ಲಿ ಬಳಸಿದ ಇತರ ಅನೇಕ ಕೃತಿಗಳ ಬಗ್ಗೆ ಆಧಾರಗ್ರಂಥಗಳ ಪಟ್ಟಿಯು ಈ ಸಂಪುಟದ ಕೊನೆಯಲ್ಲಿ ಇದೆ).

## ಕೊಡವ ಭಾಷಾ ಬರಹಗಾರರು

ಕೊಡಗು ಜಿಲ್ಲೆಯು ಕನ್ನಡ, ತುಳು ಮತ್ತು ಮಲೆಯಾಳ ಭಾಷಾ ಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿದ್ದು, ಭಾಷಿಕ ಮತ್ತು ಸಾಂಸ್ಕೃತಿಕವಾಗಿ ಆಯಾ ಭಾಷಾವರ್ಗಗಳವರಿಂದ ಪ್ರಭಾವಿತವಾಗಿರುವುದು ಸಹಜವೇ ಆಗಿದೆ. ಕೊಡವರು ಕೊಡಗು-ಕನ್ನಡ ದ್ವಿಭಾಷಿಗಳಾದುದರಿಂದ ಕನ್ನಡವು ಕೊಡವರ ನಿತ್ಯಜೀವನದ ಎಲ್ಲ ರಂಗಗಳಲ್ಲೂ ಪ್ರವೇಶಿಸಿದೆ. ಈ ಹಿನ್ನೆಲೆ ಯಲ್ಲಿ ಕನ್ನಡ ಮತ್ತು ಕೊಡವ ಭಾಷೆಗಳ ಸಂಬಂಧವು ಅವಿಭಾಜ್ಯವಾಗಿದ್ದು, ಕೊಡವ ಭಾಷಾ ಬರವಣಿಗೆಗಳು ಕನ್ನಡ ಲಿಪಿಯಲ್ಲಿ ಆಗಿವೆ. ಕೊಡವ ಸಂಸ್ಕೃತಿಯ ದಾಖಲೆಯೆನಿಸಿರುವ ಹಾಗೂ ಪ್ರಾಚೀನವಾದ ಜನಪದ ಸಾಹಿತ್ಯವು ಕನ್ನಡ ಲಿಪಿ ಯಲ್ಲೇ ಬರೆದಿಡಲ್ಪಟ್ಟಿರುವುದು ಮತ್ತು ಪ್ರಕಟಿಸಲ್ಪಟ್ಟಿರುವುದು ಗಮನಾರ್ಹ.

ಕಳೆದ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರಲ್ಲಿ ಕೆಲವರು ಕೊಡವ ಭಾಷಾಧ್ಯಯನವನ್ನು ಕೈಗೊಂಡು ವ್ಯಾಕರಣ ಗ್ರಂಥ ಗಳನ್ನು ಹೊರತಂದರು. ಜರ್ಮನ್ ಮಿಷನರಿಯಾದ ಜೆ. ಎಫ್. ವೈಲ್ ಎಂಬವನು 1886ರಲ್ಲಿ ಕೊಡವ ಗಾದೆಗಳ ಸಂಗ್ರಹವನ್ನು ಪ್ರಕಟಿಸುವುದರೊಡನೆ ಇತರರ ಗಮನವನ್ನು ಕೊಡವ ಭಾಷೆಯೆಡೆಗೆ ಸೆಳೆದನು. ಈ ಶತಮಾನದ ಆರಂಭ ದಿಂದಲೂ ಕೊಡವ ಭಾಷಾ ಗ್ರಂಥಗಳು ರಚಿತವಾಗಿ ಇಂದಿನ ವರೆಗೆ ಏಕಪ್ರಕಾರವಾಗಿ ಪ್ರಕಟಗೊಳ್ಳುತ್ತಾ ಬಂದಿರುವುದು ಗಮನೀಯ ಸಂಗತಿಯಾಗಿದೆ. 'ಕೊಡಗು ಕಾಳಿದಾಸ' ಖ್ಯಾತಿಯ ಅಪ್ಪನೆರವಂಡ ಹರದಾಸ ಅಪ್ಪಚ್ಚಕವಿಯು ಕೊಡವ ಭಾಷೆಯ ಆದಿಕವಿಯೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಕೊಡವ ಭಾಷಾ ನಾಟಕ ಸಾಹಿತ್ಯಕ್ಕೆ ಪ್ರಶಂಸಾರ್ಹ ಸೇವೆ ಸಲ್ಲಿ ಸಿರುವರು. 1906 ರಿಂದ 1920ರ ವರೆಗೆ ಅವರಿಂದ ರಚಿಸಲ್ಪಟ್ಟ ಕೊಡವ ಭಾಷೆಯ ನಾಲ್ಕು ಮಹಾ ನಾಟಕ ಕೃತಿ ಗಳೆಂದರೆ, ಕಾವೇರಿ ನಾಟಕ, ಯಯಾತಿರಾಜ ನಾಟಕ, ಸುಬ್ರಹ್ಮಣ್ಯ ನಾಟಕ ಮತ್ತು ಸಾವಿತ್ರಿ ನಾಟಕ. 1924ರಲ್ಲಿ ಮೊದಲಿಗೆ ಪ್ರಕಟಗೊಂಡ ನಡಿಕೇರಿಯಂಡ ಚಿಣ್ಣಪ್ಪ ಅವರ ಕೊಡವ ಬಾಳೊಪಾಟ್‌ನ ಮಟ್ಟನಲ್ಲಿರುವ 'ಕೊಡವಡ ಪಟ್ಟೋಲೆ ಪಳಮೆ' ಎಂಬುದು ಕನ್ನಡದ ವಿವರಣೆ ಮತ್ತು ಕೊಡವ ಭಾಷೆಯ ಮೂಲ ಸಾಹಿತ್ಯವನ್ನು ಒಳಗೊಂಡಿರುವ ಅಮೂಲ್ಯ ಸಂಗ್ರಹ ಕೃತಿಯೆನಿಸಿದೆ. ಕೊಡಗು ಮತ್ತು ಕೊಡವರ ಪದ್ಧತಿ–ಪರಂಪರೆ, ಆಚಾರ-ವಿಚಾರ, ಶಾಸ್ತ್ರ-ಸಂಪ್ರದಾಯ, ಇತ್ಯಾದಿಗಳ ಬಗೆಗೆ ಸಮಗ್ರ ವಿವರಣೆ ನೀಡುವ ಅಪೂರ್ವ ಕೃತಿಯೆನಿಸಿದ್ದು, ಇದು ಕೊಡವರ ಪವಿತ್ರ ಗ್ರಂಥ

ನೆಂತಲೂ ಪರಿಗಣಿಸಲ್ಪಟ್ಟಿದೆ. ಮೂಲ ಕೊಡವ ಭಾಷೆಯಲ್ಲಿರುವ 'ಕಾವೇರಿ ಪುರಾಣ'ವನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಚಿಣ್ಣಪ್ಪ ಅವರು ಕೊಡವ ಭಾಷೆಯಲ್ಲಿ ಪ್ರಕಟಿಸಿರುವ 'ಭಗವಂತಂಡ ಪಾಟ್' ಎಂಬುದು 'ಭಗವದ್ಗೀತೆ'ಯ ರೂಪಾಂತರ.

ಕೊಡವ ಭಾಷೆಗೆ ಲಿಪಿಯನ್ನು ಕಂಡುಹಿಡಿಯುವಲ್ಲಿ ಡಾ|| ಕೊರವಂಡ ಅಪ್ಪಯ್ಯ ಅವರ ಪ್ರಯತ್ನವು ಗಮನಾರ್ಹವಾಗಿದ್ದು, ಇವರು ಕನ್ನಡದಲ್ಲಿ ಪ್ರಕಟಿಸಿದ 'ಕೊಡಗು ಲಿಪಿ' ಕೃತಿಯು ಈ ದಿಸೆಯಲ್ಲಿ ಹಲವಾರು ಪ್ರಮುಖ ಅಂಶಗಳನ್ನು ವ್ಯಕ್ತಪಡಿಸುತ್ತದೆ. ಕನ್ನಡದಲ್ಲಿರುವಂತೆ ಕೊಡವ ಲಿಪಿಯಲ್ಲಿ 50 ಅಕ್ಷರಗಳು, ವ್ಯಂಜನಗಳು, ಸ್ವರಗಳು ಹಾಗೂ ಅಂಕಿಗಳನ್ನು ಡಾ|| ಕೊರವಂಡ ಅಪ್ಪಯ್ಯ ಅವರು ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿರುವರು ; 'ಕಡಗದಾಳತ್‌ಲ್ ಜೋಯಿಡೂ ಸೂಳಿಡೂ' ಎಂಬ ಚಿಕ್ಕ ಪುಸ್ತಕವನ್ನೂ ಇವರು ರಚಿಸಿರುವರು. ಪೂರ್ವಾಶ್ರಮದಲ್ಲಿ ಕೊಡಗಿನ ತೇಲಪಂಡ ಕುಟುಂಬದವರಾದ ಶ್ರೀ ಶಾಂಭವಾನಂದಸ್ವಾಮಿಯವರು, ಕೊಡಗಿನಲ್ಲಿ ಹರಡಿದ್ದ ಮಲೇರಿಯ ಜ್ವರ, ಅದರ ಕಾರಣ, ತಡೆ ಮತ್ತು ನಿವಾರಣೆಗೆ ಸಂಬಂಧಿಸಿದಂತೆ 'ಸೊಳ್ಳೆಪಾಟ್' ಲಾವಣಿಯನ್ನು ಕೊಡವ ಭಾಷೆಯಲ್ಲಿ ರಚಿಸಿ 1933ರಲ್ಲಿ ಪ್ರಕಟಿಸಿದರು.

ಈಚಿನ ಪ್ರಸಿದ್ಧ ವಿದ್ವಾಂಸರುಗಳಲ್ಲಿ ಕೆಲವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಗ್ರಂಥಗಳನ್ನು ಪ್ರಕಟಿಸಿರುವಂತೆಯೇ, ಕೊಡವ ಭಾಷೆಯಲ್ಲಿಯೂ ಕೃತಿಗಳನ್ನು ರಚಿಸಿ ತಮ್ಮ ತಾಯಿನುಡಿಯ ಸೇವೆಯನ್ನು ಮಾಡಿದ್ದಾರೆ. ಅಂತಹವರಲ್ಲಿ ಡಾ|| ಐ. ಮಾ. ಮುತ್ತಣ್ಣ ಅವರು ಪ್ರಮುಖರಾಗಿರುವರಲ್ಲದೆ, ಕೊಡವ ಭಾಷೆಯಲ್ಲಿ 'ಪೂಮಾಲೆ', 'ರಾಗಮಾಲೆ' ಮತ್ತು 'ಮಣಿಮಾಲೆ' ಎಂಬ ಕವನ ಸಂಗ್ರಹಗಳು, 'ಅಭಿಜ್ಞಾನ ಶಾಕುಂತಲ ನಾಟಕ' ಮತ್ತು ಷೇಕ್ಸ್‌ಪಿಯರನ 'ಮರ್ಚಂಟ್ ಆಫ್ ವೆನಿಸ್' ಆಧರಿಸಿದ 'ಕೊಡಗ್‌ಡ ಕೋಮಟಿಯ' ಎಂಬ ನಾಟಕಗಳು ಹಾಗೂ 'ಕೊಡವ–ಕನ್ನಡ ನಿಘಂಟು' ಇವುಗಳನ್ನು ಹೊರತಂದಿದ್ದಾರೆ. ಅಲ್ಲದೆ, ಕೇವಲ 28ಅಕ್ಷರಗಳಲ್ಲಿ ಕೊಡವ, ಭಾಷೆಯಲ್ಲಿ ಬರವಣಿಗೆ ಸಾಧ್ಯವಾಗುವಂತೆ ಇವರು ಕೊಡವ ಲಿಪಿಗಳನ್ನೂ ಕಾಗುಣಿತವನ್ನೂ ಸೃಷ್ಟಿಸಿ ತಮ್ಮ 'ಕೊಡವ ತಕ್ಕ್‌ಡ ಅಕ್ಷರಮಾಲೆ' ಎಂಬ ಕೊಡವಭಾಷಾ ಪ್ರಬಂಧದಲ್ಲಿ ದೀರ್ಘವಾಗಿ ವಿವರಿಸಿರುವರು.

ಮತ್ತೊಬ್ಬ ವಿದ್ವಾಂಸ ಬಿ ಡಿ. ಗಣಪತಿ ಅವರು ಕೊಡವ ಭಾಷೆಯ ಹಾಡುಗಳು, ಸಾಮಾಜಿಕ ನಾಟಕ ಮತ್ತು ಪ್ರಬಂಧಗಳ ಸಂಗ್ರಹವೆನಿಸಿದ 'ಕುತ್ತಂಬೊಳಿಚ' ಮತ್ತು ಕೊಡವ ಜನಾಂಗದ ಉನ್ನತಿಗಾಗಿ ಶ್ರಮಿಸಿದ ವ್ಯಕ್ತಿಗಳನ್ನು ಪರಿಚಯಿಸುವ 'ನಂಗ ಕೊಡವ' ಎಂಬ ಕೃತಿಗಳನ್ನು ಕಾಣಿಕೆಯಾಗಿ ನೀಡಿರುವರು. 'ಕೊಡವ–ಒರ್ ಚಿತ್ರಕತೆ' ಎಂಬುದು ಕೊಡವರ ಪದ್ಧತಿ–ಪರಂಪರೆಗಳ ಮುಖ್ಯ ಅಂಶಗಳನ್ನು ಸಂದರ್ಭ ರೇಖಾಚಿತ್ರಗಳ ಸಹಿತ ವಿವರಿಸುವ ವಿಶಿಷ್ಟ ಪ್ರಕಟಣೆಯಾಗಿದ್ದು, ಇದು ಬಿ. ಡಿ. ಗಣಪತಿ ಅವರು ಕೊಡವಭಾಷಾ ಕ್ಷೇತ್ರಕ್ಕೆ ಸಲ್ಲಿಸಿದ ಅಮೂಲ್ಯ ಕೊಡುಗೆಯಂತಿದೆ. ವೀರರಾಜಪೇಟೆ ಶ್ರೀ ಕಾವೇರಿ ಆಶ್ರಮದ ಶ್ರೀ ಅಪ್ಪಯ್ಯಸ್ವಾಮಿಗಳವರ ಜೀವನ ವೃತ್ತಾಂತ ಮತ್ತು ಬೋಧೆಗಳನ್ನೊಳಗೊಂಡಿರುವ ಹಾಗೂ ಕೊಡವಭಾಷಾ ಭಾಮಿನೀ ಷಟ್ಪದಿ ಕಾವ್ಯವೆನಿಸಿರುವ 'ಶ್ರೀ ಸದ್ಗುರು ಅಪ್ಪಯ್ಯ ಸ್ವಾಮಿ ಮಹಾತ್ಮ್ಯೆ' ಗ್ರಂಥವು ವಿ. ಎಸ್. ರಾಮಕೃಷ್ಣ ಅವರಿಂದ ರಚಿಸಲ್ಪಟ್ಟಿದ್ದು, ಶ್ರೀ ಅಪ್ಪಯ್ಯ ಸ್ವಾಮಿಯವರ ಶತಮಾನೋತ್ಸವದ ಪ್ರಕಟಣೆಯಾಗಿ ಹೊರಬಂದಿದೆ. 'ಶ್ರೀಕಾವೇರಿ ಮಹಾತ್ಮೆ' ಮತ್ತು 'ಶ್ರೀ ಶನಿದೇವಡ ಮಹಾತ್ಮ್ಯೆ-ಶ್ರೀ ಮಗ್ಗುಲ ಮಹಾತ್ಮ್ಯೆ ಸಹಿತ' ಎಂಬುವು ಕೊಡವಭಾಷೆಯಲ್ಲಿ ಇವರೇ ರಚಿಸಿರುವ ಇತರ ಭಾಮಿನೀ ಷಟ್ಪದಿ ಕಾವ್ಯಗಳಾಗಿವೆ. ಕೊಡವ ಜನಾಂಗದವರಲ್ಲಿ ಉತ್ತಮ ಗುಣಗಳನ್ನು ಬೆಳೆಸುವ ಮತ್ತು ಕೊಡವರ ಹಲವಾರು ಪದ್ಧತಿ, ಕೊಡಗಿನ ವರ್ಣನೆ ಹಾಗೂ ಅಲ್ಲಿಯ ರಾಜಕೀಯ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡುವ ಉದ್ದೇಶದಿಂದ, ವೀರರಾಜಪೇಟೆ ತಾ|| ಕೈಕಾಡುಗ್ರಾಮದ ನಾಡ ಕಲಾಭಿಮಾನಿಗಳು, ಪೇರಿಯಂಡ ಚಂಗಪ್ಪ ಅವರು ರಚಿಸಿದ 'ಕೊಡವಡ ಆಂದೋಳತ್ ಪಾಟ್' ಎಂಬ ಕೃತಿಯನ್ನು ಹೊರ ತಂದಿರುವರು. ಇದೇ ತಾಲೂಕು ನಲವತ್ತೊಕ್ಲು ಗ್ರಾಮದ ಹರಿದಾಸ ಮುಕ್ಕಾಟಿರ ಎಸ್. ಪೂವಯ್ಯ (ಕವಿಶಿಷ್ಯ) ಅವರ 'ವಿಧಿಮಹಿಮೆ' ಮತ್ತು 'ಧ್ರುವಕುಮಾರ' ನಾಟಕಗಳು, ಮಡಿಕೇರಿ ತಾಲೂಕು ಚೇರಂಬಾಣೆ ಶ್ರೀ ಸಿದ್ಧಾಶ್ರಮದ ಶ್ರೀ ನಾರಾಯಣಾನಂದಸ್ವಾಮಿಯವರ 'ಶ್ರೀ ಗುರುಬೋಧೆ', ದೇವಣಗೇರಿಯ ಮೇಜರ್ ಪುಗ್ಗೇರ ಬಿದ್ದಪ್ಪ ('ಬಿನಯ') ಅವರು ಕೊಡವರ ರೀತಿ–ನೀತಿಗಳನ್ನು ಕುರಿತು ಪ್ರಕಟಿಸಿರುವ ಲೇಖನ ಮತ್ತು ಕವಿತೆಗಳ ಸಂಗ್ರಹವಾದ 'ನೆಲ್ಲಕ್ಕಿ ನಡುಬಾಡೆ' ಮಗ್ಗುಲ ಗ್ರಾಮದ ಕುಪ್ಪಚ್ಚಿರ ಮೊಣ್ಣಪ್ಪ ಅವರ ಕೊಡವ ಸಂಸ್ಕೃತಿ ಕುರಿತ ಲೇಖನಗಳ ಸಂಕಲನ 'ಪೊಮ್ಮಾಲೆ ಕೊಡಗ್', ಕೊಡಂದೇರ ಬಿದ್ದಪ್ಪ ಅವರ ಕವನ ಸಂಕಲನ 'ರಾಷ್ಟ್ರಪೂತಾವರೆ' ಮೊದಲಾದವು ಕೊಡವ ಸಾಹಿತ್ಯ ಕ್ಷೇತ್ರಕ್ಕೆ ಸಂದ ಅಮೂಲ್ಯ ಕಾಣಿಕೆಗಳಾಗಿವೆ.

ಮಡಿಕೇರಿಯ ಉಳ್ಳಿಯಂಡ ಎಂ. ಪೂವಯ್ಯ ಅವರು ಈವರೆಗೆ ಅಸಂಖ್ಯಾತ ಲೇಖನಗಳನ್ನು ಪ್ರಕಟಿಸುವುದರೊಡನೆ, ಕೆಲವು ಕೊಡವಭಾಷಾ ಲೇಖಕ–ಲೇಖಕಿಯರ ಪರಿಚಯವನ್ನು ತಾವು ಸಂಪಾದಿಸಿ ಪ್ರಕಟಿಸುತ್ತಿರುವ ಕೊಡವ ಭಾಷಾ ವಾರಪತ್ರಿಕೆ 'ಬ್ರಹ್ಮಗಿರಿ'ಯ ಮೂಲಕ ಮಾಡಿಕೊಟ್ಟಿರುವರು. ಸಮಾಜಸೇವಕ ಮುತ್ತಣ್ಣ ಅವರ ಸಂಕ್ಷಿಪ್ತ ಜೀವನಚರಿತ್ರೆಯನ್ನು 'ಕಣ್ಮರೆ ಆನ ಕರ್ಮಜೀವಿ ಚಕ್ಕೆರ ಬಿ. ಮುತ್ತಣ್ಣ' ಎಂಬ ಹೆಸರಿನ ಕೊಡವಭಾಷಾ ಕೃತಿಯಲ್ಲಿ ನಿರೂಪಿಸಿರುವರು. ಮುಕ್ಕಾಟಿರ ಎಸ್. ಕಾರ್ಯಪ್ಪ ಅವರ ಜೀವನಚರಿತ್ರೆಯನ್ನು ಇವರು ಬರೆದಿದ್ದಾರೆ. ವೀರರಾಜಪೇಟೆ ತಾ॥ ಕೋಣಗೇರಿಯ ಇಟ್ಟೀರ ಕೆ. ಬಿದ್ದಪ್ಪ ಅವರು ಕೊಡವ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ಸಮಸ್ಯೆಗಳ ಬಗೆಗೆ ಹಲವಾರು ಲೇಖನಗಳನ್ನು ಪ್ರಕಟಿಸಿರುವರಲ್ಲದೆ, ಪೌರಾಣಿಕ ಮತ್ತು ಚಾರಿತ್ರಿಕ ವಸ್ತುವುಳ್ಳ ಏಕಪಾತ್ರಾಭಿನಯದ ಕೊಡವಭಾಷಾ ನಾಟಕಗಳನ್ನೂ ರಚಿಸಿರುವರು. ಚಾರಿತ್ರಿಕ ವ್ಯಕ್ತಿಗಳಾದ ದಿವಾನ್ ಬೋಪಣ್ಣ ಮತ್ತು ಚೌರಿರ ಅಪ್ಪಣ್ಣಂಡ ಅವರುಗಳನ್ನು ಕುರಿತು ಅಡ್ಡಂಡ ಸಿ. ಕಾರ್ಯಪ್ಪ ಅವರು ಸೃಷ್ಟಿಸಿರುವ ನಾಟಕಗಳು ಗಮನಾರ್ಹವಾದವು. ಮೂರ್ನಾಡಿನ ಮಡೆಯಂಡ ರವಿ ಸೋಮಯ್ಯ ಅವರ 'ತೆಳ್ ನೀರ್' ಎಂಬುದು 'ದಾಡತಪ್ಪು ?' ಎಂಬ ಕಾದಂಬರಿ ಮತ್ತು ಇತರ ನಾಲ್ಕು ಸಣ್ಣಕಥೆಗಳನ್ನು ಒಳಗೊಂಡಿರುವ ಕಾದಂಬರಿ ಮತ್ತು ಸಣ್ಣಕಥೆಗಳ ಸಂಕಲನವಾಗಿದೆ. ತಮ್ಮ ಪುಸ್ತಕಾರಂಭದಲ್ಲಿ ಕ್ಷಾತ್ರಗುಣ ಸಂಪನ್ನರಾದ ಕೊಡವರು ಬದುಕಿನಲ್ಲಿ ಆದಿಶ್ರೀ ಕಾವೇರಿಯ ಮಹತ್ವದ ಬಗೆಗೂ ಇವರು ಸ್ವಲ್ಪಮಟ್ಟಿಗೆ ಬರೆದಿದ್ದಾರೆ. ಮಡಿಕೇರಿಯ ಬಲ್ಯಂಡ ಬಿದ್ದಯ್ಯ ಅವರು ಕೊಡವ ಭಾಷೆಯಲ್ಲಿ ಸಂಗ್ರಹಿಸಿ ಪ್ರಕಟಿಸಿರುವ ಸುಮಾರು 800ಕ್ಕೂ ಹೆಚ್ಚು ಕೊಡವ ಮನೆತನಗಳ ವಿವರವು ಕೊಡವ ಜನಾಂಗದ ಅಧ್ಯಯನಕ್ಕೆ ಉಪಯುಕ್ತವಾದುದೆನಿಸಿದೆ.

ಈ ಲೇಖಕರೇ ಅಲ್ಲದೇ, ದೇವಣಗೇರಿಯ ಪುಗ್ಗೇರ ಎಂ. ಕರುಂಬಯ್ಯ, ಬಿರುನಾಣಿಯ ಬೊಟ್ಟಂಗಡ ಬೊಳಕಾರಂಡ ಪೊನ್ನಪ್ಪ, ಮಡಿಕೇರಿಯ ಬೊ. ಮಾ. ಮುತ್ತಪ್ಪ, ಎಂ. ಆರ್. ರೈ, ಕೊಳಗದಾಳ್ ಗ್ರಾಮದ ಪೊಡನೋಳಂಡ ಬಿ. ಮುತ್ತಣ್ಣ, ಚೆಯ್ಯಂಡಾಣೆಯ ಸಿ. ವಿ. ಶಂಕರ್ ('ಸಿ'), ಕುಂಜಿಲಗ್ರಾಮದ ಉದಿಯಾಂಡ ಎಂ. ಸೋಮಣ್ಣ, ಬಿಳುಗುಂದದ ಐನಂಡ ಎಂ. ಧನಂಜಯ ('ಧನು', 'ಸವ್ಯಸಾಚಿ'), ಶಿಶಿಮತಿಯ ಕಾನತಂಡ ಎಸ್. ಮುತ್ತಪ್ಪ, ಮೈತಾಡಿಯ ಬಾಳೆಕುಟ್ಟಿರ ಎಂ. ಮಂದಣ್ಣ, ಕುಕ್ಲೂರಿನ ಮಾಳೇಟಿರ ದೊರೆ ತಿಮ್ಮಯ್ಯ, ಹಳ್ಳಿಗಟ್ಟು ಗ್ರಾಮದ ಮನೆಯಪಂಡ ಸಿ. ನಾಚಪ್ಪ (ವಾಸು) ಮೊದಲಾದವರೂ ಕೊಡವ ಬರಹಗಾರರಲ್ಲಿ ಗಮನಾರ್ಹರೆನಿಸಿದವರು. ನರಿಯಂದಡ ಗ್ರಾಮದ ಬೊವ್ವೇರಿಯಂಡ ಪುಟ್ಟಪೆಮ್ಮಯ್ಯ ಅವರು ಕಥೆಗಾರರೂ ಕವಿಗಳೂ ಆಗಿದ್ದು, 'ನಾ ಬಯಂದ ಪೂವ್' ಎಂಬ ಕೊಡವ ಚಲನಚಿತ್ರಕ್ಕೆ ಕಥೆ ಮತ್ತು ಹಾಡುಗಳನ್ನು ಇವರೇ ರಚಿಸಿಕೊಟ್ಟಿರುವರು.

ಈಚಿನ ತಲೆಮಾರಿನವರಲ್ಲಿ ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಮಾತ್ರವೇ ಅಲ್ಲದೆ, ಕೊಡವ ಭಾಷಾ ಸಾಹಿತ್ಯದ ವಿವಿಧ ಪ್ರಕಾರಗಳಲ್ಲೂ ಬರವಣಿಗೆ ಮಾಡುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿದೆ. ಅಂತಹ ಕೊಡವ ಭಾಷಾ ಲೇಖಕರಲ್ಲಿ, ವೀರರಾಜಪೇಟೆಯ ಮುಲ್ಲೇರ ಯಂ. ಅಯ್ಯಪ್ಪ (ಜಿಮ್ಮಿ), ಗೋಣಿಕೊಪ್ಪಲಿನ ಮನೆಯಪಂಡ ಹರೀಶ್ ನಾಚಪ್ಪ, ಅವಡಂಡ ಜಗಮೊಣ್ಣಪ್ಪ, ಪೇರೂರ್ ಗ್ರಾಮದ ಬೊಟ್ಟೋಳಂಡ ಮಾ. ಮಿಟ್ಟು, ಪಾರಾಣೆಯ ಐಚೋಡಿಯಂಡ ಬಿ. ಪಳಂಗಪ್ಪ, ಮುಕ್ಕಾಟಿರ ಪಿ. ಮಿಥುನ, ಬೊಳ್ಳಚೆಟ್ಟಿರ ಎ. ಕುಶಾಲಪ್ಪ, ಬೊಳಕಾರಂಡ ಪೂಕುಂಞ, 'ಕಾವೇರಿ ಕಂದ', ತೆರಾಲು ಗ್ರಾಮದ ಬೊಟ್ಟಂಗಡ ಮಾದಪ್ಪ, ಕುಲ್ಲುಚಂಡ ಚಂಗಪ್ಪ, ಕಕ್ಕಬ್ಬೆಯ ಉದಿಯಾಂಡ ಎಂ. ಸೋಮಣ್ಣ, ಅರೆಯಡ ಗಿರೀಶ್ ಗಣಪತಿ, ನಲ್ಲೂರಿನ ಬೋಂಗಡಡ ಜಗದೀಶ್ ತಿಮ್ಮಯ್ಯ, ವೀರರಾಜಪೇಟೆಯ ಮುದ್ದಿಯಡ ಕುಶ ಪೊನ್ನಪ್ಪ, ಭದ್ರಗೊಳದ ಕಾಣತಂಡ ಎಸ್. ಮುತ್ತಪ್ಪ, ಅಜ್ಜಿನಿಕಂಡ ಸಿ. ಮಹೇಶ್, ನೆಲಜಿಯ ತುಂಬೆರ ರಘು, ಬೊಟ್ಟಂಗಡ ಗಿರೀಶ್, ನಾಲಡಿಯ ಪರದಂಡ ಜೆ. ತಿಮ್ಮಯ್ಯ, ಚೆಂಬೆಬೆಳ್ಳೂರಿನ ಎಂ. ಮೊಯಿದಿನ್, ಕಾನೂರಿನ ಚೆರಿಯಪಂಡ ಶ್ಯಾಂ, ಕಟ್ಟೆಮಾಡಿನ ಲಾಲು ಕುಟ್ಟಪ್ಪ, ಕೋಪಟ್ಟಿಯ ಚೆನ್ನಪಂಡ ಸತೀಶ್ ಬೋಪಯ್ಯ, ಬಾಡಗದ ಕೆ. ಬೀಪಿ, ಕೊಣಂಜಕೇರಿಯ ಬೊಳಕಾರಂಡ ಎಂ. ಪೊನ್ನಪ್ಪ, ಮಂಡೇಡ ವಿಠಲ್, ಬೋಡಂಗಡ ಜಗದೀಶ್, ದೇಚೂರಿನ 'ಅಂಜನ' ಮಧು ಮಾಚಯ್ಯ, ಸುರೇಶ್ ಚೋಣೀರ, ಕೇಕಡ ಬೆಲ್ಲು, ಚೇರಂಡ ಹಿರಣ್ ತಿಮ್ಮಯ್ಯ, ಕಳ್ಳಿಚಂಡ ರಾಬಿನ್, ಚೆಯ್ಯಂಡ ಹರೀಶ್ ಮೊದಲಾದವರನ್ನು ಇಲ್ಲಿ ಪ್ರಸ್ತಾಪಿಸಬಹುದು. ಗೌಡ ಸಮಾಜದವರು ಆಡುವ ಅರೆಭಾಷೆಯಲ್ಲಿಯೂ ಕೆಲವರು ಕಾವ್ಯರಚನೆ ಮಾಡಿರುವುದು ಗಮನಾರ್ಹ. ಹೊದ್ದಟ್ಟಿ ಭವಾನಿಶಂಕರ್, ಕೊಡಕಂಡಿರ ಪೊನ್ನಪ್ಪ ಮತ್ತು ಕುಲ್ಲಚನ ಕಾರ್ಯಪ್ಪ ಅವರುಗಳು ಅರೆಭಾಷೆಯಲ್ಲಿ ಪದ್ಯ ರಚಿಸಿದವರಲ್ಲಿ ಮೊದಲಿಗರು.

**ಬರಹಗಾರ್ತಿಯರು**

ಕನ್ನಡ ಮತ್ತು ಕೊಡವ ಸಾಹಿತ್ಯಕ್ಕೆ ಈ ಜಿಲ್ಲೆಯ ಲೇಖಕಿಯರ ಕಾಣಿಕೆಯೂ ಪರಿಗಣನಾರ್ಹವಾದುದು. ಸಣ್ಣಕಥೆ,

ಕಾವ್ಯ, ಪ್ರಬಂಧ, ಕಾದಂಬರಿ, ಕ್ಷೇತ್ರಪರಿಚಯ, ಜಾನಪದ, ಬಾಲಸಾಹಿತ್ಯ, ಗೃಹವಿಜ್ಞಾನ, ಅನುವಾದ, ವಿಮರ್ಶೆ,ನಾಟಕ, ಇತ್ಯಾದಿ ಹಲವು ಪ್ರಕಾರಗಳಿಗೆ ಸಂಬಂಧಿಸಿದಂತೆ ಈ ಲೇಖಕಿಯರು ತಮ್ಮ ಕೃತಿಗಳನ್ನೂ ಸಂಗ್ರಹಗಳನ್ನೂ ಹೊರತಂದಿದ್ದಾರೆ. ನವೋದಯ ಕಾಲದಲ್ಲಿ ಬಂದ ಕನ್ನಡದ ಪ್ರಥಮ ಬಂಡಾಯ ಹಾಗೂ ಸ್ತ್ರೀವಿಮೋಚನಾವಾದಿ ಮನೋಭಾವದ ಮತ್ತು ಮೂವತ್ತರ ದಶಕದಲ್ಲೇ ಮಹಿಳೆಯರ ಸಮಸ್ಯೆ ಕುರಿತು ಬರೆಯುವ ದಿಟ್ಟತನ ತೋರಿದ ಲೇಖಕಿ, ಸೋಮವಾರಪೇಟೆ ತಾಲೂಕು ಗುಂಡಿಕುಟ್ಟಿಯ ಗೌರಮ್ಮ (ಶ್ರೀಮತಿ ಬಿ. ಟಿ. ಗೋಪಾಲಕೃಷ್ಣ) ಅವರು 'ಕೊಡಗಿನ ಗೌರಮ್ಮ' ಎಂದು ಖ್ಯಾತರಾಗಿರುವರು. 'ಮನುವಿನ ರಾಣಿ' ಎಂಬುದು ಇವರಿಗೆ ಶ್ರೇಷ್ಠ ಕಥೆಗಾರ್ತಿಯೆಂಬ ಪ್ರಸಿದ್ಧಿಯನ್ನು ತಂದು ಕೊಟ್ಟ ಕಥೆ. ಇವರು ರಚಿಸಿದ ಸುಮಾರು 21 ಕಥೆಗಳು 'ಕಂಬನಿ' ಮತ್ತು 'ಚಿಗುರು' ಎಂಬ ಎರಡು ಕೃತಿಗಳಲ್ಲಿ ಸಂಗ್ರಹಗೊಂಡಿದ್ದು, ಇಲ್ಲಿಯ ಕೆಲವು ಉತ್ಕೃಷ್ಟ ಕಥೆಗಳನ್ನು ಆಯ್ದು 'ಗೌರಮ್ಮನ ಕಥೆಗಳು' ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ಮಡಿಕೇರಿಯಿಂದ ಪ್ರಕಟಿಸಲಾಗಿದೆ. ಬಿರುನಾಣಿಯ ಬಿಟ್ಟಿಯಂಡ ಎ. ದೇವಕಿಯಮ್ಮ ಅವರು ಹರದಾಸ ಅಪ್ಪಚ್ಚ ಕವಿಗಳ ಪ್ರೇರಣೆಯಿಂದ ಕಾವ್ಯರಚನೆಗೆ ತೊಡಗಿದ್ದು, ರಾಷ್ಟ್ರವೀರರ, ದೇಶಭಕ್ತರ, ಪಾನನಿರೋಧ ಮತ್ತು ದೇವರ ಮೇಲಿನ ಕವಿತೆಗಳನ್ನು ರಚಿಸಿ ಜನಪ್ರಿಯ ಕವಯಿತ್ರಿಯೆನಿಸಿದ್ದಾರೆ. 'ಯೋಗಿನಿ' ಕಾವ್ಯನಾಮದ ಡಾ॥ ಮುಕ್ಕಾಟಿರ (ಕುಂಜೇರಿ) ನೀಲಮ್ಮ ಮುತ್ತಣ್ಣ ಅವರ ರಚನೆಗಳಾದ 'ಅಂಕುರ', 'ಮಸಣದ ಕೂಗು' ಮತ್ತು 'ಕವಿಮುಗುಳು' ಎಂಬ ಮೂರು ಕಥಾಸಂಗ್ರಹಗಳು, 'ವಾಸ್ತವ' ಎಂಬ ಕವನ ಸಂಕಲನ ಹಾಗೂ 'ಅಚ್ಚುನಾಯಕ' ಮತ್ತು 'ಪೊನ್ನಪ್ಪ' ಎಂಬ ಮಕ್ಕಳ ಸಾಹಿತ್ಯ ಕೃತಿಗಳು ಸಹಾ ಗಮನಾರ್ಹವೆನಿಸಿವೆ. ಸಮಾಜ ಸೇವೆಯಲ್ಲಿ ಪರಿಣತಿ ಪಡೆದಿರುವ ಬಲಮುರಿಯ ಪದ್ಮಾವತಿ ಚಿನ್ನಪ್ಪ ರಸ್ತೋಗಿ ಅವರು ಅನೇಕ ಕಥೆ ಮತ್ತು ಲೇಖನಗಳನ್ನು ರಚಿಸಿರುವರಲ್ಲದೆ, 'ಕೊಡಗಿನ ಹೆಣ್ಣು ಮುತ್ತಮ್ಮ' ಎಂಬ ಕಥೆಯಿಂದ ಜನಪ್ರಿಯರಾಗಿದ್ದಾರೆ.

ವೀರರಾಜಪೇಟೆ ತಾಲೂಕು ಪಾರಾಣೆಯಲ್ಲಿ 1990ರಲ್ಲಿ ಜರುಗಿದ 5ನೇಯ ಕೊಡವ ತಕ್ಕ್ ಸಮ್ಮೇಳನದ ಅಧ್ಯಕ್ಷೆರಾಗಿದ್ದ ಪೊಲ್ಲಿಬೆಟ್ಟದ ಕೊತಂಡ ಪಾರ್ವತಿ ಪೂವಯ್ಯ ಅವರು ಪ್ರಕಟಿಸಿರುವ ಕೃತಿಗಳೆಂದರೆ, 'ಕೊಡಗಿನ ಸಣ್ಣ ಕಥೆ ಮತ್ತು ಕವನಗಳು', 'ಕೊಡಗಿನ ಕಥೆಗಳು ಮತ್ತು ಕವನಗಳು', 'ಭುಗಿಲ ಗೊಂಚಲು', 'ಭೈರವಿ', 'ವಿಧಿವಿಲಾಸ', ಇತ್ಯಾದಿ. ಇವರು ನಾಣ್ಣುಡಿಗಳನ್ನು ಸಂಗ್ರಹಿಸಿರುವರಲ್ಲದೆ, ಕೊಡವ ಭಾಷೆಯಲ್ಲಿಯೂ ಕಥೆ, ಕವನ ಮೊದಲಾದುವನ್ನು ರಚಿಸಿದ್ದಾರೆ. ಅಧ್ಯಯನ, ಛಂದಸ್ಸು ಮತ್ತು ವಿಮರ್ಶಾ ಕ್ಷೇತ್ರಗಳಲ್ಲಿ ಗಮನಾರ್ಹ ಮತ್ತು ವಿದ್ವತ್ಪೂರ್ಣ ಕೃತಿಗಳನ್ನು ಬರೆದಿರುವ ತೊರೆನೂರಿನ ಡಾ॥ ಟಿ.ವಿ. ಪದ್ಮಾಶೇಖರ್ (ಟಿ.ವಿ. ಪದ್ಮಾವತಿ) ಅವರು, 'ಕನ್ನಡ ಛಂದಸ್ಸು : ಒಂದು ಅಧ್ಯಯನ' ಮತ್ತು 'ಸಮಾವೇಶ' ಕೃತಿಗಳೊಡನೆ ಪ್ರೊ॥ ಟಿ.ಜಿ. ಕಲಘಟಗಿ ಅವರ ಮೂಲ ಕೃತಿಯನ್ನು 'ಜೈನ ಶಾಸ್ತ್ರ-ಕೆಲವು ಅಧ್ಯಯನಗಳು' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿ ಹೊರತಂದಿರುವರು. ಇವರ 'ಹಕ್ಕಿಯ ಹರಯ' ಎಂಬ ಕವನ ಸಂಕಲನವು ಅಂಬರೀಶ್ ಸಾಹಿತ್ಯ ಪ್ರಶಸ್ತಿ ಮತ್ತು ಶ್ರೀಮತಿ ರತ್ನಮ್ಮ ಹೆಗ್ಗಡೆ ಬಹುಮಾನಗಳನ್ನು ಗಳಿಸಿದೆ. 'ಅರಳದ ಮೊಗ್ಗು', 'ಕೊಡಗಿನ ಮಲ್ಲಿಗೆ' ಮತ್ತು 'ಇಂಪ್ರಗೋಪ' ಎಂಬ ಕವನ ಸಂಕಲನಗಳನ್ನು ಪ್ರಕಟಿಸಿರುವವರು ಮೂರ್ನಾಡಿನ ಕವಯಿತ್ರಿ ಪಾಂಡಂಡ ಎಂ. ತಂಗಮ್ಮ ಅವರು. ಕಥೆ, ಕವನ, ಲೇಖನ, ಪ್ರಹಸನ, ಇತ್ಯಾದಿಗಳನ್ನು ರಚಿಸಿರುವ ಗೌರು ಎಸ್. ಭಟ್ ಅವರು ವೀರರಾಜಪೇಟೆಯವರಾಗಿದ್ದು, ಲಲಿತಾ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜೀವನ ಸ್ಮರಣೆಗಳುಳ್ಳ ಉಮಾಶಂಕರ ಅವರ ಹಿಂದಿ ಕೃತಿ 'ಮೇರೆ ಪತಿ ಮೇರೆ ದೇವತಾ' ಎಂಬುದನ್ನು 'ನನ್ನ ಪತಿ ನನ್ನ ದೇವರು' ಎಂದು ಭಾಷಾಂತರಿಸಿರುವರು. ಕೊಡಗು ಜಾನಪದದ ಸಾಂಸ್ಕೃತಿಕ ಅಧ್ಯಯನ ಕೈಗೊಂಡಿರುವ ಸೋಮವಾರಪೇಟೆ ತಾಲೂಕು ಮದಲಾಪುರದ ಪಾಲಚ್ಚಂಡ ಎ. ತುಳಸೀದೇವಿ (ಕೊಡಗಿನ ತುಳಸೀದೇವಿ) ಅವರು ಕವಯಿತ್ರಿ ಮತ್ತು ಸಂಶೋಧಕಿ. ಇವರು ಪ್ರಕಟಿಸಿರುವ 'ವೀರರಾಜಪೇಟೆ ತಾಲೂಕು ದರ್ಶನ' ಎಂಬುದು ಆ ತಾಲೂಕಿನ ಸಮಗ್ರ ಚಟುವಟಿಕೆಗಳನ್ನು ಪರಿಚಯಿಸುವ ಕೃತಿ. ಸೋಮವಾರಪೇಟೆಯ ಡಿ. ಕೆ. ಭಾಗ್ಯ ಅವರು ಕವಯಿತ್ರಿಯಾಗಿದ್ದು, ತಮ್ಮ ಎರಡು ಕವನ ಸಂಗ್ರಹ ಕೃತಿಗಳನ್ನು 'ಬದುಕಿನ ತಕ್ಕೆಯಲ್ಲಿ' ಮತ್ತು 'ಸುಳ್ಳಿನಾಚೆಯ ಸತ್ಯ' ಎಂಬ ಶೀರ್ಷಿಕೆಗಳಲ್ಲಿ ಬೆಳಕು ಕಾಣಿಸಿರುವರು. ಕೊಡಗಿನ ಪ್ರಸಿದ್ಧ ಇತಿಹಾಸಕಾರ ಡಿ.ಎನ್. ಕೃಷ್ಣಯ್ಯ ಅವರ ಮೊಮ್ಮಗಳಾದ ಚೆಟ್ಟಳ್ಳಿಯ ಅತಾತಿಮ್ಮಪ್ಪಯ್ಯ ಅವರು ರಚಿಸಿರುವ 'ಪಾಕಸಂಗಮ' ನಾನಾ ವಿಧದ ಸಸ್ಯಾಹಾರಿ ಅಡುಗೆಗಳನ್ನು ತಯಾರಿಸುವ ವಿಧಾನವನ್ನು ವಿವರಿಸುತ್ತದೆ. 'ಆನಂದಜ್ಯೋತಿ' ಮತ್ತು 'ಗೆದ್ದಲು' ಎಂಬ ಕಾದಂಬರಿ ಮತ್ತು ಕಿರುನಾಟಕ ಕೃತಿಗಳ ಕರ್ತೃವೆಂದರೆ ವಿಜಯಾ ವಿಷ್ಣುಭಟ್ ಅವರು. 'ಕಾವ್ಯ ಕಾವೇರಿ' ಎಂಬುದು ಮಡಿಕೇರಿಯ ಕಮಲ ಕರಿಯಪ್ಪ ಅವರ ಕವನ ಸಂಕಲನ.

ಕೊಡಗಿನ ಭಾಷೆಯನ್ನು ಕುರಿತು ಸಂಶೋಧನ ಕಾರ್ಯವನ್ನು ಕೈಗೊಂಡಿರುವ ಎಂ. ಟಿ. ರತಿ ಅವರ ಪ್ರಯತ್ನವೂ ಇಲ್ಲಿ ಗಮನಾರ್ಹ. ರಾಜ್ಯಶ್ರೀ ಸುಬ್ಬಯ್ಯ ಅವರು ಕೊಡವ ಭಾಷಾ ಲಿಪಿಯ ಬಗೆಗೆ ತಮ್ಮ ಲೇಖನವೊಂದರಲ್ಲಿ ವಿವೇಚಿಸಿರುವುದನ್ನೂ ಇಲ್ಲಿ ಉಲ್ಲೇಖಿಸಬಹುದು. ಎಂ.ಎಂ. ಯಶೋಧಾ ಅವರು ಕೊಡಗಿನಲ್ಲಿ ನಡೆದ ಕ್ರಾಂತಿ ಕುರಿತು ಅಧ್ಯಯನ ನಡೆಸಿರುವರು. ಕೊಡವ ಜನಾಂಗ ಮತ್ತು ಸಂಸ್ಕೃತಿ ಬಗೆಗೆ ರಾಣೀ ಕುಟ್ಟಯ್ಯ ಅವರು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ ಅಧ್ಯಯನಪೂರ್ಣ ಬರಹಗಳು ಉಪಯುಕ್ತವಾಪುವು. ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡುತ್ತಿರುವ ಮತ್ತೊರ್ವ ಗಮನಾರ್ಹ ಬರಹಗಾರ್ತಿ ಗೋಣಿಕೊಪ್ಪಲಿನ ಡಾ॥ ಕಾವೇರಿ ಭಟ್ (ಕೊಡಗಿನ ಪ್ರಸಿದ್ಧ ರಾಜಕಾರಣಿಯಾಗಿದ್ದ ಸಿ. ಎಂ. ಪೂಣಚ್ಚ ಅವರ ಮಗಳು). ಮಕ್ಕಳಿಗಾಗಿ ರಚಿಸಿದ 'ಒನ್ಸ್ ಅಪಾನ್ ಎ ಫಾರೆಸ್ಟ್' ಎಂಬ ಇವರ ಪುಸ್ತಕವು 1985ರ ಸಿ.ಬಿ.ಟಿ.–ಯುನಿಸೆಫ್ ಪ್ರಶಸ್ತಿಗೆ ಪಾತ್ರವಾಗಿದೆಯಲ್ಲದೆ, 'ದಿ ಟ್ರೂತ್ (ಆಲ್‌ಮೋಸ್ಟ್) ಎಬೌಟ್ ಭರತ್' ಎಂಬ ಕಾದಂಬರಿಯು ವಿಮರ್ಶಕರ ಗಮನ ಸೆಳೆದಿದೆ. ಇವರೇ ಅಲ್ಲದೆ, ಶ. ಗ. ನಯನತಾರ, ಸಿ.ಜಿ. ಜಾನಕಿ, ಹೇಮಲತಾ ಹೆಗ್ಗಡೆ, ಎ. ಬಿ. ಮಾಲತಿ, ಎ. ಬಿ. ಶಿವದೇವಿ, ಮಾಲತಿ ಅಲಂಕಳಿಯ, ಪದ್ಮಾ ಕಲ್ಮಾಡಿ, ಅಜ್ಜಿಕುಟ್ಟಿರ ರೀಟಾ ಚೆಂಗಪ್ಪ, ರಾಣಿ ಅಪ್ಪಣ್ಣ ಕೊಡಿಗೆ, ಪಿ.ಬಿ. ಸರಸ್ವತಿ, ಕುಸುಮಾ ದೇವಯ್ಯ, ಎನ್. ಟಿ. ತುಳಸಿಮಾಲಾ, ಗೀತಾ ರಾಜನ್, ಸುಧಾ ಶ್ರೀಧರ್, ಕೆ. ಜಿ. ಕವಿತಾ, ಕೆ.ಎಂ. ಶ್ವೇತಾ, ಶಿವದೇವಿ ಅವನೀಶ್ಚಂದ್ರ, ಕೆ. ಎಂ. ದೇವಕಿ, ಕೆ. ಎಸ್. ಶೋಭಾ, ತೋ. ಸರೋಜಾ ಸೋಮಯ್ಯ, ತಾತಂಡ ಪ್ರಭಾ ನಾಣಯ್ಯ, ಬಿ. ಎನ್. ಸುನಂದ, ಎನ್.ಸಿ. ನೀಲಮ್ಮ, ಮಂಜುಳ, ಹೆಚ್. ಎಸ್. ಸುಶೀಲ, ಟಿ.ಸಿ. ಭಾರತಿ, ವಿದ್ಯಾ ಶೆಣೈ, ಹೇಮಲತ, ಅಪರ್ಣ ಹುಲಿತಾಳ, ವಿಮಲಾ ರಾವ್, ಕಾವೇರಿ ಕುಶಾಲಪ್ಪ ಮೊದಲಾದವರು ಕಥೆ, ಕವನ, ಲೇಖನ, ನಾಟಕ, ಇತ್ಯಾದಿಗಳನ್ನು ಪ್ರಕಟಿಸುವುದರೊಡನೆ ಪ್ರಸಿದ್ಧಿ ಪಡೆದಿರುವರು.

ಕನ್ನಡವಲ್ಲದೆ ಕೊಡವ ಭಾಷೆಯಲ್ಲಿಯೂ ಸಾಹಿತ್ಯ ಸೇವೆಗೈದವರಲ್ಲಿ, ಕೊಡವ ಗಾದೆಗಳ ಸಂಗ್ರಹವನ್ನು ಪ್ರಕಟಿಸಿರುವ ಸಿದ್ದಾಪುರದ ಚೇಂದಂಡ ದೇಚಮ್ಮ ಕರುಂಬಯ್ಯ, ಕಕ್ಕಬ್ಬೆಯ ಚೋಂದಮ್ಮ ರಾಮಚ್ಚ, ಕೊಡವ ಭಾಷೆ ಮತ್ತು ಸಾಹಿತ್ಯ ಕುರಿತು ಬರೆದಿರುವ ಮೀನಾ ಕೊಡ್ಲೆಕೆರೆ ಮೊದಲಾದವರು ಗಮನ ಸೆಳೆಯುತ್ತಾರೆ. ಕೂತಂಡ ಪಾರ್ವತಿ ಪೂವಯ್ಯ ಅವರ 'ಕೊಡಗಿನ ಸಣ್ಣ ಕಥೆಗಳು' ಕೃತಿಯೂ ಕೊಡವ ಭಾಷೆಯಲ್ಲಿದೆ. ಕೊಡಂದೇರ ಶ್ರೀಮತಿ ಬಿದ್ದಪ್ಪ (ತಾವರೆ) ಅವರೂ ಕೊಡವ ಭಾಷೆಯಲ್ಲಿಯೇ ತಮ್ಮ ಕವನ ಸಂಕಲನವನ್ನು ಹೊರತಂದಿದ್ದಾರೆ. ಕೊಡವ ಭಾಷೆಯಲ್ಲಿ ತಮ್ಮ ಕವನ ಮತ್ತು ಕಥೆಗಳನ್ನು ಹೊಸೆದಿರುವವರೆಂದರೆ, ಸೋಮವಾರ ಪೇಟೆಯ ಕಲ್ಲೇಂಗಡ ಸುನೀತ ಅಪ್ಪಚ್ಚು, ಅಮ್ಮಾಣಿಚಂಡ ಸಿ. ತಂಗಮ್ಮ, ನೆಮ್ಮಲೆಯ ಚಿಂಡಾಮಾಡ ಸುಧಾ ಮಾದಪ್ಪ, ಕುರ್ಚಿ ಗ್ರಾಮದ ಅಜ್ಜಮಾಡ ಸುಧಾ ಮುತ್ತಣ್ಣ, ಪೊಯ್ಯೇಟಿರ ಮಂಜುಳಾ ಸೋಮಯ್ಯ, ಕಾಯಿಮಾನಿಯ ಕೈಪಳೆರ ಶಾಂತಿ ತಮ್ಮಯ್ಯ, ಬಾಡಗದ ಕುಪ್ಪಂಡ ಉಷಾ ಮುದ್ದಪ್ಪ, ಬಿಳಿಗೇರಿಯ ಎಂ. ರೇಖಾ ಮಾದಪ್ಪ, ಚೂರಿಕಾಡ್ ಗ್ರಾಮದ ಕಲ್ಲೇಂಗಡ ಸರಿತಾ, ಮಾಡಪಂಡ ವಿನು, ಕಡಂಗ ಮುರೂರ್ ಗ್ರಾಮದ ಬಲ್ಲಟಿಕಾಳಂಡ ರೀತ, ಚೆಂಬಾಂಡ ಶಿವಿ ಭೀಮಯ್ಯ, ಮೇಕೂರಿನ ಪುಲಿಯಂಡ ಸುಮಿ ಚಂಗಪ್ಪ ಮುತ್ತಿತರರು.

## ಜಾನಪದ

ಜನಪದ ಸಾಹಿತ್ಯ, ನೃತ್ಯ ಮತ್ತು ಆಚರಣೆಗಳು ಕೊಡಗು ಸಂಸ್ಕೃತಿಯ ಮೂಲಾಧಾರವಾಗಿರುವಂತಹವು. ಹಬ್ಬಗಳ ಆಚರಣೆಗಳು, ವಿವಾಹಾದಿ ಶುಭಕಾರ್ಯಗಳು, ಜನನ–ಮರಣ ಸಂದರ್ಭಗಳು, ತಿಥಿ–ಕರ್ಮಾಂತರಗಳು ಮೊದಲಾದ ಸನ್ನಿವೇಶಗಳಲ್ಲಿ ಹಾಡುವ ಹಾಡುಗಳು ಮುಖ್ಯವಾಗಿ ಕೊಡವರ ವಿಶಿಷ್ಟ ಸಂಸ್ಕೃತಿಯನ್ನು ಮತ್ತು ಅವರ ಪೂರ್ವಜರ ಮನೋಧರ್ಮ, ಅಭಿರುಚಿ, ಇತ್ಯಾದಿಗಳನ್ನು ಸಹಜವಾಗಿ, ಸುಂದರವಾಗಿ ಮತ್ತು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತವೆ.

ಜನಪದ ಹಾಡುಗಳು : ಕೊಡಗಿನ ಸಾಂಸ್ಕೃತಿಕ ಒಳನೋಟಗಳನ್ನು ಪರಿಚಯಿಸುವ ಕೊಡವ ಜನಪದ ಸಾಹಿತ್ಯ ಪ್ರಕಾರದಲ್ಲಿ ದುಡಿಕೊಟ್‌ಪಾಟ್ ಮುಖ್ಯವಾಗಿದ್ದು, ಈ ದುಡಿಕೊಟ್‌ನಲ್ಲಿ ಬಾಳೋಪಾಟ್, ಮಂಗಲಪಾಟ್, ದೇವಡಪಾಟ್, ಬೆಂದುಪಾಟ್, ಮನೆಪಾಟ್, ಚಾವುಪಾಟ್, ಪೊಲಚಿಪಾಟ್, ಬಟ್ಟೆಪಾಟ್, ಬೋಡ್‌ಪಾಟ್, ಪುತ್ತರಿಪಾಟ್, ಕೋಲಾಟ್ ಪಾಟ್, ಜೋಯಿಪಾಟ್, ಇತ್ಯಾದಿಗಳು ಆಯಾಯ ಸಂದರ್ಭವನ್ನನುಸರಿಸಿ ಹಾಡಲ್ಪಡುತ್ತವೆ. ಕೊಡವರು ಆಚರಿಸುವ ಹಬ್ಬಗಳಲ್ಲಿ ವಿಶಿಷ್ಟವಾದುವೆಂದರೆ ಕೈಲ್‌ಪೊಳ್ದ್, ಕಾವೇರಿ ಸಂಕ್ರಮಣ ಮತ್ತು ಹು(ಪು)ತ್ತರಿ. ಈ ಹಬ್ಬಗಳ ಆಚರಣೆಯ ಸಂದರ್ಭಗಳಲ್ಲಿಯೂ ಪ್ರಮುಖ ಹಾಡುಗಳು ಹಾಡಲ್ಪಡುತ್ತವೆ. ನಡಿಕೇರಿಯಂಡ ಚಿಣ್ಣಪ್ಪ ಅವರ 'ಪಟ್ಟೋಲೆ ಪಳಮೆ'ಯಲ್ಲಿ ಸಂಗ್ರಹಗೊಂಡಿರುವ ಹಾಡುಗಳು

ಮಹತ್ವವಾದವು. ಕೊಡಗಿನಲ್ಲಿ ಪ್ರಾಂತೀಯ ಹಬ್ಬಗಳನ್ನು ಆಚರಿಸುವಾಗ ಲಯಬದ್ಧವಾಗಿ ತಾಳಗತಿಗೆ ತಕ್ಕಂತೆ ಹಾಡುವ ಮೂಲ ಕೊಡವ ಭಾಷೆಯಲ್ಲಿಯ ದೇಶಕಟ್ಟ್‌ಪಾಟ್ ಕುರಿತು ಈ ಗ್ರಂಥದಲ್ಲಿ ವಿವರಗಳನ್ನು ಕೊಡಲಾಗಿದೆ. ಇಲ್ಲಿಯ ಹಾಡುಗಳು ಕೊಡಗಿನ ಜನಜೀವನದ ಮೌಲ್ಯವನ್ನೂ ನಂಬಿಕೆಯನ್ನೂ ಪ್ರತಿಪಾದಿಸುತ್ತವೆ. ಅಲ್ಲದೆ, ಇವು ವಿಮರ್ಶಾತ್ಮಕವೂ ಚರ್ಚಾಸ್ಪದವೂ ಕಾವ್ಯಮಯವೂ ಆಗಿರುವಂತಹವು.

ತಮ್ಮ ಬಾಳ್ವೆಯು ಸುಗಮವಾಗಿ ಸಾಗುವಂತೆ ದೇವರನ್ನು ಕುರಿತು ದುಡಿಯನ್ನು ಬಾರಿಸುತ್ತಾ ಕುಣಿಯುವ ಸಂದರ್ಭದಲ್ಲಿ ಹೇಳಲಾಗುವ ಹಾಡು 'ಬಾಳೋಪಾಟ್' ಬದುಕನ್ನು ಕುರಿತದ್ದು. ಇದನ್ನು ಹಬ್ಬ-ಹರಿದಿನ ಮತ್ತು ಮದುವೆ-ಉತ್ಸವಗಳಲ್ಲಿ ಹಾಡಲಾಗುತ್ತದೆ. ಹಿಂದೆ ಆಗಿರುವ ಮತ್ತು ಮುಂದೆ ಆಗಲಿರುವ ಸಂಗತಿಗಳನ್ನು ಕುರಿತು ಹೇಳುವಂತಹದು 'ಜೋಯಿಪಾಟ್'. ದುಡಿಯನ್ನು ಪಕ್ಕವಾದ್ಯವನ್ನಾಗಿ ಮಾಡಿಕೊಂಡು ಹಾಡುವ ಈ ಪಾಟ್‌ನಲ್ಲಿ ಅನೇಕ ವಿಧಗಳಿವೆ. ಹುತ್ತರಿಯಲ್ಲಿ ಜೋಗಿಹಾಡನ್ನು ಈ ಪಾಟ್ ಒಳಗೊಂಡಿದೆ. ದಕ್ಷಬ್ರಹ್ಮನ ಯಾಗದ ಸಂದರ್ಭದಲ್ಲಿ ನಡೆದ ಘಟನೆಯನ್ನು ಈ ಪಾಟ್‌ನಲ್ಲಿ ನಿರೂಪಿಸಲಾಗುತ್ತದೆ. ಸುಗ್ಗಿಕಾಲದ ಹಬ್ಬವಾದ ಹುತ್ತರಿಯ ಸಂದರ್ಭದಲ್ಲಿ ಕೋಲು ಹೊಡೆಯುತ್ತಾ 'ಪುತ್ತರಿಪಾಟ್' ಹಾಡಲಾಗುತ್ತದೆ. ಹುತ್ತರಿ ಹಬ್ಬ ಕಳೆದು ಮರುದಿನದಿಂದ ಒಂದು ವಾರದ ತನಕ ಊರಿನ ಜನರೆಲ್ಲರೂ ಸೇರಿ ಸಾಮೂಹಿಕ ನೃತ್ಯ, ಕೋಲಾಟ ಮತ್ತು ಹುತ್ತರಿಪಾಟ್‌ಗಳನ್ನು ಹಾಡುತ್ತಾ ಮನೆಮನೆಗಳಿಗೆ ಹೋಗುವರು. ನಾಟಿ ಕೊಡುವಾಗ, ಅಗೆ ಕೀಳುವಾಗ, ಉಳುವಾಗ, ಒಕ್ಕಿ ತೆಗೆಯುವಾಗಲೂ ಭಾವಪರವಶರಾಗಿ ಹಾಡುವುದುಂಟು. 'ಡೋಲು ಪಾಟ್' ಎಂಬುದು ಹಾಡುವ ಕಲೆಯಾಗಿದ್ದು, ಭಗವತಿ ಮತ್ತು ಭದ್ರಕಾಳಿಯರ ಹಬ್ಬಗಳಲ್ಲಿ ಡೋಲಿನ ಜೊತೆಯಲ್ಲಿ ಇದನ್ನು ಹಾಡಲಾಗುವುದು. ಜನರ ನಡೆ-ನುಡಿಗಳನ್ನು ತಿದ್ದಿ ಅವರ ಬದುಕನ್ನು ಉತ್ತಮಗೊಳಿಸಬೇಕೆಂಬುದು ಈ ಪಾಟ್‌ನ ಆಶಯ. ಹುಲಿಯನ್ನು ಯಾವ ವಿಧದಲ್ಲಿ ಕೊಂದರೂ ಕೊಡವನು ನರಿಮಂಗಲಕ್ಕೆ ಅರ್ಹನಾಗುವನಲ್ಲದೆ, ಹುಲಿ ಮದುವೆಯ ಮುಹೂರ್ತ ಮಾಡುವಾಗ ಕೊಂಬುವಾದ್ಯ, ದುಡಿ ತಾಳ ಸಮೇತ ಹಾಡುವ ಹಾಡನ್ನು 'ನರಿಮಂಗಲ ಪಾಟ್' ಎನ್ನುವರು. ಹಬ್ಬ-ಹರಿದಿನಗಳಲ್ಲಿ ಡೋಲುವಾದನದ ಹಿನ್ನೆಲೆಯಲ್ಲಿ ಕುಣಿಯುತ್ತಾ ಹಾಡುವ 'ಬೋಡ್‌ಪಾಟ್'ನಲ್ಲಿ ದೇವರಕಥೆ, ದೇವರ ಮಹಿಮೆ, ನಡವಳಿಕೆ ವಿಚಾರ, ಸುಖ ಜೀವನ ನಡೆಸುವ ವಿಚಾರ, ಬದುಕಿನ ಸಂಕಷ್ಟಗಳನ್ನು ಅಳುಕದೆ ಎದುರಿಸುವ ವಿಚಾರ, ಇತ್ಯಾದಿಗಳು ವ್ಯಕ್ತಪಡುತ್ತವೆ. ಇವಲ್ಲದೆ, ಜನನ, ಮಗುವಿನ ಬಾಲಲೀಲೆ ಮತ್ತು ಮದುವೆಯ ಹಾಡುಗಳು ಆಯಾ ಸಂದರ್ಭಗಳನ್ನು ಸುಂದರವಾಗಿ ಚಿತ್ರಿಸುತ್ತವೆ. 'ಬಟ್ಟೆಪಾಟ್' ಎಂಬುದು ವಿವಾಹ ಕಾರ್ಯದ ಸಂದರ್ಭದಲ್ಲಿ ವರನನ್ನಾಗಲೀ ವಧುವನ್ನಾಗಲೀ ಸ್ನಾನದ ಮನೆಯಿಂದ ಮುಹೂರ್ತದ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ನಾಲ್ಕು ಜನರು ದುಡಿಯನ್ನು ನುಡಿಸುತ್ತಾ ಮುಂದೆ ಹೋಗುವ ಸಂದರ್ಭದಲ್ಲಿ ಹೇಳುವ ಹಾಡಾಗಿದೆ. ಮದುವೆಗೆ ಒಂದು ದಿವಸ ಮೊದಲು 'ಕರಿಕ್ ಮುರಿಪ' ದಿವಸವೆಂತಲೂ 'ಪಂದಪಣಿ' ದಿವಸವೆಂತಲೂ ಊರುಕೊಡುವುದೆಂತಲೂ ಕರೆಯಲಾಗಿದ್ದು, ಈ ಕಾರ್ಯಗಳು ಮುಗಿದ ತರುವಾಯ ನಾಲ್ಕು ಜನ ಊರವರು ಹಾಡುವ ಪದವೇ 'ಮಂಗಲಪಾಟ್' ಅಥವಾ ಮದುವೆಯ ಹಾಡು. ಮುಹೂರ್ತಕ್ಕೆ ಕುಳಿತ ಕೂಡಲೇ 'ಬಟ್ಟೆಪಾಟ್' ಹಾಡುವುದನ್ನು ನಿಲ್ಲಿಸಿ ಮದುವೆ ಹಾಡನ್ನು ಗಂಡಸರು ಮತ್ತು ಹೆಂಗಸರು ಒಟ್ಟಿಗೇ ಹಾಡುವರು. ಈ ಹಾಡನ್ನು ವರನ ಮುಹೂರ್ತಕ್ಕೆ ಹಾಡುವಂತೆ ಅವಶ್ಯವಿರುವಲ್ಲಿ ಮಾರ್ಪಡಿಸಿ ವಧುವಿನ ಮುಹೂರ್ತಕ್ಕೂ ಹಾಡುವುದುಂಟು. ಇಷ್ಟಲ್ಲದೆ, ಮರಣ ಮತ್ತು ತಿಥಿ-ಕರ್ಮಾಂತರಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ 'ಚಾವುಪಾಟ್' ಅಥವಾ ಸಾವುಪಾಟ್ ಗಮನೀಯವಾದುದು. ಸಾವು ಸಂಭವಿಸಿದ ಸಂದರ್ಭದಲ್ಲಿ ನಾಲ್ಕು ಗಂಡಸರೂ ನಾಲ್ಕು ಹೆಂಗಸರೂ ರಾತ್ರಿಯಿಡೀ ಹಾಡುವ ಈ ಹಾಡಿನಲ್ಲಿ, ಶಕುನ, ಜೀವಮಾನ ರೀತಿ, ಸಂಸಾರದ ದುಃಖ, ಜೀವಾತ್ಮನ ಸ್ಥಿತಿ, ಸ್ವರ್ಗದ ವಿಚಾರ, ಇತ್ಯಾದಿ ಸಂಗತಿಗಳನ್ನು ಪ್ರಸ್ತಾಪಿಸಲಾಗುತ್ತದೆ. ಹಾಗೆಯೇ, ಮರಣ ಹೊಂದಿದವನ ತಿಥಿ-ಕರ್ಮಾಂತರ ಮಾಡುವ ದಿವಸ 'ಪೊಲಚಿಪಾಟ್' ಹಾಡುವರಲ್ಲದೆ, ಶೋಕ ಭರಿತ ರಾಗದಲ್ಲಿ ಹಾಡುವ ಈ ಹಾಡಿನಲ್ಲಿ ಆಧ್ಯಾತ್ಮಿಕ, ತತ್ವ ಬೋಧನೆ, ಬಾಳಿನ ಬವಣೆ, ಜೀವನದ ನಡವಳಿಕೆ, ಸಂಸಾರದ ವರ್ಣನೆ, ವ್ಯಕ್ತಿಗಳ ಗುಣಕಥನ, ಜೀವಾತ್ಮ-ಪರಮಾತ್ಮರ ಐಕ್ಯದ ವಿಚಾರ, ಇತ್ಯಾದಿ ಸಂಗತಿಗಳು ವ್ಯಕ್ತಪಡುತ್ತವೆ.

ದೇವತೆಗಳನ್ನು ಕುರಿತ ಹಾಡುಗಳಲ್ಲಿ 'ಎವ್ವ ಮಕ್ಕ ದೇಬುವಡ ಪಾಟ್'ಎಂಬುದು ಕಾಳಾರಾಟಪ್ಪ, ತಿರ್‌ಚಂಬರತಪ್ಪ, ಬೆಂದ್ರು ಕೋಲಪ್ಪ, ಇಗ್ಗುತಪ್ಪ, ಪಾಲೂರಪ್ಪ, ತಿರುನೆಲ್ಲಿ ಪೆಮ್ಮಯ್ಯ ಮತ್ತು ಪನ್ನಂಗಾಲತ್ತಮ್ಮೆ – ಈ ಏಳು ದೇವತೆಗಳನ್ನು ಕುರಿತದ್ದು. ಈ ಹಾಡಿನಲ್ಲಿ ಐಯಪ್ಪ, ನಾಗಣ್ಣ (ನಾತ) ಮತ್ತು ಕಲ್ಲಕೆರೆ ದೇವಿಯ ಹಾಡೂ ಸೇರಿಕೊಂಡಿದೆ. ಏಳು ದೇವತೆಗಳ ಹುಟ್ಟು, ಅವರು ದೇವತೆಗಳಾಗಿ ನೆಲೆಗೊಂಡ

ಸಂದರ್ಭ, ಆಲೆದಾಡಿದ ಸನ್ನಿವೇಶ ಮತ್ತು ಪ್ರದೇಶ, ಇತ್ಯಾದಿಗಳ ಕಲ್ಪನೆ ಮತ್ತು ಭಾಷೆಗಳು ಮನೋಹರವಾಗಿವೆ. 'ಐವ ಮಕ್ಕ ದೇಬುವಡ ಪಾಟ್' ಎಂಬುದು ಮುತ್ತ್ಲಪ್ಪ, ಪುತ್ತ್ಲಮ್ಮೆ, ಒಗೆರಲೆಪ್ಪ, ರುದ್ರಗುಪ್ಪೆಯಲ್ಲಿ ನೆಲೆಗೊಂಡ ಈರ್ವರು ಹೆಣ್ಣುದೇವತೆಗಳಿಗೆ ಸಂಬಂಧಿಸಿದೆ. ಮದೇರಪ್ಪ, ಅಪ್ಪಂಗಿರಿಯಪ್ಪ ಮತ್ತು ಎಂಟು ಗ್ರಾಮಗಳಲ್ಲಿ ನೆಲೆಗೊಂಡಿರುವ ಪೊರಮಲೆ ಭಗವತಿ – ಈ ಮೂರು ದೇವತೆಗಳನ್ನು ಕುರಿತದ್ದು 'ಮೂವ ಮಕ್ಕ ದೇಬುವಡ ಪಾಟ್'. ಹಾಗೆಯೇ, ಕಾಕೋಟ್ ಅಚ್ಚಯ್ಯ ಮತ್ತು ಅಕ್ಕವ್ವ ಎಂಬ ಇಬ್ಬರು ದೇವತೆಗಳು 'ಇಬ್ಬ ಮಕ್ಕ ದೇಬುವಡ ಪಾಟ್'ನಲ್ಲಿ ವರ್ಣಿತರಾಗಿದ್ದಾರೆ. ಕಾಕೋಟ್ ಅಚ್ಚಯ್ಯನ ಅಪ್ಪಣೆಯಂತೆ ಕಾರಿಕೊಟ್ಟನೆಂಬ ಅಸ್ಪೃಶ್ಯನು ದೇವಸ್ವರೂಪವನ್ನು ಹೊಂದಿ ಈ ದೇವತೆಗಳ ಹತ್ತಿರವೇ ನೆಲೆಗೊಂಡುದನ್ನು ಈ ಹಾಡಿನಲ್ಲಿ ವರ್ಣಿಸಿದೆ. ಕೊಡಗಿನ ಅನೇಕ ಕಡೆಗಳಲ್ಲಿ ಪೂಜಿಸಲ್ಪಡುವ ಶಾಸ್ತಾವು ಅಥವಾ ಸಾರ್ತಾವು ದೇವತೆಯನ್ನು ಕುರಿತ ಹಾಡು 'ಸಾರ್ತಾವುಡಪಾಟ್'. ಕ್ಷೇತ್ರಪಾಲ ದೇವರ ಮತ್ತು ದೇವಸ್ವರೂಪ ಪಡೆದ ಇತರರ ಬಗೆಗೆ 'ಕ್ಷೇತ್ರಪ್ಪಂಡ ಪಾಟ್' ವರ್ಣಿಸುತ್ತದೆ. 'ಚೋಲಿ ಪೊವ್ವೇದಿಯಮ್ಮೆರ ಪಾಟ್', 'ಬಲ್ಲತ್ ನಾಡ್ ಪೊವ್ವೇದಿಯಮ್ಮೆರ ಪಾಟ್' ಮತ್ತು 'ಓಮಾಲೆ ಪುದಿಯೋದಿಡ ಪಾಟ್'ಗಳು ದೇವತೆಗಳನ್ನು ಕುರಿತ ಪಾಟ್‌ಗಳ ಸಾಲಿನಲ್ಲಿ ಬರುವ ಇತರ ಹಾಡುಗಳು. 'ಕೇಳಿ ಪೋನಯಂಡ ಪಾಟ್' ಅಥವಾ ಕೇಳಿ ಮಾಡಿದಂತಹ ಹಾಡುಗಳಲ್ಲಿ ಬರುವ 'ಎವ್ವ ಮಕ್ಕ ದೇವಿಯಂಡ ಪಾಟ್', ಕಲಿಯಾಟಂಡ ಅಜ್ಜಪ್ಪನೆಂದು ಕೊಡಗಿನಲ್ಲಿ ಪ್ರಸಿದ್ಧಿಗೊಂಡು ದೇವತಾಸ್ವರೂಪವನ್ನು ಹೊಂದಿ ಪೂಜಿಸಲ್ಪಡುವ ಮಹಾವೀರ ಪೊನ್ನಪ್ಪನ 'ಕಲಿಯಾಟಂಡ ಪೊನ್ನಪ್ಪಂಡ ಪಾಟ್', ನಡಿಕೇರಿಯಂಡ ಮನೆತನಕ್ಕೆ ಸಂಬಂಧಿಸಿದ 'ನಡಿಕೇರಿಯಂಡ ದೇವೈಯ್ಯನ ಚರಿತ್ರೆ', ಕುಲ್ಲಚ ಚೋಂದುವೆಂಬವನನ್ನು ದ್ವಂದ್ವಯುದ್ಧದಲ್ಲಿ ಹತಮಾಡಿದ ವೀರ ಕೈಯ್ಯಂದಿರ ಅಪ್ಪೈಯನ ಸಾಹಸ ಕುರಿತ 'ಕೈಯ್ಯಂದಿರ ಅಪ್ಪೈಯ್ಯಂಡ ಪಾಟ್', ಹುಲಿ ಮದುವೆಗೆ ಪಾತ್ರನಾದ ಮತ್ತು ಏಳು ವಿಧದ ಕುಣಿತಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದ ಪೊಳ್ಳೆದೇವಿರ ಅಪ್ಪೈಯನ 'ಪೊಳ್ಳೆದೇವಿರ ಅಪ್ಪೈಯನ ಹಾಡು' ಮೊದಲಾದವು ಕೊಡಗಿನ ಸಾಮಾಜಿಕ ಮತ್ತು ರಾಜಕೀಯ ಆಗು–ಹೋಗುಗಳಲ್ಲಿ ಭಾಗವಹಿಸಿ ತಮ್ಮ ಶೌರ್ಯ–ಸಾಹಸಗಳನ್ನು ಪ್ರದರ್ಶಿಸಿ ಪ್ರಸಿದ್ಧರಾದವರ ವೀರಗಾಥೆಗಳಾಗಿವೆ.

ಕೊಡವ ಜನಪದ ಸಾಹಿತ್ಯವನ್ನು ಶಿಶುಸಾಹಿತ್ಯ, ಮದುವೆಯ ಹಾಡುಗಳು, ಸಾವಿನ ಹಾಡುಗಳು, ದೇವರ ಹಾಡುಗಳು ಮತ್ತು ಗಾದೆಗಳು ಎಂಬುದಾಗಿ ಸ್ಥೂಲವಾಗಿ ವಿಭಾಗಿಸಿದ್ದರೂ ಅಧ್ಯಯನದ ದೃಷ್ಟಿಯಿಂದ ಕೊಡವ ಜಾನಪದವನ್ನು ಭಾಷಿಕ ಮತ್ತು ಸಾಹಿತ್ಯಿಕ ಜಾನಪದ, ಕ್ರಿಯಾತ್ಮಕ ಜಾನಪದ ಮತ್ತು ವೈಜ್ಞಾನಿಕ ಜಾನಪದ ಎಂಬುದಾಗಿ ಮೂರು ಬಗೆಯಲ್ಲಿ ವಿಂಗಡಿಸಿ ಆಯಾಯ ವಿಭಾಗಗಳಲ್ಲಿ ಬರುವ ಪ್ರಕಾರಗಳನ್ನು ವಿವೇಚಿಸಲು ಯತ್ನಿಸಿದೆ.* ಇವುಗಳಲ್ಲಿ ಮೊದಲನೆಯ ಬಗೆಯು ಪುರಾಣ, ಐತಿಹ್ಯ, ಕಾವ್ಯ, ಕಥೆ, ಗಾದೆ, ಒಗಟು ಮತ್ತು ಭಾಷೆಗಳನ್ನೂ ಎರಡನೇಯ ಬಗೆಯು ಹಬ್ಬಗಳು, ಸಂಪ್ರದಾಯಗಳು, ನಾಟಕಗಳು, ನೃತ್ಯಗಳು, ಸಂಗೀತ, ಕಲೆ, ಕರಕುಶಲತೆ ಮತ್ತು ಜಾತ್ರೆಗಳನ್ನೂ ಮೂರನೇಯ ಬಗೆಯು ಕೊಡಗಿನಲ್ಲಿರುವ ವಿಪುಲವಾದ ಜಾನಪದವನ್ನು ಸಂಗ್ರಹಿಸುವ ಮತ್ತು ವ್ಯಾಪಕ ಕ್ಷೇತ್ರಕಾರ್ಯದೊಡನೆ ವೈಜ್ಞಾನಿಕವಾಗಿ ಅಧ್ಯಯನಿಸುವ ಅಗತ್ಯ, ಇತ್ಯಾದಿಗಳನ್ನೂ ವ್ಯಕ್ತಪಡಿಸುತ್ತವೆ. ಕಾವೇರಿ ಸಂಕ್ರಮಣದಂದು ಕೆಲವು ಕೊಡವರ ಮನೆಗಳಲ್ಲಿ ಪ್ರಸಿದ್ಧ ಜನಪದ ಕಥನಕಾವ್ಯವೆನಿಸಿದ 'ಗೋವಿನಪದ'ವನ್ನು (ದಿ ಸಾಂಗ್ ಆಫ್ ದಿ ಕೌ) ವಾಚಿಸಲಾಗುತ್ತದೆಂಬುದನ್ನು ಹೆಚ್. ಮೊಗ್ಲಿಂಗನು ತನ್ನ 'ಕೂರ್ಗ್ ಮೆಮೊಯರ್ಸ್' ಗ್ರಂಥದಲ್ಲಿ (ಪು. 44–45) ತಿಳಿಸಿರುವನು; ಈ ಕಾವ್ಯದ ಕಥಾಸಾರವನ್ನೂ ನೀಡಿರುವನು.

ಪಂಜಿರಿ ಮತ್ತು ಪಣಿ ಯೆರವರಲ್ಲಿ ಪ್ರತ್ಯೇಕವಾದ ಜನಪದ ಸಾಹಿತ್ಯವಿದೆ. ಅವುಗಳಲ್ಲಿ ಮುಖ್ಯವಾದುದು ಅವರ ತಿಥಿ ಹಾಡುಗಳು. ಪಂಜಿರಿ ಯೆರವರ ತಿಥಿ ಹಾಡುಗಳು ದಂತಕಥೆಗಳೊಡನೆ ಅವರ ಪೂರ್ವಜರನ್ನು ಕುರಿತು ಕೆಲವು ವಿವರಗಳು ಮತ್ತು ಕುಮೇರು ಕೃಷಿಯ ಹಲವು ಮನೋಜ್ಞ ವಿವರಗಳನ್ನು ನೀಡಿದರೆ, ಪಣಿ ಯೆರವರ ತಿಥಿ ಹಾಡುಗಳಲ್ಲಿ ಬಹುಶಃ ಹತ್ತನೇಯ ಶತಮಾನದ ನಡುಭಾಗದಲ್ಲಿ ಜರುಗಿದೆಯೆಂದು ನಂಬಬಹುದಾದ ಕೆಲವು ಘಟನೆಗಳ ವಿವರಗಳು ದೊರಕುತ್ತವೆ.

ಜನಪದ ನೃತ್ಯಗಳು : ಕರ್ನಾಟಕದ ಇತರ ಪ್ರದೇಶಗಳಲ್ಲಿ ಕಂಡುಬರದ ವಿಶಿಷ್ಟ ಮತ್ತು ವಿವಿಧ ನೃತ್ಯಗಳು ಕೊಡಗಿನಲ್ಲಿರುವುದು ಗಮನಾರ್ಹ. ಬೊಳಕಾಟ್, ಕೊಂಬಾಟ್, ಪೀಲಿಯಾಟ್, ವಾಲಗತ್ತಾಟ್, ಪುತ್ತರಿಕೋಲಾಟ್, ಪರಿಯಕಳಿ, ಚೇರಿಯಾಟ್ (ಚೌರಿಯಾಟ್), ಚೂಳಿಯಾಟ್, ರೆಕ್ಕೆಯಾಟ್,

* ಎಂ. ಬಿ. ಗಾಂಧಿ : 'ಕೊಡಗಿನ ಜಾನಪದ ಸಂಪತ್ತು, ಸ್ವರೂಪ ಹಾಗೂ ಸಂಗ್ರಹ ಕಾರ್ಯ', ಚಂದನ–ಸ್ಮರಣ ಸಂಚಿಕೆ

ಕಪ್ಪೆಯಾಟ್, ಕತ್ತಿಯಾಟ್, ಪಾಂಬಾಟ್, ಕೋಲ್‌ಕಳಿ ಮೊದಲಾದ ಪುರುಷರ ಕುಣಿತಗಳಂತೆಯೇ ಉಮ್ಮತ್ತಾಟ್, ತುಮ್ಮತ್ತಾಟ್, ತಳಿಯತ್ತಾಟ್, ಕುಮ್ಮಚ್ಚಿಯಾಟ್ ಮೊದಲಾದ ಕೊಡವ ಮತ್ತು ಕುಡಿಯ ಮಹಿಳೆಯರ ಕುಣಿತಗಳೂ ಈ ಜಿಲ್ಲೆಯಲ್ಲಿವೆ. ಕೊಡವೇತರರಲ್ಲಿ ಯೆರವ ಗಂಡಸರ ಯೆರವಾಟ್, ಯೆರವ ಹೆಂಗಸರ ಮಂದಿಯಾಟ್, ಕುರುಬ ಗಂಡಸರ ಸುಗ್ಗಿಯ ಕುಣಿತ ಮತ್ತು ಕೋಲಾಟ, ಗಾಣಿಗ ಗಂಡಸರ ಕುಣಿತ, ಪಣಿಯ ಗಂಡಸರ ಕುಣಿತ, ಜೋಗಿ ಕುಣಿತ, ಇತ್ಯಾದಿ ಕುಣಿತಗಳೂ ಹಾಡುಗಳೂ ಇವೆ. ಕೊಂಬು ಕೊಟ್ಟು ವಾಲಗ, ಕೊರ್ತಿಆಟ, ವೀರಭದ್ರನ ಕುಣಿತಗಳೂ ಕೆಲವಾರು ವೇಷಗಳೂ ಕಂಡುಬರುತ್ತವೆ. ಸುಮಾರು 56 ವಿಧದ ನೃತ್ಯಗಳು ಕೊಡಗಿನಲ್ಲಿ ವಿವಿಧ ಜನಾಂಗಗಳವರಿಂದ ನಡೆಯುವುವು.

ಕೊಡವರ ಕುಣಿತಗಳಲ್ಲಿ ಗಂಡಸರು ಕುಪ್ಪಸ, ದಟ್ಟಿ, ರುಮಾಲು, ಪೀಚೆಕತ್ತಿ, ಒಡಿಕತ್ತಿ, ಕೋಲು, ಕೋವಿ, ಇತ್ಯಾದಿಗಳನ್ನು ಧರಿಸಿ ಹಣೆಗೆ ಗಂಧದ ಬೊಟ್ಟನ್ನು ಇಟ್ಟುಕೊಂಡಿದ್ದರೆ, ಹೆಂಗಸರು ಉದ್ದ ಕೈಕಲಾಪತ್ತು, ಜಾಕೆಟ್ಟು ಕಲಾಪತ್ತು, ಬೊಟ್ಟು ಸೀರೆ, ರೇಷ್ಮೆ ವಸ್ತ್ರಗಳನ್ನು ಆಕರ್ಷಕವಾಗಿ ಧರಿಸಿ ಕುತ್ತಿಗೆಗೆ ಅಂದದ ಅಭರಣಗಳನ್ನು ಹಾಕಿಕೊಂಡು, ತಲೆಗೆ ರೇಷ್ಮೆವಸ್ತ್ರವನ್ನು ಕಟ್ಟಿಕೊಂಡು ಹಣೆಗೆ ಕುಂಕುಮದಿಂದ ಬೊಟ್ಟನ್ನು ಇಟ್ಟುಕೊಳ್ಳುವರು. ಆಯಾ ನೃತ್ಯ ಸಂದರ್ಭಗಳಲ್ಲಿ ಕೊಂಬು, ಡೋಲುಪರೆ, ಕುಡಿಕೆಪರೆ, ಮೋರಿ, ವಾಲಗ, ತಮಟೆ, ತಾಳ, ಇತ್ಯಾದಿಗಳನ್ನು ಪಕ್ಕವಾದ್ಯಗಳಾಗಿ ಬಳಸುವರು. ಸಣ್ಣ ಮತ್ತು ದೊಡ್ಡ ಗುಂಪುಗಳಾಗಿ ಅರ್ಧವೃತ್ತಾಕೃತಿಯಲ್ಲಿ ಮತ್ತು ವೃತ್ತಾಕೃತಿಯಲ್ಲಿ ನೃತ್ಯಗಳು ನಡೆಯುವುವು. ಆಯಾ ನೃತ್ಯಗಳಿಗೆ ತಕ್ಕ ಹಾಡುಗಳು ಹಾಡಲ್ಪಡುತ್ತವೆ. ವಿವಿಧ ಪಂಗಡಗಳವರು ತಮ್ಮ ತಮ್ಮ ಸಂಪ್ರದಾಯಗಳಂತೆ ಉಡಿಗೆ ತೊಡಿಗೆಗಳೊಡನೆ ಹಾಡು ಹೇಳುತ್ತಾ ನರ್ತಿಸುವರು.

ಶಿವನು ಭಸ್ಮಾಸುರನನ್ನು ಸಂಹಾರ ಮಾಡುವ ಸಂದರ್ಭದಲ್ಲಿ ಮೂವತ್ತೆರಡು ಭಂಗಿಗಳಲ್ಲಿ ಮಾಡಿದ ನೃತ್ಯದ ಪ್ರತಿರೂಪವೇ 'ಬೊಳಕಾಟ್' ಎಂದು ಭಾವಿಸಲ್ಪಟ್ಟಿದ್ದು, ಇದು ಕೊಡವರ ವೀರಕುಣಿತಗಳಲ್ಲಿ ಪ್ರಮುಖವಾದುದು. 'ಬೊಳಕ್' ಎಂದರೆ ಬೆಳಕು, ದೀಪ ಎಂಬ ಅರ್ಥವಿದ್ದು, ದೈವೀ ಆರಾಧನೆಯ ಹಿನ್ನೆಲೆಯಲ್ಲಿ ಈ ಕಲೆ ಮೂಡಿ ಬಂದಿದೆ. ಈ ನೃತ್ಯವನ್ನು ಮಾಡುವ ಗಂಡಸರು ಚಾಮರ ಮತ್ತು ಬಿಚ್ಚುಗತ್ತಿಗಳನ್ನು ಕೈಯಲ್ಲಿ ಹಿಡಿದು ವಿವಿಧ ಭಂಗಿಗಳಲ್ಲಿ ನೃತ್ಯ ಮಾಡುತ್ತಾರೆ. ಈ ಕುಣಿತದ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ದೇವರ ಸ್ತುತಿ, ಪುರಾಣೇತಿಹಾಸಗಳ ವರ್ಣನೆ ಮಾತ್ರವಲ್ಲದೆ, ವೀರ-ಸಾಹಸಗಳ ಪ್ರತೀಕವೆನಿಸುವ ಕೊಡಗಿನ ಪ್ರಸಿದ್ಧ ಮನೆತನಗಳ ವಿವರಗಳೂ ಇರುತ್ತವೆ.

ಕೈಯಲ್ಲಿ ಜಿಂಕೆಯ ಕೊಂಬುಗಳನ್ನು ಹಿಡಿದುಕೊಂಡು ಕುಣಿಯುವ ಇನ್ನೊಂದು ಕಲೆಯನ್ನು 'ಕೊಂಬಾಟ್' ಎನ್ನುವರು. ಭಸ್ಮಾಸುರನನ್ನು ಸಂಹರಿಸಲು ಅವತಾರವೆತ್ತಿದ ವಿಷ್ಣುವು ಒಂದು ನೃತ್ಯದಲ್ಲಿ ಕೊಂಬನ್ನು ಹಿಡಿದು ಕುಣಿದನೆಂದೂ ಇನ್ನೊಮ್ಮೆ ಪೀಲಿ (ನವಿಲುಗರಿಯ ಕಂತೆ)ಯನ್ನು ಹಿಡಿದು ಕುಣಿದನೆಂದೂ ನಂಬಲಾಗಿದ್ದು, ನರ್ತಕರು ಕೊಂಬುಗಳನ್ನು ಹಿಡಿದುಕೊಂಡು ಭರ್ಜಿ, ಚಾಕುವಿನಂತೆ ಇರಿಯುವ ಭಾವ, ಭಂಗಿಗಳಿಂದ ಕುಣಿಯುವ ನೃತ್ಯ ವಿಶೇಷವನ್ನು ಇದರಲ್ಲಿ ಕಾಣಬಹುದು. ಈ ಕೊಂಬಾಟ್ ಮತ್ತು ಪೀಲಿಯಾಟ್ ಕಲೆಗಳನ್ನು ಕೊಡವರು ತಮ್ಮ ತಮ್ಮ ಗ್ರಾಮದ ಪ್ರಮುಖ ದೇವತೆಗಳ ಆರಾಧನೆಯ ಅಂಗವಾಗಿ ಪ್ರದರ್ಶಿಸುವುದು ರೂಢಿ. 'ವಾಲಗತ್ತಾಟ್' ಎಂಬುದು ಸಾಮಾನ್ಯವಾಗಿ ಹಬ್ಬ, ಮದುವೆ, ಸಾರ್ವಜನಿಕ ಸಭೆ ಮತ್ತು ಸಂತೋಷ ಸಮಾರಂಭಗಳಲ್ಲಿ ಪ್ರದರ್ಶಿಸಲ್ಪಡುವ ಸಾಮೂಹಿಕ ನೃತ್ಯವೆಂತಲೂ ಗುರುತಿಸಲ್ಪಟ್ಟಿದೆ. ಓಲಗ, ಮೋರಿ, ಡೋಲು, ತಾಳ, ಕುಡಿಕೆ, ಪರೆ, ಕೊಂಬು, ತಮ್ಮಟೆ, ಗೆಜ್ಜೆ—ಹೀಗೆ ಹಲವು ವಾದ್ಯಗಳ ಮೇಳವಿರುವುದರಿಂದಾಗಿ ಇದಕ್ಕೆ ಈ ಹೆಸರು. ಪುರುಷರು ಕೈಯಲ್ಲಿ ಪೀಚಕತ್ತಿ, ಒಡಿಕತ್ತಿ ಹಿಡಿದು ವಾದ್ಯಗಳ ಗತ್ತಿಗೆ ಕುಣಿಯುವರಲ್ಲದೆ, ಇವರೊಂದಿಗೆ ಸ್ತ್ರೀಯರೂ ಸೇರಿ ನೃತ್ಯಗೈಯುವುದು ವಿಶೇಷ. ಹಾಗೆಯೇ, ಕೊಂಬು, ಮೋರಿ, ಶ್ರುತಿ, ತಾಳ, ಪರೆ, ಡೋಲು—ಈ ವಾದ್ಯಗಳ ಮೇಳವೇ 'ಕೊಂಬು ಕೊಟ್ಟು ವಾಲಗ'. ಹಬ್ಬ-ಹರಿದಿನ, ಜಾತ್ರೆ—ಉತ್ಸವ—ಮದುವೆ ಮುಂತಾದ ಸಂದರ್ಭಗಳಲ್ಲಿ ನಡೆಯುವ ಈ ಮೇಳದಲ್ಲಿ ಸಾಮಾನ್ಯವಾಗಿ ಏಳು ಜನರಿದ್ದು, ಒಬ್ಬೊಬ್ಬರು ಒಂದೊಂದು ವಾದ್ಯವನ್ನು ನುಡಿಸುವರು. ಮಂಗಳಕಾರ್ಯ ಮಾತ್ರವಲ್ಲದೆ, ಮರಣಕಾಲ, ಇತ್ಯಾದಿ ಸಂದರ್ಭಗಳಲ್ಲಿಯೂ ವಿವಿಧ ರಾಗಗತಿಗಳಲ್ಲಿ ಈ ಮೇಳವು ನಡೆಯುತ್ತದೆ.

ಹೊಸ ಬೆಳೆಯನ್ನು ಕೊಯ್ದು ಇಗ್ಗುತಪ್ಪದೇವರಿಗೆ ಪೂಜೆ ಸಲ್ಲಿಸಿದ ತರುವಾಯ ಪ್ರದರ್ಶಿಸಲಾಗುವ 'ಹುತ್ತರಿ ಕೋಲಾಟ' ಹುತ್ತರಿ ಹಬ್ಬದ ಸಂದರ್ಭದಲ್ಲಿ ಬಳಸುವ ಕಲೆಯಾಗಿದ್ದು, ಸುಮಾರು ಮೂರೂವರೆ ಅಡಿ ಉದ್ದದ ಬೆತ್ತದ ಜೊಪ್ಪಕೋಲ್‌ಗಳನ್ನು ಹಿಡಿದು ಹಾಡಿನೊಂದಿಗೆ ಕೋಲಾಟ

ಮಾಡುವುದು ಇಲ್ಲಿಯ ವೈಶಿಷ್ಟ್ಯ. ಜೊಪ್ಪಕೋಲ್ ಅಲ್ಲದೆ ಜಪ್ಪೈಕೋಲ್, ಚಂದುತೊರೆಕೋಲ್, ಪಾತುರೆಕೋಲ್ ಎಂಬ ಅನೇಕ ಪ್ರಕಾರಗಳೂ ಇವೆ. ಈ ಕೋಲಾಟದ ಕೊನೆಯಲ್ಲಿ ಕೊಂಬು, ಕೊಟ್ಟು, ವಾಲಗಗಳ ಬಳಕೆಯೊಡನೆ ಇಬ್ಬಿಬ್ಬರು ಕೋಲಿನಿಂದ ಹೊಡೆದಾಡುತ್ತಾ ನೋಟಕರಿಗೆ ರೋಮಾಂಚನ ಉಂಟುಮಾಡುವಂತಹ ಹಾಗೂ ವೀರರಸ ಮತ್ತು ಅದ್ಭುತ ರಸ ಪ್ರಚೋದಿಸುವಂತಹ 'ಪರಕಳಿ' ಅಥವಾ ಪರಿಯಕಳಿ ಎಂಬ ನೃತ್ಯ ಮಾಡಲಾಗುತ್ತದೆ. ಹುತ್ತರಿಯ ಮಾರನೇಯ ದಿನ ಅಂದರೆ ರೋಹಿಣಿ ಮತ್ತು ಕೃತ್ತಿಕಾ ನಕ್ಷತ್ರಗಳು ಬಂದಾಗ ಕೊಡವರು ಗ್ರಾಮವನ್ನೆಲ್ಲಾ ಸುತ್ತುತ್ತಾ ಪ್ರದರ್ಶಿಸುವ ಕಲೆಯನ್ನು 'ಜೋಯಿಪಾಟ್' ಎನ್ನುವರು. 'ಜ್ಯೋತಿಷ್ಯಪಾಟ್'ದ ಪ್ರತಿರೂಪವೇ ಜೋಯಿಪಾಟ್ ಎನ್ನಲಾಗುತ್ತದೆ. ಸುಮಾರು ಹತ್ತು ಜನ ಕಲಾವಿದರು ಭಾಗವಹಿಸುವ ಈ ಕುಣಿತಕ್ಕೆ ದುಡಿಯನ್ನು ಪಕ್ಕವಾದ್ಯವನ್ನಾಗಿ ಬಳಸಲಾಗುತ್ತದೆ. ಕೊಡವರ ಸಾಂಪ್ರದಾಯಿಕ ಆಚರಣೆಯ ಅಂಗವಾಗಿ 'ಕೈತಲೆಆಟ್' ಎಂಬುದು ಮಹಾಕಾಳಿಯ ಆರಾಧನೆಯ ಹಿನ್ನೆಲೆಯಲ್ಲಿ ಬೆಳೆದುಬಂದಿದೆ. ಇದು ಕಟ್ಟುನಿಟ್ಟಾದ ಆಚರಣೆಯೆನಿಸಿದ್ದು, ಕೊಡಗಿನಲ್ಲಿ ಕಾಳಿದೇವತೆ ಇರುವ ಕಡೆಯಲ್ಲೆಲ್ಲಾ ದೇವಸ್ಥಾನದ ಮುಂದೆ ಮಾತ್ರ ಈ ಕಲೆಯು ಪ್ರದರ್ಶಿಸಲ್ಪಡುತ್ತದೆ. ಬಿಳಿಯ ಕುಪ್ಪಸ, ದಟ್ಟಿ ಮತ್ತು ರುಮಾಲು ಧರಿಸಿ ಕೈಯಲ್ಲಿ ಚೌರಿ ಹಿಡಿದು ನರ್ತಿಸುವ ಕಲಾವಿದರಿಗೆ ಪರೆ ಅಥವಾ ಮೇದರ ಡೋಲು ಮತ್ತು ಜಾಗಟೆಯಾಕಾರದ ಕಂಚಿನ ತಟ್ಟೆಗಳ ನಾದವು ಹಿನ್ನೆಲೆ ಒದಗಿಸುತ್ತದೆ. ಹಾಗೆಯೇ, ವರ್ಷಕ್ಕೊಂದು ಸಲ ನಡೆಯುವ ಭದ್ರಕಾಳಿಯ ಉತ್ಸವ ಸಂದರ್ಭದಲ್ಲಿ ಪ್ರದರ್ಶಿಸುವ ಕಲೆಯೇ 'ಬಿಲ್ಲಾಟ್'. 'ಮಣಿ' ಎಂಬ ಕಂಚಿನ ವಿಶೇಷ ವಾದ್ಯದ ನಾದಕ್ಕೆ ತಕ್ಕಂತೆ ಕೈಯಲ್ಲಿ ಸಣ್ಣ ಚೌರಿ ಮತ್ತು ಕೊಂಬುಗಳನ್ನು ಹಿಡಿದು ನರ್ತಿಸುವರಲ್ಲದೆ, ನರ್ತಕರು ಕಪ್ಪು ಕುಪ್ಪಿಯನ್ನು ಮತ್ತು ಹಾಡುವವರು ಬಿಳಿಯ ಕುಪ್ಪಿಯನ್ನು ಧರಿಸುವುದು ರೂಢಿಯಲ್ಲಿದೆ. 'ದಪ್ಪು' ಎಂಬ ಚರ್ಮವಾದ್ಯವನ್ನು ಪ್ರತಿಯೊಬ್ಬ ಕಲಾವಿದನೂ ಬಡಿಯುತ್ತಾ ತಾಳಕ್ಕೆ ತಕ್ಕಂತೆ ಮಾಡುವ ನೃತ್ಯವೇ 'ದಪ್ಪುಆಟ್'. ಈ ಕಲೆಯು ಕೊಡಗಿನ ಮಾಪಿಳ್ಳೆ ಜನಾಂಗದವರಲ್ಲಿ ರೂಢಿಯಲ್ಲಿದ್ದು, ಅವರು ಅರಬ್ಬೀ ಭಾಷೆಯ ಹಾಡುಗಳನ್ನು ಹಾಡುತ್ತಾ ತಮ್ಮ ಆಚರಣೆಗೆ ಸಂಬಂಧಿಸಿದ ಹಬ್ಬ ಮೊದಲಾದ ಸಂದರ್ಭಗಳಲ್ಲಿ ಮಸೀದಿಯ ಮುಂದೆ ಮಾತ್ರ ಈ ನೃತ್ಯವನ್ನು ನಡೆಸುವರು. 'ಚೇರಿಯಾಟ್' ಅಥವಾ 'ಚೌರಿಯಾಟ್'ಎಂಬುದು ಚಮರೀಮೃಗದ ಕೂದಲುಗಳ ಗುಚ್ಛವನ್ನು ಹಿಡಿದು ವೈವಿಧ್ಯಮಯವಾಗಿಯೂ ತಾಳಲಯಬದ್ಧವಾಗಿಯೂ ದೇವರ ಸೇವೆಯ ಒಂದು ವೈಖರಿಯನ್ನು ತೋರಿಸುವ ನೃತ್ಯಕಲೆ. ಹಬ್ಬ-ಹರಿದಿನಗಳಲ್ಲಿ ದೇವಸ್ಥಾನಗಳಲ್ಲಿ ನಡೆಯುವ 'ಕೊಡಿಆಟ್' ಉದ್ದನೆಯ ಬೆತ್ತಕ್ಕೆ ಕೆಂಪುಬಟ್ಟೆಯನ್ನು ಕಟ್ಟಿ ಅವುಗಳನ್ನು ವಿವಿಧ ಭಂಗಿಗಳಲ್ಲಿ ತಿರುಗಿಸುತ್ತಾ ಕುಣಿಯುವ ಕಲೆ. ಭಗವತಿ ಮತ್ತು ಭದ್ರಕಾಳಿ ಹಬ್ಬ ಸಂದರ್ಭಗಳಲ್ಲಿ ಬಳಕೆಯಲ್ಲಿರುವ ನೃತ್ಯಕಲೆಯಲ್ಲಿ 'ಡೋಲುಪಾಟ್' ಸಹಾ ಒಂದಾಗಿದ್ದು, ಇದನ್ನು ಹಾಡುವ ಕಲೆಯೆಂತಲೂ ಪರಿಗಣಿಸಲಾಗಿದೆ. ಡೋಲು ಎಂಬ ಚರ್ಮದ ವಾದ್ಯವನ್ನು ಪಕ್ಕವಾದ್ಯವಾಗಿ ವಿಶೇಷವಾಗಿ ಬಳಸಿಕೊಂಡು ಹಾಡಲಾಗುತ್ತದೆ. ಇದಲ್ಲದೆ, 'ಬಾಳೋಪಾಟ್' ಸಹಾ ಹಾಡುವ ಕಲೆಯೆನಿಸಿದ್ದು, ಇದರಲ್ಲಿ ಭಾಗವಹಿಸುವ ನಾಲ್ಕು ಮಂದಿ ಕಲಾವಿದರು ಬಿಳಿಬಣ್ಣದ ಉದ್ದನೆಯ ನಿಲುವಂಗಿ ಅಥವಾ ಕುಪ್ಪಿಯನ್ನೂ ಸೊಂಟಕ್ಕೆ ಕೆಂಪುವರ್ಣದ ಉದ್ದದ ರೇಷ್ಮೆಯ ದಟ್ಟಿ ಅಥವಾ ಚೇಲೆಯನ್ನೂ ತಲೆಗೆ ಬಿಳಿಯ ರುಮಾಲು ಅಥವಾ ಕೆಂಪುವಸ್ತ್ರವನ್ನೂ ಧರಿಸುವರು.

ಕೊಡಗಿನಲ್ಲಿ ಕಂಡುಬರುವ ನೃತ್ಯಕಲೆಗಳಲ್ಲಿ 'ವೀರಭದ್ರನ ಕುಣಿತ'ವೂ ಒಂದು. 'ವೀರಗಾಸೆ'ಗಿಂತ ಭಿನ್ನವಾಗಿರುವ ಈ ನೃತ್ಯವು ಸಾಮಾನ್ಯವಾಗಿ ರಾತ್ರಿವೇಳೆಯಲ್ಲಿ ಜರುಗುವಂತಹದು. ತನ್ನ ಬೆನ್ನಿಗೆ ಅಡಿಕೆ ಅಥವಾ ಬಿದಿರು ದಬ್ಬೆಗಳಿಂದ ಮಾಡಿದ ಸೂರ್ಯಕಿರಣಾಕಾರದ ರಚನೆಯನ್ನು ಕಟ್ಟಿಕೊಳ್ಳುವ ಕಲಾವಿದನು, ಪ್ರದರ್ಶನದ ಸಮಯದಲ್ಲಿ ಪ್ರತಿಯೊಂದು ದಬ್ಬೆಯ ತುದಿಗೂ ಸುತ್ತಿರುವ ಎಣ್ಣೆಯ ಬಟ್ಟೆಗೆ ಬೆಂಕಿ ಹಚ್ಚಿಕೊಂಡು ಮತ್ತು ಕೈಯಲ್ಲಿ ಬೆಂಕಿಯಿಂದ ಉರಿಯುತ್ತಿರುವ ಅಂತಹದೇ ಕಡ್ಡಿಯನ್ನು ಹಿಡಿದುಕೊಂಡು ತಮಟೆ ವಾದನದ ಹಿನ್ನೆಲೆಯಲ್ಲಿ ಆಕರ್ಷಕವಾಗಿ ನರ್ತಿಸುವುದು ಇದರ ವೈಶಿಷ್ಟ್ಯ. ಈ ಜಿಲ್ಲೆಯ ಮೂಲ ಕಲೆಯಲ್ಲದ ಮತ್ತು ತಮಿಳು ಭಾಷಿಕರಲ್ಲಿ ಮಾತ್ರ ಪ್ರಚಲಿತವಿರುವ 'ಕೊರ್ತಿಆಟ್' ಎಂಬುದು ಮನರಂಜನಾ ಪ್ರಧಾನವಾದ ಒಂದು ಸ್ವಚ್ಛಂದ ಕಲೆಯೆನಿಸಿದೆ. ಸುಮಾರು ಐದಾರು ಜನರು ಭಾಗವಹಿಸುವ ಈ ಕುಣಿತದಲ್ಲಿ ಈರ್ವರು ಸ್ತ್ರೀವೇಷಧಾರಿಗಳೂ ತಮ್ಮದೇ ವೇಷಗಳಿಂದ ಕೂಡಿದ ಪುರುಷರೂ ಇದ್ದು, ಡಬ್ಬದಂತಹ ವಾದ್ಯದಿಂದ ಹೊಮ್ಮುವ ನಾದದ ಗತ್ತಿಗೆ ತಕ್ಕಂತೆ ಗೆಜ್ಜೆಕಾಲ್ಗಳ ತಾಳದೊಡನೆ ಕುಣಿಯುವರು. ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಗಿರಿಜನವರ್ಗಕ್ಕೆ ಸೇರಿದವರೂ ಕಷ್ಟಸಹಿಷ್ಣುಗಳೂ ಆದ ಕೊಡಗಿನ ಯೆರವರು ತಮ್ಮ ನಿತ್ಯ ದುಡಿಮೆಯ ದಣಿವನ್ನು, ಬೇಸರವನ್ನು ಕಳೆಯಲು ವಯಸ್ಸು ಮತ್ತು ಲಿಂಗಭೇದಗಳಿಲ್ಲದೆ ಮಾಡುವ ಸ್ವಸಂತೋಷದ

ಕುಣಿತವೇ 'ಯೆರವರ ಕುಣಿತ'. ಸಾಮಾನ್ಯವಾಗಿ ಕೃಷಿ ಕಾರ್ಮಿಕರಾಗಿರುವ ಯೆರವರು, ಸುಗ್ಗಿಯ ಕಾಲದಲ್ಲಿ ಬೆಳೆಯನ್ನು ಕೊಯ್ದು ಹೊಸ ಭತ್ತ ಕುಟ್ಟುವಾಗ ತಮ್ಮ ಕುಣಿತವನ್ನು ತಮ್ಮ ಸಂಪ್ರದಾಯದ ವೇಷಭೂಷಣಗಳಿಂದ ಪ್ರದರ್ಶಿಸುವುದುಂಟು. ಮರದಿಂದ ತಯಾರಿಸಿದ ದುಡಿ ಮತ್ತು ಚೀನಿ ವಾದ್ಯಗಳನ್ನು ತಮ್ಮ ಕುಣಿತದ ಹಿನ್ನೆಲೆಯಾಗಿ ಬಳಸುವರು. ಹಾಗೆಯೇ, ಕೊಡಗಿನ ಆದಿವಾಸಿ ಜನಾಂಗದವರಲ್ಲಿ ಬರುವ ಜೇನು ಕುರುಬರು ಪ್ರದರ್ಶಿಸುವ 'ಕೋಲಾಟ್' ವೈವಿಧ್ಯಮಯವಾದುದು ಮತ್ತು ಪ್ರಾಚೀನ ಪರಂಪರೆಯುಳ್ಳದ್ದು. ಪೂಜೆ–ಪುನಸ್ಕಾರಗಳಲ್ಲಿ, ಸಂತೋಷದ ಸಮಾರಂಭಗಳಲ್ಲಿ ಇವರು ಕಾಲಿಗೆ ಗೆಜ್ಜೆ ಕಟ್ಟಿ, ಸೊಂಟಕ್ಕೆ ಮಣಿ, ಮರದ ತಟ್ಟೆ ಕಟ್ಟಿಕೊಂಡು ಕೈಯಲ್ಲಿ ಕೋಲು ಹಿಡಿದು ನರ್ತಿಸುವರು. ಇಷ್ಟಲ್ಲದೆ, ಗಾಣಿಗ ಗಂಡಸರ ಕುಣಿತ, ಪಣಿಯ ಗಂಡಸರ ಕುಣಿತ, ಜೋಗಿ ಕುಣಿತ ಮೊದಲಾದ ವಿವಿಧ ವರ್ಗಗಳವರ ಕುಣಿತಗಳೂ ಇವೆ.

ಮಹಿಳೆಯರು ಮಾತ್ರವೇ ಪ್ರದರ್ಶಿಸುವ ಕೊಡಗಿನ ಜನಪ್ರಿಯ ನೃತ್ಯವೆನಿಸಿದ 'ಉಮ್ಮತ್ತಾಟ್', ಕಾವೇರಿ ಮಾತೆಯನ್ನು ಸ್ತುತಿಸುತ್ತಾ ತಾಳದೊಂದಿಗೆ ವೃತ್ತಾಕಾರವಾಗಿ ನರ್ತಿಸಲ್ಪಡುವ ವಿಶಿಷ್ಟ ಕಲೆಯಾಗಿದೆ. ಸಮುದ್ರಮಥನ ಸಂದರ್ಭದಲ್ಲಿ ವಿಷ್ಣುವು ಮೋಹಿನಿ ರೂಪವನ್ನು ತಾಳಿ ಉಮಾದೇವಿಯ ವಿವಿಧ ರೀತಿಯ ನೃತ್ಯಗಳಿಂದ ಸುರಾಸುರರ ಮನವೊಲಿಸಿ ಅವರನ್ನೆಲ್ಲಾ ಬೆರಗು ಮಾಡಿ, ಅಮೃತವನ್ನು ಹಂಚಿದ ಸಂಕೇತವಾಗಿ ಈ ನೃತ್ಯವು ರೂಢಿಗೆ ಬಂದಿದೆಯೆಂಬ ನಂಬಿಕೆ ಕೊಡವರಲ್ಲಿದೆ. ಯುಗಾದಿ, ಸಂಕ್ರಾಂತಿ, ದೀಪಾವಳಿ, ಸುಬ್ರಹ್ಮಣ್ಯ ಷಷ್ಠಿ ಮೊದಲಾದ ಹಬ್ಬ ಹರಿದಿನಗಳಂದು ಕೊಡವ ಮಹಿಳೆಯರು, ತಮ್ಮ ವಿಶಿಷ್ಟ ಉಡುಪು ಧರಿಸಿ ಕೈಯಲ್ಲಿ ಕಂಚಿನ ತಾಳ ಹಿಡಿದು ಮಧ್ಯಭಾಗದಲ್ಲಿರಿಸಿದ ಕಾಲುದೀಪ (ಕುತ್ತುಂಬೊಳಿಚ), ತಳಿಯತಕ್ಕಿ, ಬೊಳಕು ಇರಿಸಿ ಅದರ ಸುತ್ತಲೂ ತಾಳ ಹಾಕುತ್ತಾ ಮೋಹಕವಾಗಿ ನರ್ತಿಸುವರು. ಈ ಸಂದರ್ಭದಲ್ಲಿ ಪೌರಾಣಿಕ ಪ್ರಸಂಗಗಳೇ ಅಲ್ಲದೆ, ಕಾವೇರಿಯ ವರ್ಣನೆ ಕುರಿತು ನೂರಾರು ಸ್ತುತಿಗೀತೆಗಳನ್ನು ಹಾಡಲಾಗುತ್ತದೆ. ಈ ಉಮ್ಮತ್ತಾಟ್ ಕುರಿತು, ಕೇರಳದಲ್ಲಿರುವ 'ಮೋಹಿನಿ ಆಟ್ಟಂ' ಎಂಬ ಒಂದು ನೃತ್ಯ ಸಂಪ್ರದಾಯದಂತೆಯೇ ಈ ನೃತ್ಯ ಸಂಪ್ರದಾಯವೂ ಇರಬಹುದೆಂತಲೂ ಅಲ್ಲಿ ತಾಳ ಹಾಕುವ ಪದ್ಧತಿ ಇರುವಂತೆಯೇ ಈ ನೃತ್ಯದಲ್ಲಿಯೂ ಇರುವುದೆಂತಲೂ ಅಭಿಪ್ರಾಯ ಪಡಲಾಗಿದೆ.* ಈ ನೃತ್ಯವೇ ಅಲ್ಲದೆ, ತುಮ್ಮತ್ತಾಟ್, ತಳಿಯತ್ತಾಟ್, ಕುಮ್ಮಟ್ಟಿಯಾಟ್ ಮೊದಲಾದ ಕುಡಿಯ ಮತ್ತು ಕೊಡವ ಮಹಿಳೆಯರ ನೃತ್ಯಗಳೂ ಇವೆ.

ವಿವಿಧ ಪ್ರಕಾರದ ನೃತ್ಯಗಳೇ ಅಲ್ಲದೆ, ಜನಪ್ರಿಯ ಜನಪದ ಕ್ರೀಡೆಗಳೂ ಕೊಡಗಿನಲ್ಲಿ ಪ್ರಚಲಿತವಿವೆ. ಉದಾಹರಣೆಗೆ, ಶಿಲುಬೆಯಾಕಾರದ ಕೋಲುಗಳಿಗೆ ತೆಂಗಿನಕಾಯಿಗಳನ್ನು ಚುಚ್ಚಿ ಅದನ್ನು ಮರದ ಮೇಲೆ ಕಟ್ಟಿ, ಅವುಗಳಿಗೆ ಕೋವಿಯಿಂದ ಗುಂಡು ಹೊಡೆಯುವ 'ತೆಂಗೆ ಬೋಡಿ' ಎನ್ನುವ ಕ್ರೀಡೆಯೂ ಇದೇ ರೀತಿಯಲ್ಲಿ ಒಂದು ಆಳೆತ್ತರದ ಜಾಗದಲ್ಲಿ ಮೂರು ತೆಂಗಿನಕಾಯಿಗಳನ್ನು ಸಾಲಾಗಿರಿಸಿ ನಿರ್ದಿಷ್ಟ ಅಂತರದಲ್ಲಿ ನಿಂತು ಆ ನಂತರ ಮಧ್ಯೆ ಇರುವ ತೆಂಗಿನಕಾಯಿಗೆ ಅಡ್ಡಲಾಗಿ ಓಡುತ್ತಾ ಗುಂಡಿಕ್ಕಿ ಹೊಡೆಯುವ 'ಓಟ್‌ಬೋಡಿ' ಎನ್ನುವ ಕ್ರೀಡೆಯೂ ಗಮನಾರ್ಹವಾದುವು. ನಾಟಿ ಓಟ, ಏರಿಗುಪ್ಪೆ, ಚಿಲ್ಕಿ ಆಟ, ಚಿಟ್ಟಿಗೋಲಿ, ತಾರಾಟ, ಬುಗುರಿಯಾಟ, ಕಲ್ಲಾಟ, ಕಟ್ಟಿಮನೆ, ಅಳ್ಳುಮನೆ, ಮರೋಳಿ, ತೆಂಗೆಬೋರ್, ದೊಂಬರಾಟ, ರಾಟೆ ಆಟ, ಮಾಚೋಳರಾಟ, ಹಗ್ಗದಾಟ, ತೊಗಲು ಮತ್ತು ಸೂತ್ರದ ಬೊಂಬೆಯಾಟ, ದೀಪಾವಳಿಯಲ್ಲಿ ಕಹಳೆ, ಮದ್ದಳೆಯಿಂದ ಕುಣಿದಾಟ, ಇತ್ಯಾದಿಗಳೂ ಈ ಜಿಲ್ಲೆಯ ಜನಪದ ಆಟಗಳಾಗಿವೆ.

### ಪ್ರಕಟಿತ ಜನಪದ ಸಾಹಿತ್ಯ

ಕೊಡಗು ಜಾನಪದ ಕುರಿತು ಹಲವಾರು ವಿದ್ವಾಂಸರು, ಸಂಗ್ರಾಹಕರು ಮತ್ತಿತರರು ಈತನಕ ಕನ್ನಡ, ಇಂಗ್ಲಿಷ್ ಮತ್ತು ಕೊಡವ ಭಾಷೆಗಳಲ್ಲಿ ತಮ್ಮ ಕೃತಿಗಳನ್ನೂ ಬರಹಗಳನ್ನೂ ಪ್ರಕಟಿಸಿರುವರು. ಮೂಲ ಸಂಸ್ಕೃತದಲ್ಲಿದ್ದ ಕಾವೇರಿ ಪುರಾಣವನ್ನು ಶ್ರೀನಿವಾಸ ಅಯ್ಯಂಗಾರ್ ಅವರು ಕನ್ನಡಕ್ಕೆ ಅನುವಾದಿಸಿದ ತರುವಾಯ, ಇದು ಕೊಡವ ಭಾಷೆಗೂ ಅನುವಾದಿಸಲ್ಪಟ್ಟು ಕೊಡವ ಜಾನಪದದಲ್ಲಿ ಸೇರಿಕೊಂಡಿತು. ಮದರಾಸು ಪ್ರಾಂತಾಧಿಕಾರಿಯಾಗಿದ್ದ ಚಾರ್ಲ್ಸ್ ಗೋವರ್ ಎಂಬುವನು 1872ರಲ್ಲಿ ದ್ರಾವಿಡ ಭಾಷೆಗಳಲ್ಲಿಯ ಜನಪದ ಗೀತೆಗಳನ್ನು ಇಂಗ್ಲಿಷ್‌ನಲ್ಲಿ ಸಂಕಲಿಸಿ ಹೊರತಂದ 'ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ' ಗ್ರಂಥದಲ್ಲಿ ಕೊಡಗು ಜಿಲ್ಲೆಯ ಜನಪದ ಹಾಡುಗಳನ್ನು ಸೇರಿಸಿದನು. 1873ರಲ್ಲಿ ಕೊಡಗು ಬೈಬಲ್ಲನ್ನು ಪ್ರಕಟಿಸಿದ ಕಿಟ್ಟೆಲನು, ಲಾವಣಿ ರೂಪದಲ್ಲಿರುವ ಕೊಡಗಿನ ಹಾಡುಗಳ ಪ್ರತೀ ಚರಣವೂ ಏಳು ಅಕ್ಷರಗಳಿಂದ ಕೂಡಿ ರಗಳೆಯಂತೆ ಮುಂದುವರೆಯುವ

*. ಎ. ಸುಬ್ಬರಾವ್ : 'ಕೊಡಗು ಜಾನಪದ ನೃತ್ಯಗಳು', ಸಾಹಿತ್ಯ ಕಾವೇರಿ – ಸ್ಮರಣ ಸಂಚಿಕೆ, ಪು. 62

ಮತ್ತು ಪ್ರತೀ ಹಾಡಿನಲ್ಲಿಯೂ ನೂರಾರು ಸಾಲುಗಳು ಕಂಡು ಬರುವ ವೈಶಿಷ್ಟ್ಯವನ್ನು ಕುರಿತು ಪ್ರಸ್ತಾಪಿಸಿದ್ದಾನೆ. ಕನ್ನಡ ಲಿಪಿಯಲ್ಲಿ ಅಕಾರಾದಿಯಾಗಿ ಜೋಡಿಸಿದ 767 ಕೊಡವ ಗಾದೆಗಳನ್ನು ಕೊಡವ ಪಡಿಮ (ಎ ಸೆಲೆಕ್ಷನ್ ಆಫ್ ಕೂರ್ಗ್ ಪ್ರೋವರ್ಬ್ಸ್) ಎಂಬ ಹೆಸರಿನಲ್ಲಿ ಸಂಗ್ರಹಿಸಿ ಜರ್ಮನ್ ಮಿಷನರಿಯಾಗಿದ್ದ ಜಿ. ಎಫ್. ವೈಲ್ ಎಂಬವನು 1886ರಲ್ಲಿ ಮಂಗಳೂರಿನಿಂದ ಪ್ರಕಟಿಸಿದನು. ಇದು ಕೊಡಗು ಜಾನಪದ ಕುರಿತ ಮೊದಲ ಪ್ರಕಟಿತ ಕೃತಿಯೆನಿಸಿದೆ.

ಕೊಡವರ ಲಾವಣಿಗಳು, ಜನಪದ ಕಥೆಗಳು, ಗಾದೆಗಳು, ಒಗಟುಗಳು, ಇತಿಹಾಸ, ಪರಂಪರೆ, ಇತ್ಯಾದಿ ವಿವಿಧ ವಿಷಯಗಳನ್ನು ಕುರಿತ ವ್ಯಾಪಕ ಮತ್ತು ಅಧಿಕೃತ ಗ್ರಂಥವೆಂದು ಗುರುತಿಸಲಾದ 'ಕೊಡವಡ ಪಟ್ಟೋಲೆ ಪಳಮೆ' ಸಂಗ್ರಹವು ಮೊದಲಿಗೆ 1924ರಲ್ಲಿ ನಡಿಕೇರಿಯಂಡ ಚಿಣ್ಣಪ್ಪ ಅವರಿಂದ ಬೆಳಕಿಗೆ ಬಂದಿತು. ಕೊಡವರ ಬಗೆಗೆ ವಿಶೇಷ ಅಧ್ಯಯನ ನಡೆಸಿರುವ ಬಿ. ಡಿ. ಗಣಪತಿ ಅವರು ತಮ್ಮ 'ಕೊಡಗು ಮತ್ತು ಕೊಡವರು' ಕೃತಿಯಲ್ಲಿ ಕೊಡವರ ಜೀವನ, ನಂಬಿಕೆ, ಸಂಪ್ರದಾಯ, ಆಚರಣೆ, ಹಬ್ಬ ಹಾಗೂ ಇತರ ವೈಶಿಷ್ಟ್ಯಗಳನ್ನೂ ಹಾಡು, ನಾಣ್ಣುಡಿ, ಇತ್ಯಾದಿಗಳನ್ನೂ ಸಂಗ್ರಹಿಸಿ ಕೊಟ್ಟಿರುವರು. ಅವರದೇ ಆದ 'ಕೊಡವಾಸ್–ಎ ಕಾಂಪ್ರಿಹೆನ್ಸಿವ್ ಸ್ಟಡಿ' ಎಂಬ ಇಂಗ್ಲಿಷ್ ಭಾಷಾ ಕೃತಿಯಲ್ಲಿಯೂ ಕೊಡವ ಸಾಹಿತ್ಯ ಮತ್ತು ನೃತ್ಯಗಳನ್ನು ಕುರಿತು ಪ್ರತ್ಯೇಕವಾಗಿ ವಿವೇಚಿಸಲಾಗಿದೆ. ಎಂ. ಪಿ. ಕಾರ್ಯಪ್ಪ ಅವರ 'ಕೂರ್ಗ್ ಅಂಡ್ ದೇರ್ ಆರಿಜಿನ್ಸ್', ಡಿ. ಎನ್. ಕೃಷ್ಣಯ್ಯ ಅವರ 'ಕೊಡಗಿನ ಇತಿಹಾಸ', ಎಂ. ಎನ್. ಶ್ರೀನಿವಾಸ್ ಅವರ 'ರಿಲಿಜನ್ ಅಂಡ್ ಸೊಸಾಯಿಟಿ ಎಮಾಂಗ್ ದಿ ಕೂರ್ಗ್ಸ್ ಆಫ್ ಸೌತ್ ಇಂಡಿಯಾ', ಐ. ಮಾ. ಮುತ್ತಣ್ಣ ಅವರ 'ಕೂರ್ಗ್ ಮೆಮೊಯರ್ಸ್', ಕೆ. ಪಿ. ಮುತ್ತಣ್ಣ ಅವರ 'ಜಗತ್ತಿಗೊಂದೇ ಕೊಡಗು'—ಈ ಗ್ರಂಥಗಳಲ್ಲೂ ಕೊಡಗಿನ ಜಾನಪದ ಕುರಿತು ಚರ್ಚೆ ನಡೆದಿದೆ. ಐ. ಮಾ. ಮುತ್ತಣ್ಣ ಅವರು ಕೊಡವರ ಜನಪದ ಹಾಡುಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಅದನ್ನು "ಕೊಡವಾಸ್ ಅಂಡ್ ದೇರ್ ಗಾಲ 'ಲೇಲ' ಆಫ್ ಕೊಡಗು (ಕೂರ್ಗ್)" ಎಂಬ ಹೆಸರಿನಲ್ಲಿ ಹೊರತಂದಿರುವರು.

ಉತ್ತರ ಕೊಡಗಿನ ರಾಂಪುರದಲ್ಲಿ ಸಂಗ್ರಹಿಸಿದ ಒಂಭತ್ತು ಲಾವಣಿಗಳನ್ನು ಟಿ. ಎಸ್. ರಾಜಪ್ಪ ಅವರು 'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು' ಎಂಬ ಶೀರ್ಷಿಕೆಯಡಿ ಹೊರತಂದಿರುವರು. ಪಿರಿಯಾಪಟ್ಟಣದ ಕಾಳಗದ ಘಟನೆಯನ್ನು ಚಿತ್ರಿಸುವ ಜನಪದ ಹಾಡಿನೊಡನೆ ಕೊಡಗಿನ ಹಾಲೇರಿ ಅರಸರಿಗೆ ಸಂಬಂಧಿಸಿದ 'ಲಿಂಗರಾಜಮ್ಮನ ಕಥೆ' ಯನ್ನು ಸೇರಿಸಿಕೊಂಡು ಕಂಸಾಳೆಯವರು ಹಾಡುವ ಬಗೆಗೆ ಡಾ|| ಜೀ. ಶಂ. ಪರಮಶಿವಯ್ಯ ಅವರು ತಮ್ಮ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು' ಗ್ರಂಥದಲ್ಲಿ ಪ್ರಸ್ತಾಪಿಸಿರುವರಲ್ಲದೆ, ಲಿಂಗರಾಜಮ್ಮನಿಗೆ ಸಂಬಂಧಿಸಿದಂತೆ ದೊರೆತಿರುವ ಲಾವಣಿಯ ಮೂರು ಪಾಠಗಳನ್ನು 'ಜನಪದ ವೀರ ಕಾವ್ಯಗಳು' ಎಂಬ ಇನ್ನೊಂದು ಸಂಗ್ರಹದಲ್ಲಿಯೂ ಪ್ರಕಟಿಸಿರುವರು. ಸ್ವಾಮಿಗೌಡ ಅವರು ಕೊಡಗಿನ ಲಿಂಗರಾಜನನ್ನು ಕುರಿತ ಕಾವ್ಯವನ್ನು ತಮ್ಮ 'ಜನಪದ ಕಥನ ಗೀತೆಗಳು' ಸಂಗ್ರಹದಲ್ಲಿಯೂ ಎ. ಹಿರಿಯಣ್ಣ ಅವರು ಕೊಡಗಿನ ನಿಂಗವ್ವಳನ್ನು ಕುರಿತ ಕಾವ್ಯವನ್ನು ತಮ್ಮ 'ತಂಬೂರಿ ಸಂಪ್ರದಾಯದ ಕಾವ್ಯಗಳು' ಸಂಗ್ರಹದಲ್ಲಿಯೂ ಬೆಳಕಿಗೆ ತಂದಿರುವರು. ಸುಮಾರು 675 ಕೊಡವ ಗಾದೆಗಳ ಸಂಗ್ರಹವೆನಿಸಿದ 'ಕೊಡವ ಗಾದೆ ಪಿಂಞ ಪಳಂಜೊಲ್ಲ್' ಕೃತಿಯನ್ನು ಹೊರತಂದಿರುವವರು ಚೇಂದಂಡ ದೇಚಮ್ಮ ಕರುಂಬಯ್ಯ ಅವರು. ಕಾವೇರಿ ತಾಯಿಯನ್ನು ಕೊಡಗಿನ ಹೆಣ್ಣುಮಕ್ಕಳು ಆಡಿ–ಪಾಡಿ ಹೊಗಳಲೆಂಬ ಉದ್ದೇಶದಿಂದ ದೇವಣಗೇರಿಯ ಪುಗ್ಗೆರ ಕರುಂಬಯ್ಯ ಅವರು ರಚಿಸಿ ಪ್ರಕಟಿಸಿದ 'ಉಮ್ಮತ್ತಾಟ್‌ಪಾಟ್' ಮತ್ತು ಚೋಕಂಡ ಅಪ್ಪಯ್ಯ ಅವರು ರಚಿಸಿದ 'ಹುತ್ತರಿಹಾಡು' ಕೃತಿಗಳನ್ನು ಇಲ್ಲಿ ಸ್ಮರಿಸಬಹುದು. ಕೊಡಗಿನ ಜನಪದ ಕಥೆಗಳಿಗೆ ಸಂಬಂಧಿಸಿದಂತೆ ಬಿ. ಎಸ್. ಕುಶಾಲಪ್ಪ ಅವರ 'ಕೊಡಗಿನ ದೇಶೀಯ ಕಥೆಗಳು' ಒಂದು ಮುಖ್ಯ ಕೃತಿಯಾಗಿದ್ದು, ಕಥನಕಾವ್ಯಗಳಲ್ಲಿ ವಿಸ್ತಾರವಾಗಿ ಒಡಮೂಡಿರುವ ಹಾಗೂ ದೇವತೆಗಳ ಸ್ವರೂಪವನ್ನು ಪಡೆದುಕೊಂಡ ಪನ್ನಂಗಾಲತ್ತಮ್ಮೆ, ಅಚ್ಚುನಾಯಕ, ಚೋನಿರ ಮುತ್ತಣ್ಣ, ಹೊನ್ನಮ್ಮ, ಚೆನ್ನಬಸಪ್ಪ, ಕಲಿಯಾಟಿ ಅಜ್ಜಪ್ಪ ಮತ್ತು ಕಾವೇರಿ–ಇವರುಗಳ ಕಥೆಗಳು ಈ ಕೃತಿಯಲ್ಲಿ ಗದ್ಯರೂಪದಲ್ಲಿ ಬಂದಿವೆ. ಹಾಗೆಯೇ, ಬಿ. ಡಿ. ಸುಬ್ಬಯ್ಯ (ಕಾಕೆಮಾನಿ) ಅವರು ತಮ್ಮ 'ಕೊಡಗಿನ ಇತಿಹಾಸ ಪುಟಗಳಿಂದ' ಪುಸ್ತಕದಲ್ಲಿಯೂ ಜಾನಪದವನ್ನಾಧರಿಸಿದ ಕೆಲವು ಚಾರಿತ್ರಿಕ ವ್ಯಕ್ತಿ ಮತ್ತು ಘಟನೆಗಳ ವಿವರಗಳನ್ನು ಕಥಾರೂಪದಲ್ಲಿ ನಿರೂಪಿಸಿರುವರು. ಪಿ. ಎಂ. ಕರುಂಬಯ್ಯ ಅವರು ಸಹಾ ಕೊಡಗಿನ ಪುಗ್ಗೆರ ಮೊಣ್ಣಯ್ಯ, ಪೊಳ್ಳದೇವಿರ ಅಪ್ಪಯ್ಯ ಮತ್ತು ಪನ್ನಂಗಾಲತ್ತಮ್ಮೆ–ಈ ವ್ಯಕ್ತಿಗಳನ್ನು ಕುರಿತ ದುಡಿಕೊಟ್ಟ್‌ಪಾಟ್‌ಗಳನ್ನು ಅವಲಂಬಿಸಿದ ಕಥೆ

ಗಳನ್ನು ಎಚ್. ಎಲ್. ನಾಗೇಗೌಡ ಅವರು ಸಂಪಾದಿಸಿದ 'ಕರ್ನಾಟಕ ಜನಪದ ಕಥೆಗಳು' ಸಂಕಲನದಲ್ಲಿ ಪ್ರಕಟಿಸಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಹಾಗೂ ಗೊ.ರು. ಚನ್ನಬಸಪ್ಪ ಅವರು ಸಂಪಾದಿಸಿದ 'ಕರ್ನಾಟಕದ ಜನಪದ ಕಲೆಗಳು' ಗ್ರಂಥವು ಕೊಡಗಿನ ಹದಿನೈದಕ್ಕೂ ಹೆಚ್ಚು ನೃತ್ಯ ಮತ್ತು ಹಾಡುವ ಕಲೆಗಳ ಬಗೆಗೆ ಸಂಕ್ಷಿಪ್ತ ವಿವರಣೆಗಳನ್ನೊಳಗೊಂಡಿದೆ. ಪರಿಷತ್ತೇ ಪ್ರಕಟಿಸಿರುವ ಹಾಗೂ ಎರಡು ಸಂಪುಟಗಳಲ್ಲಿರುವ 'ಕನ್ನಡ ಜಾನಪದ ವಿಶ್ವಕೋಶ'ವನ್ನು ಡಾ|| ಚಂದ್ರಶೇಖರ ಕಂಬಾರ ಅವರು ಸಂಪಾದಿಸಿದ್ದು, ಇವುಗಳಲ್ಲಿ ಕೊಡಗಿನ ಜನಪದ ಸಾಹಿತ್ಯ, ಕಲೆ, ಕಲಾವಿದರು, ಸಂಗ್ರಹಕಾರರು, ಇತ್ಯಾದಿ ಕುರಿತು ಸಂಕ್ಷಿಪ್ತ ಮಾಹಿತಿಯಿದೆ. ಉತ್ತರ ಕೊಡಗಿನಲ್ಲಿ ಹೆಚ್ಚು ಪ್ರಚಲಿತವಿರುವ ಸುಗ್ಗಿಕಟ್ಟೆಗಳ ಹಬ್ಬಾಚರಣೆಯನ್ನು ಇತರೆಡೆಗಳಲ್ಲಿಯ ಇಂತಹ ಆಚರಣೆಗಳ ಹಿನ್ನೆಲೆಯಲ್ಲಿ ತೌಲನಿಕವಾಗಿ ಅಭ್ಯಸಿಸಿ 'ಕೊಡಗು ಜಿಲ್ಲೆಯ ಸುಗ್ಗಿಕಟ್ಟೆಗಳು' ಎಂಬ ಕೃತಿಯನ್ನು ಎಂ. ಜಿ. ನಾಗರಾಜ್ ಅವರು ಪ್ರಕಟಿಸಿರುವರು. ಕೊಡಗಿನ ಮೂಲನಿವಾಸಿಗಳಾದ ಪಂಜಿರಿ ಯೆರವರು ಮತ್ತು ಪಣಿ ಯೆರವರ ಜಾನಾಂಗಿಕ ಅಧ್ಯಯನವನ್ನು ನಡೆಸಿರುವ ಎನ್. ಪಿ. ಶಂಕರನಾರಾಯಣ ರಾವ್ ಅವರು, ಈ ವರ್ಗಗಳವರ ಜನಪದ ಸಾಹಿತ್ಯವನ್ನು ವ್ಯಾಸಂಗ ಮಾಡುವುದರೊಡನೆ 'ಯೆರವರ ಸಮಾಜ ಮತ್ತು ಜಾನಪದ ಇತಿಹಾಸ' ಎಂಬ ಗ್ರಂಥವನ್ನು ರಚಿಸಿರುವರು. ಡಿ. ಎಮ್. ಕುಮಾರಪ್ಪ ಅವರ 'ನೀವೂ ಬನ್ನಿ ಹೊನ್ನಮ್ಮನ ಕೆರೆಯ ಬಳಿಗೆ' ಎಂಬುದು, ಹೊನ್ನಮ್ಮನ ಕೆರೆಯ ಐತಿಹ್ಯವನ್ನು ವಿವರಿಸುವ ಪುಸ್ತಿಕೆಯಾಗಿದೆ. ಪಾಲಚ್ಚಂಡ ಎ. ತುಳಸೀದೇವಿ ಅವರ 'ಕೊಡವ ಜಾನಪದ ಒಂದು ಸಾಂಸ್ಕೃತಿಕ ಅಧ್ಯಯನ'ವು ಈ ಕ್ಷೇತ್ರದ ಸಮಗ್ರ ಚಿತ್ರಣವನ್ನು ನೀಡುವ ಸಂಶೋಧನ ಕೃತಿಯಾಗಿದ್ದು ಇನ್ನೂ ಪ್ರಕಟವಾಗಿಲ್ಲ. ಇದಲ್ಲದೆ, ಕೊಡಗಿನ ಯೆರವರು, ಕುರುಬರು, ಕುಡಿಯರು ಮತ್ತು ಕೊಡವರು—ಈ ನಾಲ್ಕು ಜನಾಂಗಗಳಿಗೆ ಸಂಬಂಧಿಸಿದ ದ್ರಾವಿಡ ಕಂಠಸ್ಥ ಮಹಾಕಾವ್ಯವೆನಿಸಿದ 'ಬಾಯನ'ವನ್ನು ಪತ್ತೆ ಹಚ್ಚುವ ಮೂಲಕ, ಈ ವರ್ಗಗಳ ಜನಜೀವನದ ಜಾನಪದೀಯ ಐತಿಹಾಸಿಕ ದಾಖಲೆಯನ್ನು ಒದಗಿಸುವ ಪ್ರಯತ್ನ ಮಾಡಿದ್ದಾರೆ, ತುಳಸೀದೇವಿ ಅವರು. (ಇದೂ ಅಪ್ರಕಟಿತ).

ಕೊಡಗು ಗೌಡ ಸಂಸ್ಕೃತಿಯನ್ನು ವಿವಿಧ ಸಂದರ್ಭಗಳಲ್ಲಿ ಹಾಡಲಾಗುವ ಪದಗಳು ಮತ್ತು ಜಾನಪದಕ್ಕೆ ಸಂಬಂಧಿಸಿದ ನಂಬಿಕೆ, ಆಚರಣೆ, ಇತ್ಯಾದಿಗಳನ್ನು 1970 ರಲ್ಲಿ ಹೊರತರಲಾದ 'ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಸಂಸ್ಕೃತಿ' ಎಂಬ ಹೊತ್ತಗೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಮಡಿಕೇರಿಯ ಕೂಡಕಂಡಿರ ಎ. ಪೊನ್ನಪ್ಪ, ಶ್ರೀಮಂಗಲದ ಕುಲ್ಲಚನ ಕಾರ್ಯಪ್ಪ, ತೊತ್ತಿಯನ ಮಂದಣ್ಣ, ಬಲಮುರಿಯ ಡಾ|| ಗುಡ್ಡೀರ ಪಿ. ಗಣಪತಿ, ವೀರರಾಜಪೇಟೆಯ ಕೆ. ಎಸ್. ಕಾರ್ಯಪ್ಪ, ಡಿ. ಎನ್. ಕೃಷ್ಣಯ್ಯ, ಕಾಜೂರಿನ ಮೂಲಿಮಜ್ಲು ಸೋಮಣ್ಣ, ಚೇರಳ ಶ್ರೀಮಂಗಲದ ಪೇರಿಯನ ಪೂವಯ್ಯ, ಸುಂಟಿಕೊಪ್ಪ ನಾಗರ್ಜೆ ಗ್ರಾಮದ ಯಂಕನ ಉತ್ತಯ್ಯ ಗಿರಿಯಪ್ಪ ಮೊದಲಾದವರು ಕೊಡಗು ಗೌಡ ಜನಾಂಗದ ಹಿನ್ನೆಲೆ, ಸಂಸ್ಕೃತಿ, ಕೊಡಗು ರಾಜರ ಕಾಲದ ಗೌಡರ ಕಟ್ಟು—ಕಟ್ಟಳೆಗಳ ತೀರ್ಮಾನಗಳು, ಪದ್ಧತಿಗಳು, ಸತ್ತವರಿಗೆ ನಡೆಸುವ ಸಂಸ್ಕಾರಗಳು, ಹಬ್ಬಗಳು, ವೆಂಕಟರಮಣದೇವರ ಹರಿಸೇವೆ, ಇತ್ಯಾದಿಗಳ ಬಗೆಗೆ ಬರಹಗಳನ್ನು ಇದರಲ್ಲಿ ಪ್ರಕಟಿಸಿರುವರು. ಮಡಿಕೇರಿಯ ಚಿಟ್ಟಿಮಾಡ ಅಮ್ಮವ್ವ ಮೊದಲಾದವರು ಗೌಡ ಜನಾಂಗದವರು ನೆರವೇರಿಸುವ ಮದುವೆ ಕಾರ್ಯ, ಇತ್ಯಾದಿ ಸಂದರ್ಭಗಳಲ್ಲಿ ಹೇಳುವ ಹಾಡುಗಳನ್ನು ಸಂಗ್ರಹಿಸಿಕೊಟ್ಟಿರುವರು. ಡಿ. ಎನ್. ಕೃಷ್ಣಯ್ಯ ಅವರ 'ಕೊಡಗಿನಲ್ಲಿ ಗೌಡ ಜನರು' ಎಂಬುದು ಈ ದಿಸೆಯಲ್ಲಿ ಗಮನಿಸಬೇಕಾದ ಇನ್ನೊಂದು ಉಪಯುಕ್ತ ಕೃತಿಯಾಗಿದೆ. ಕೊಳಗದಾಳು ಗ್ರಾಮಕ್ಕೆ ಸಂಬಂಧಿಸಿದ ಜನಪದ ಕತೆಯನ್ನಾಧರಿಸಿ ಎಂ. ಎ. ಹಿತಚಿಂತಕ ಅವರು 'ಶ್ರೀ ವನದುರ್ಗಿದೇವಿಯ ಚರಿತ್ರೆ'ಯನ್ನು ರಚಿಸಿರುವರು. ಮೈಸೂರು ಜಿಲ್ಲೆಗೆ ಸೇರಿ ಹೋಗಿರುವ ಪಿರಿಯಾಪಟ್ಟಣವು ಚಂಗಾಳ್ವರ ಆಡಳಿತಾವಧಿಯಲ್ಲಿ ಕೊಡಗಿನೊಡನೆ ಅವಿನಾಭಾವ ಸಂಬಂಧ ಹೊಂದಿದ್ದುದನ್ನು ಡಾ|| ಪಿ. ಕೆ. ರಾಜಶೇಖರ ಅವರ 'ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ' ಎಂಬ ಸಂಪಾದನಾ ಕೃತಿಯು (1990 ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನ ಪಡೆದ ಕೃತಿ) ವ್ಯಕ್ತಪಡಿಸುತ್ತದೆಯಲ್ಲದೆ, ಪಿರಿಯಾಪಟ್ಟಣದ ವೀರರಾಜ ಮತ್ತು ಮೈಸೂರು ಅರಸರ ನಡುವೆ ಜರುಗಿದ ಕಾಳಗದ ವರ್ಣನೆಯನ್ನೂ ನೀಡುತ್ತದೆ. ಕೊಡವ ಭಾಷೆಯಲ್ಲಿರುವ ಈ ಕಾಳಗದ ಸುದೀರ್ಘ ಕಾವ್ಯವನ್ನು 'ಪೆರಿಯಪಡೆ' ಎಂದು ಕರೆಯಲಾಗಿದ್ದು, ಪಾಲಚ್ಚಂಡ ಎ. ತುಳಸೀದೇವಿ ಅವರು ಸಂಗ್ರಹಿಸಿರುವ ಮತ್ತು ಕನ್ನಡಕ್ಕೆ ಅನುವಾದಿಸಿಕೊಟ್ಟಿರುವ ಈ ಕಾವ್ಯದ ಸಂಕ್ಷಿಪ್ತ ಭಾಗವು ಡಾ|| ಪಿ. ಕೆ. ರಾಜಶೇಖರ ಅವರ ಮೇಲ್ಕಂಡ ಸಂಗ್ರಹದ ಅನುಬಂಧದಲ್ಲಿ ಸೇರಿಕೊಂಡಿರುವುದು ಗಮನಾರ್ಹ.

ಕೊಡಗು ಜಾನಪದ ಕುರಿತ ಕೆಲವು ಲೇಖನಗಳು ಮತ್ತು ಸಂಗ್ರಹಗಳಲ್ಲಿ ಕೆ. ಸಿ. ಭೀಮಯ್ಯ ಅವರ 'ಕೊಡಗಿನ ಜನಪದ ಗೀತೆಗಳು',1 ಪಿ. ಆರ್. ತಿಪ್ಪೇಸ್ವಾಮಿ ಅವರು ಸೋಮವಾರಪೇಟೆ ತಾಲೂಕಿನಲ್ಲಿ ಸಂಗ್ರಹಿಸಿದ ಶಿಶುಪ್ರಾಸಗಳು,2 ಎಂ. ಎಸ್. ಅನಂತಪದ್ಮನಾಭರಾವ್ ಅವರ 'ಕೊಡಗಿನ ಜನಪದ ಸಾಹಿತ್ಯ,3 'ವಿರಾಟ್' ಅವರ 'ಕೊಡಗಿನ ಹಾಡುಗಳು',4 ದೇವಣಗೇರಿ ಪಿ. ಯಂ. ಕರುಂಬಯ್ಯ ಅವರ 'ಕೊಡಗಿನ ಜನಪದ ನೃತ್ಯ ಕಲೆ,5 ಮತ್ತು 'ಕೊಡಗಿನ ಜನಪದ ಸಾಹಿತ್ಯ',6 ಡಾ|| ಡಿ. ಬಿ. ರಾಮಚಂದ್ರಾಚಾರ್ ಅವರ ಮಡಿಕೇರಿ ಸಮೀಪದ ಇಬ್ಬನಿ ಒಳವಾಡಿಯ ದೇವತೆ ಭದ್ರಕಾಳಿಯ ಜಾತ್ರೆಯನ್ನು ಕುರಿತ 'ಕೊಡಗಿನ ಒಂದು ವಿಶಿಷ್ಟ ಉತ್ಸವ' ಮತ್ತು ಕೊಡವರ ಹಬ್ಬಕ್ಕೆ ಸಂಬಂಧಿಸಿದ 'ಕೈಲ್ ಮುಹೂರ್ತ',7 ಕಾಂಡೇರ ಸರೋಜಾ ಅವರ ಕಲ್ಲುಗುಡ್ಡೇಶ್ವರ ಪೂಜೆಯನ್ನು ಕುರಿತ 'ನಮ್ಮೂರ ಉತ್ಸವ' (ಕಾ.ವಾ.), ಎ. ಎಂ. ಬೋಸ್ ಮತ್ತು ಕೆ. ಎ. ತಂಗವೇಲು ಅವರುಗಳ ಜೇನುಕುರುಬ ಜನಾಂಗ, ಸಂಸ್ಕೃತಿ ಮತ್ತು ಆಚರಣೆಗಳನ್ನು ಕುರಿತ 'ಕಾಡುಜೀವಿಗಳಾದ ಜೇನು ಕುರುಬರು' (ಕಾ.ವಾ.), ಕೆ. ಆರ್. ಕೃಷ್ಣಯ್ಯ ಅವರ 'ಹುತ್ತರಿ' (ಕಾ.ವಾ.), ಚೌಕಾರು ಪರಮೇಶ್ವರ ಭಟ್ ಅವರ 'ಕೊಡಗಿನ ಜನಪದ ನೃತ್ಯಗಳು' (ಕಾ.ವಾ.), ಅಂಬಳೆ ಸುಬ್ಬರಾವ್ ಅವರು ಸಹಾ ಬರೆದ 'ಕೊಡಗಿನ ಜಾನಪದ ನೃತ್ಯಗಳು',8 ಎಂ. ಪಿ. ಕೃಷ್ಣರಾಜು ಅವರ ಮಡಿಕೇರಿಯಲ್ಲಿ ಸುಮಾರು ಒಂದೂವರೆ ಶತಮಾನಗಳಿಂದಲೂ ಆಚರಿಸಿಕೊಂಡು ಬಂದಿರುವ ವಿಶಿಷ್ಟ ದಸರಾ ಉತ್ಸವ ಕುರಿತ 'ಕೊಡಗಿನ ಬೆಡಗಿನ ದಸರಾ' (ಸಾ.ಕಾ.), ಟಿ. ಎ. ಮದುರೆಸೆಟ್ಟಿ ಅವರು ಪ್ರಕಟಿಸಿದ 'ಮಡಿಕೇರಿ ದಸರಾ' (ಸಾ.ಕಾ.), ಐನಂಡ ಧನಂಜಯ ಅವರ ತೆಂಗೆಬೋಡಿ,ಓಟ್‌ಬೋಡಿ, ಕುದುರೆಓಟ್, ನಾಟಓಟ್ ಮೊದಲಾದ ಕ್ರೀಡೆಗಳಿಗೆ ಸಂಬಂಧಿಸಿದ 'ಕೊಡಗಿನ ಜಾನಪದ ಕ್ರೀಡೆಗಳು' (ಸಾ.ಕಾ.), ರಾಣು ಅಪ್ಪಣ್ಣ ಅವರ 'ಕೊಡಗಿನ ಹಬ್ಬಗಳು' (ಸಾ.ಕಾ.), ಇತ್ಯಾದಿಗಳು ಗಮನಾರ್ಹವಾದುವು. ಇವಲ್ಲದೆ, ಕೆ. ಆರ್. ಕೃಷ್ಣಯ್ಯ ಅವರು 'ಕೊಡವ ಜಾನಪದ ಸಾಹಿತ್ಯ' ಎಂಬ ಲೇಖನದಲ್ಲಿ,9 ಕೊಡವ ಭಾಷಾ ಜನಪದ ಸಾಹಿತ್ಯವನ್ನು ಶಿಶುಸಾಹಿತ್ಯ, ಮದುವೆಯ ಹಾಡುಗಳು, ಸಾವಿನ ಹಾಡುಗಳು, ದೇವರ ಹಾಡುಗಳು ಮತ್ತು ಗಾದೆಗಳು ಎಂಬ ವಿಭಾಗಗಳನ್ನು ಪ್ರತ್ಯೇಕವಾಗಿ ವಿವೇಚಿಸಿರುವರು. ದೇವರ ಉತ್ಸವ, ಜಾತ್ರೆ, ಮದುವೆ–ಮಹೋತ್ಸವ, ಸುಗ್ಗಿಯ ಸೊಬಗು, ಇತ್ಯಾದಿ ಹಾಡುಗಳಲ್ಲಿಯ ಕೊಡಗಿನ ಬಣ್ಣನೆಯನ್ನೂ ವೀರರಾಜಪೇಟೆ, ಹಾಲೇರಿ ಅರಸರು ಮತ್ತು ಅವರ ಸೇವಾಕಾರ್ಯ, ಇತ್ಯಾದಿಗಳ ಪ್ರಸ್ತಾಪವನ್ನೂ ಕ್ರೋಡೀಕರಿಸಿ ಬೆಸೂರು ನಂಜಣ್ಣ ಅವರು 'ಜಾನಪದದಲ್ಲಿ ಕೊಡಗು' ಎಂಬ ತಮ್ಮ ಲೇಖನದಲ್ಲಿ10 ನಿರೂಪಿಸಿರುವುದು ಗಮನೀಯವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲೂಕು ಕರಿಯಪ್ಪನದೊಡ್ಡಿಯ ಗೊರವರ ಕೆಂಚಮಲ್ಲಯ್ಯ ಅವರು ಹಾಡಿದ ಕೊಡಗಿನ ವೀರರಾಜನ ಬಗೆಗಿನ ಕಥನಕಾವ್ಯವನ್ನು ಸಂಗ್ರಹಿಸಿರುವ ಡಾ|| ಚಕ್ಕೆರೆ ಶಿವಶಂಕರ್ ಅವರು, ಆ ಬಗೆಗೆ ಪ್ರಬಂಧವನ್ನು ಸಿದ್ಧಪಡಿಸಿರುವರು. ಮದರಾಸಿನ ಏಷಿಯಾ ಅಧ್ಯಯನ ಸಂಸ್ಥೆಯವರು ಹೊರತಂದಿರುವ 'ಎನ್‌ಸೈಕ್ಲೊಪೀಡಿಯಾ ಆಫ್ ದಿ ಫೋಕ್ ಕಲ್ಚರ್ ಆಫ್ ಕರ್ನಾಟಕ' (1991) ಸಂಪುಟ 1ರಲ್ಲಿ, ಡಾ|| ಡಿ. ಬಿ. ರಾಮಚಂದ್ರಾಚಾರ್ ಅವರು ಕೊಡಗಿನ ಜಾನಪದ ಮತ್ತು ಆದಿವಾಸಿ ಜನಾಂಗಗಳವರ ಸಂಸ್ಕೃತಿ ಕುರಿತು ಸುದೀರ್ಘ ಪ್ರಬಂಧವನ್ನು ಪ್ರಕಟಿಸಿರುವರು. ಇವರೇ ಅಲ್ಲದೆ, ಕೊಡಗು ಜಾನಪದ

1. ಹೊನ್ನ ಬಿತ್ತೇವು ಹೊಲಕೆಲ್ಲ.
2. ಮೈಸೂರು ಜಾನಪದ ಬಳಗದ 'ಶಿಶುಪ್ರಾಸಗಳು' ಪ್ರಕಟಣೆ.
3. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸೆಪ್ಟೆಂ. – ಡಿಸೆಂ., 1945, ಪು. 26–38
4. ಜೀವನ, 1960–61, ಪು. 270–73, 306–309, 373–78, 443–46
5. ವೀರರಾಜೇಂದ್ರಪೇಟೆ ಕರ್ನಾಟಕ ಸಂಘದ ಕಟ್ಟಡ ಉದ್ಘಾಟನೆ ಸ್ಮರಣ ಸಂಚಿಕೆ, ಪು. 87
6. ಕನ್ನಡ ಕಾವೇರಿ – ಸ್ಮರಣ ಸಂಚಿಕೆ, ಪು. 83–84
7. ಕಾವೇರಿ – ವಾರ್ಷಿಕ ಸಂಚಿಕೆ (ಮುಂದೆ 'ಕಾ.ವಾ.' ಎಂದಿದೆ), ಪು. 1–3, 6–7
8. ಸಾಹಿತ್ಯ ಕಾವೇರಿ – ಸ್ಮರಣ ಸಂಚಿಕೆ (ಮುಂದೆ 'ಸಾ.ಕಾ.' ಎಂದಿದೆ), ಪು. 61–62
9. ಸ್ಪಂದನ – ಸ್ಮರಣ ಸಂಚಿಕೆ, ಪು. 13–17
10. ವೀರರಾಜಪೇಟೆ ಸರಕಾರೀ ಮಾದರೀ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸ್ಮರಣ ಸಂಚಿಕೆ, ಪು. 66–68

ಕುರಿತು ಪರಿಚಯಾತ್ಮಕ ಬರಹಗಳನ್ನು ಬೆಳಕಿಗೆ ತಂದಿರುವವರಲ್ಲಿ ಕೆ. ಎಸ್. ಶೋಭ, ಮೋನಿ, ಜೋಸೆಲಿನ್ ಲೋಬೊ ಮೊದಲಾದವರನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ.

**ಜನಪದ ಕಲಾವಿದರು :** ಕೊಡಗಿನಾದ್ಯಂತ ಕಂಡುಬರುವ ಜನಪದ ಗಾಯಕರು, ಕಲಾವಿದರು ಮತ್ತು ತಂಡಗಳವರು ಇಲ್ಲಿಯ ವಿವಿಧ ಜನಪದ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ ಸಕ್ರಿಯರಾಗಿದ್ದಾರೆ. ಕೆಲವು ಕಲಾವಿದರು ರಾಜ್ಯ ಮತ್ತು ರಾಷ್ಟ್ರಮಟ್ಟದ ಪುರಸ್ಕಾರಗಳನ್ನು ಪಡೆಯುವುದರೊಡನೆ ಈ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕುಶಾಲನಗರ ಸಮೀಪದ ಬಸವನಹಳ್ಳಿಯ ದೇವಸೋಲಿಗರ ದೊಡ್ಡಸಿದ್ಧಯ್ಯ ಅವರು ಅನೇಕ ಜನಪದ ಕಥನಗೀತೆಗಳನ್ನು ಹಾಡುವುದರೊಂದಿಗೆ ಸೋಲಿಗರ ಹಾಡುಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯವನ್ನುಂಟು ಮಾಡಿದ್ದಾರೆ; ತಮ್ಮ ಈ ಸೇವೆಗೆ 1980ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಹುತ್ತರಿಕುಣಿತ ಮತ್ತು ಕಲಾಸಂಘಟನಾ ಕಾರ್ಯದಲ್ಲಿ ಅಧಿಕ ಶ್ರದ್ಧೆ ವಹಿಸಿ ಹೆಸರು ಪಡೆದ ದೇವಣಗೇರಿಯ ಪುಗ್ಗೇರ ಯಂ. ಕರುಂಬಯ್ಯ ಅವರು ರಾಷ್ಟ್ರಮಟ್ಟದಲ್ಲಿ ಕಲಾಪ್ರದರ್ಶನ ನೀಡುವುದರೊಡನೆ, ಕೊಡಗಿನ ಕಲೆಗಳ ಬಗೆಗೆ ಲೇಖನಗಳನ್ನೂ ಬರೆದು ಪ್ರಕಟಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ 1981ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ. ಹಾಗೆಯೇ, ಕೊಡಗಿನ ವಿಶಿಷ್ಟ ನೃತ್ಯ ಕಲೆಯಾದ ಉಮ್ಮತ್ತಾಟನ್ನು ಜನಪ್ರಿಯಗೊಳಿಸುವಲ್ಲಿ ಶ್ರಮಿಸಿದವರೂ ಪುಗ್ಗೇರ ಯಂ. ಕರುಂಬಯ್ಯ ಅವರ ಪತ್ನಿಯೂ ಆದ ಮೂರ್ನಾಡು ಕಿಗ್ಗಾಲು ಗ್ರಾಮದ ಪಿ.ಕೆ. ಪೂವಮ್ಮ ಅವರು ಸಹಾ 1984ರ ಸಾಲಿನ ಪ್ರಶಸ್ತಿಯನ್ನು ಇದೇ ಅಕಾಡೆಮಿಯಿಂದ ಪಡೆದುಕೊಂಡಿರುವರು. ಹುತ್ತರಿ ಮತ್ತು ನೃತ್ಯಗಳಿಗೆ ಹಿನ್ನೆಲೆಯಾಗಿ ಹಲವಾರು ವಾದ್ಯಗಳನ್ನು ನುಡಿಸುವಲ್ಲಿ ನೈಪುಣ್ಯತೆ ಪಡೆದಿರುವ ಕೈಂಗೇರಿ ದೇವಣಗೇರಿಯ ಹರಿಜನ ಎನ್. ಮಾದ, ವಿಶಿಷ್ಟ ತಾಳವಾದ್ಯವೆಂದು ಪರಿಗಣಿಸಲ್ಪಟ್ಟ ಕರಟವಾದನದಲ್ಲಿ ನುರಿತಿರುವ ಮತ್ತು ಕೊಡಗಿನಲ್ಲೆಲ್ಲ ಪ್ರಸಿದ್ಧಿ ಪಡೆದಿರುವ ಸೋಮವಾರಪೇಟೆಯ ಬಿ.ಜಿ. ದೇವದಾಸ್, ಕೊಂಬಾಟ್ ಕಲಾವಿದ ಚೇನಂಡ ಬೆಳ್ಯಪ್ಪ ಮತ್ತು ಜನಪದ ನೃತ್ಯಪಟು ಏಡಿ ಕುಯಿಞ ಅವರುಗಳು ತಮ್ಮ ಕಲಾಸಾಧನೆಗಾಗಿ ಕ್ರಮವಾಗಿ 1985, 1986, 1990 ಮತ್ತು 1991ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಗಳಿಂದ ಪುರಸ್ಕೃತರಾಗಿರುವರು. ಈ ಜಿಲ್ಲೆಯ ಜನಪ್ರಿಯ ಜನಪದ ಗಾಯಕರಲ್ಲಿ ಬೆಸೂರು ನಂಜಣ್ಣ ಅವರು ಮುಖ್ಯರಾಗಿದ್ದು, ಸಾಹಿತ್ಯ ಮತ್ತು ಜಾನಪದಗಳಲ್ಲಿಯೂ ಇವರು ಬರವಣಿಗೆಗಳನ್ನು ಪ್ರಕಟಿಸಿರುವರು. ಇತರ ಜನಪ್ರಿಯ ಜನಪದ ಗಾಯಕರಲ್ಲಿ ಬೆಸೂರಿನ ಮೋಹನ್ ಕಾಳೇಗಾರ್, ಗಿರೀಶ್ ಕೋಟೆ, ವೇದಚಂದ್ರ ಲಕ್ಷ್ಮ, ಶಾಂತೇಶ್ ಸಾಹುಕಾರ್, ಮಡಿಕೇರಿಯ ಬಿ.ಟಿ. ರಾಮಚಂದ್ರ, ಪೊನ್ನಂಪೇಟೆಯ ಪಣಿಕರ ಬೋಪಣ್ಣ ಮೊದಲಾದವರೂ ಗಾಯಕಿಯರಲ್ಲಿ ಚಿಕ್ಕಕುಂದಗ್ರಾಮದ ಸಿ.ಟಿ. ಜಯಮ್ಮ, ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳನ್ನು ಹಾಡಿರುವ ಸೋಮವಾರಪೇಟೆ ತಾಲೂಕು ಸುಂಡುವಳ್ಳಿಯ ಗಂಗಮ್ಮ ಮತ್ತು ಇವರೊಡನೆ ಸೊಲ್ಲು ಹೇಳಿರುವ ಕೊಡ್ಲಿಪೇಟೆಯ ಕೆಂಚಮ್ಮ ಮೊದಲಾದವರೂ ಗಮನಾರ್ಹರು.

ವಿವಿಧ ಜನಪದ ನೃತ್ಯಗಳನ್ನೂ ಕಲೆಗಳನ್ನೂ ಪ್ರತಿನಿಧಿಸುವ ಗಮನಾರ್ಹ ಕಲಾವಿದರಲ್ಲಿ ಬೊಳಕಾಟ್ ನೃತ್ಯಕಲೆಯಲ್ಲಿ ದೇವಣಗೇರಿಯ ಎಂ.ಎ. ಚಿನ್ನಪ್ಪ, ವೀರರಾಜಪೇಟೆ ಹರಿಹರದ ಟಿ.ಪಿ. ಮಾದಪ್ಪ,ಬೆಕ್ಕೆಸೊಡ್ಲೂರಿನ ಡಿ. ಮುತ್ತಣ್ಣ, ಚೆಂಬೆಬೆಳ್ಳೂರಿನ ಬಿ.ಎ. ಮುತ್ತಪ್ಪ, ಮಡಿಕೇರಿ ತಾಲೂಕು ಕಾಂತೂರಿನ ಎಂ.ಸಿ. ಸುಬ್ಬಪ್ಪ, ಭಾಗಮಂಡಲದ ಚಿನ್ನಪ್ಪ ಹೊಸಗದ್ದೆ ಮೊದಲಾದವರೂ ಪೀಲಿಯಾಟ್‌ನಲ್ಲಿ ಚೆಂಬೆ ಬೆಳ್ಳೂರಿನ ಪಿ. ಎಂ. ಮಂದಪ್ಪ ಮೊದಲಾದವರೂ ಕೈತಲೆ ಆಟ್ ನೃತ್ಯದಲ್ಲಿ ದೇವಣಗೇರಿಯ ಪಿ.ಹೆಚ್. ಹುಸೇನ್ ಅತ್ತನೆ, ಚೆಂಬೆಬೆಳ್ಳೂರಿನ ತೇನ್ನಂಡ ಅಯ್ಯಪ್ಪ ಮೊದಲಾದವರೂ (ಜೋಯಿಪಾಟ್) ಬಲಮುರಿಯ ಬಿ. ಮಾದಪ್ಪ ಮುತ್ತಿತರರೂ (ವಾಲಗತ್ತಾಟ್) ಸೋಮವಾರಪೇಟೆ ತಾಲೂಕು ಹೇರೂರಿನ ರುದ್ರ ಎಚ್. ಕೋಟೆಕೊಪ್ಪ ಜನಪ್ರಿಯ ಕಲಾವಿದರುಗಳು. ಕೋಲಾಟದ ಕಲಾವಿದರಲ್ಲಿ ವೀರರಾಜಪೇಟೆ ತಾ॥ ಟಿ. ಶೆಟ್ಟಿಗೇರಿಯ ಅಲೇಮಾಡ ಮುತ್ತಯ್ಯ, ಕೆ.ಡಿ. ಕುಟ್ಟಪ್ಪ, ಬಿಟ್ಟಂಗಾಲದ ಚಿಮ್ಮ ಸಿ.ಜಿ. ಸಾಂಗಲ, ಬೆಕ್ಕೆಸೊಡ್ಲೂರಿನ ಎಸ್.ಡಿ. ತಿಮ್ಮಯ್ಯ, ಹರಿಹರದ ಐ.ಟಿ. ಮುತ್ತಣ್ಣ, ಸೋಮವಾರಪೇಟೆ ತಾಲೂಕು ಹೆಬ್ಬಾಲೆಯ ಹೆಚ್.ಕೆ. ಮಾದಯ್ಯ ಮೊದಲಾದವರನ್ನು ಪ್ರಸ್ತಾಪಿಸಬಹುದು. ಸುಗ್ಗಿ ಕುಣಿತದ ಕಲಾವಿದರಲ್ಲಿ ಹರಿಹರದ ಟಿ.ಪಿ. ಮಾದಪ್ಪ, ಕೋಲ ಕಲಾವಿದರಲ್ಲಿ ಮಡಿಕೇರಿ ತಾಲೂಕು ನೇಲಜಿ ಗ್ರಾಮದ ಮಲಯರ ಸುಬ್ಬಯ್ಯ, ಮಲಯರ ದೇವಣ್ಣ, ವೀರರಾಜಪೇಟೆ ತಾಲೂಕಿನ ಅಜಲಮದರ ಮೊದಲಾದವರು, ಹಲಗೆ ಕುಣಿತದ ಕಲಾವಿದರಲ್ಲಿ ವೀರರಾಜಪೇಟೆ ತಾಲೂಕು ಕೋಣಗೇರಿಯ ಬಾಬಿ ಮರಿಯ ಹರಿಜನ, ನಾಂಗಾಲದ ನಾಗು ಮೊದಲಾದವರು ಮುಖ್ಯರಾದವರು. ಬೆಕ್ಕೆಸೊಡ್ಲೂರಿನ ಎಂ.ಕೆ. ಮಾದಪ್ಪ, ಮಡಿಕೇರಿ ತಾಲೂಕು ಯವಕಪಾಡಿಯ

ಅಪ್ಪುಣ್ಣು, ಅಚ್ಚು ಮೊದಲಾದವರು ಯೆರವರ ಕುಣಿತದ ಕಲಾವಿದರು. ಉಳಿದ ಕಲಾವಿದರಲ್ಲಿ ಹೆಬ್ಬಾಲೆಯ ಹನುಮಯ್ಯ ಮಾರಿಕುಣಿತದಲ್ಲಿ, ಕೊಡ್ಲಿಪೇಟೆಯ ಯಲ್ಲಪ್ಪ ಕುಟುಮರ ವೇಷದಲ್ಲಿ, ಬೆಸೂರು ಚಿಕ್ಕಭಂಡಾರದ ತಿಮ್ಮಯ್ಯ ಬೆಂದಯ್ಯ ಗರುಡಗಂಬದ ದಾಸಯ್ಯನ ವೇಷದಲ್ಲಿ, ಅದೇ ಗ್ರಾಮದ ಎಚ್.ಎಸ್. ದೊಡ್ಡಕಾಳಯ್ಯ ಭಜನೆಯಲ್ಲಿ, ದೇವಣಗೇರಿಯ ಬೊಮ್ಮ ಹರಿಜನ ಕರಡಿಮಜಲು ಮತ್ತು ಹಲಗೆ ಕುಣಿತಗಳಲ್ಲಿ, ಸೋಮವಾರಪೇಟೆ ತಾಲೂಕು ನಿಲುವಾಗಿಲು ಗ್ರಾಮದ ಸಣ್ಣಳವ ನಿಂಗಯ್ಯ, ಹೆಬ್ಬಾಲೆಯ ಎಚ್.ಟಿ. ಲಕ್ಕಪ್ಪ, ಎಚ್.ಕೆ. ಮಾದಪ್ಪ, ತೊರೆನೂರಿನ ಯಡೂರಪ್ಪ, ನೀರ್ಗುಂದದ ಎನ್.ಸಿ. ಚಿಕ್ಕವೀರಪ್ಪ, ಗೌಡಳ್ಳಿಯ ವೆಂಕಟರಮಣಾಚಾರ್ ಮೊದಲಾದವರು ಯಕ್ಷಗಾನ ಬಯಲಾಟದಲ್ಲಿ ನುರಿತವರಾಗಿದ್ದಾರೆ. ಇದೇ ತಾಲೂಕು ಕಾಡನಕೊಲ್ಲಿಯ ಎಂ.ಪಿ. ಗಣಪತಿ ಅವರು ಬಿಲ್ಲಾಟ್ ಮತ್ತು ಪರಿಕೆಳಿಗಳಲ್ಲಿಯೂ ಎಂ.ಎ. ತಮ್ಮಯ್ಯ ಅವರು ಕೊಂಬಾಟ್, ಕೈತಲೆಆಟ್ ಮತ್ತು ಪೀಲಿಯಾಟ್‌ಗಳಲ್ಲಿಯೂ ನಿಪುಣರಾಗಿದ್ದಾರೆ.

ಕೆಲವು ಕಲಾವಿದರು ಕಲಾತಂಡಗಳೊಡನೆ ತಮ್ಮನ್ನು ಗುರುತಿಸಿಕೊಂಡಿರುವುದುಂಟು. ಅಂತಹವರಲ್ಲಿ ಬಲಮುರಿ ಗ್ರಾಮ ಕಲಾತಂಡದ ಕೆ. ಡಿ. ಉತ್ತಪ್ಪ (ಬೊಳಕಾಟ್, ಪರಿಕೆಳಿ,ಪೂಯಾಕುಮರಿ ಮತ್ತು ಕೋಲಾಟ), ಬೆಕ್ಕೆಸೊಡ್ಲೂರು ಯುವಕ ಸಂಘದ ಡಿ. ಮುತ್ತಣ್ಣ (ಬೊಳಕಾಟ್), ಚಾವಲಿಗ್ರಾಮ ಕಲಾತಂಡದ ಎಳ್ತಂಡ ಚಿಣ್ಣಪ್ಪ (ಕೊಂಬಾಟ್), ಸೋಮವಾರಪೇಟೆ ತಾಲೂಕು ಹಾಲೇರಿ ಗ್ರಾಮ ಕಲಾತಂಡದ ವಿ. ಕೆ. ಅಯ್ಯಪ್ಪ (ಬೊಳಕಾಟ್), ಚೇರಳಶ್ರೀಮಂಗಲ ಗ್ರಾಮ ಕಲಾತಂಡದ ಸಿ. ಎಂ. ಅಯ್ಯಪ್ಪಮ್ಮಯ್ಯ (ಕೊಂಬಾಟ್), ಐರಲವೆಲಮುಡಿ ಗ್ರಾಮ ಕಲಾತಂಡದ ಆಡಕೇರಿ ಈರಪ್ಪ (ಪೀಲಿಯಾಟ್), ಬಿ. ಕೆ. ಕರುಂಬಯ್ಯ (ಕೈತಲೆಆಟ್), ಕಾಂತೂರು ಗ್ರಾಮ ಕಲಾತಂಡದ ಎ. ಪಿ. ಉತ್ತಪ್ಪ (ಬೊಳಕಾಟ್), ವೀರರಾಜಪೇಟೆ ತಾಲೂಕು ಹುದಿಕೇರಿ ಮಹಿಳಾ ಸಮಾಜ ಕಲಾತಂಡದ ಕೆ. ಕೆ. ವಿಠಲ (ಕೋಲ), ಚೆಂಬೆಬೆಳ್ಳೂರು ಮಹಿಳಾಸಮಾಜದ ಎಸ್. ಎಸ್. ಉಮ್ಮಯ್ಯ (ವೀರಗಾಸೆ), ಸಿದ್ದಾಪುರದ ಷೇಕ್ ಅಹಮದ್ (ಹುಲಿವೇಷ), ಬೆಸೂರು ಚಿಕ್ಕಭಂಡಾರದ ದೇವರಾಜ ಸಂಗಡಿಗರು (ಹಲಗೆ ಕುಣಿತ), ಸೋಮವಾರಪೇಟೆ ಪಟ್ಟಂದ ಕಲಾತಂಡದ ಬಿ. ಜಿ. ದೇವದಾಸ್ (ಕರಟವಾದನ), ಚೆಟ್ಟಳ್ಳಿ ಮಂಗಳಗ್ರಾಮ ಕಲಾತಂಡದ ಸೋಮಯ್ಯ (ಭಜನೆ), ಮಾದಾಪುರ ಗ್ರಾಮ ಕಲಾತಂಡದ ಗಿರಿಜನರ ಕೊಂಗಿ (ಕೋಡಂಗಿ ವೇಷ), ಕೊಡ್ಲಿಪೇಟೆಯ ಮಲ್ಲೇಗೌಡ ಸಂಗಡಿಗರು (ಸುಗ್ಗಿಕುಣಿತ), ತಲ್ತಾರೆ ಶೆಟ್ಟಳ್ಳಿ ಗ್ರಾಮ ಕಲಾತಂಡದ ಬಿ. ಎನ್. ಮುತ್ತಣ್ಣ, ಕ್ಯಾತಗ್ರಾಮ ತಂಡದ ಮಂಚೇಗೌಡ, ನೀರ್ಗುಂದ ಗ್ರಾಮ ಕಲಾತಂಡದ ಕೆಂಚೇಗೌಡ, ಶಾಂತಳ್ಳಿ ಗ್ರಾಮ ಕಲಾತಂಡದ ಎಸ್. ಎ. ಕಾಳಪ್ಪ, ಮಾದ್ರೆಗ್ರಾಮ ಕಲಾತಂಡದ ಕೆ.ಡಿ. ಈರಯ್ಯ (ಎಲ್ಲರೂ ಸುಗ್ಗಿಕುಣಿತದವರು), ಚೆಂಬೆಬೆಳ್ಳೂರಿನ ವಸಂತ ಮತ್ತು ಸಂಗಡಿಗರು (ಸುಗ್ಗಿಕುಣಿತ), ಚಾವಲಿಹಳ್ಳಿ ಹುತ್ತರಿ ಕೋಲಾಟ ಮಂಡಳಿಯ ನಂಗಾರು ಸುಬ್ರಾಯ, ಭಾಗಮಂಡಲ ಕಲಾತಂಡದ ಕೆ. ಎಸ್. ಚಂಗಪ್ಪ, ಬಾಡಗ ಗ್ರಾಮ ಕಲಾತಂಡದ ಕುರುಬರ ಸಿದ್ಧ, ದೇವಣಗೇರಿ ಗ್ರಾಮದೇವರ ತಂಡ, ಶಾಂತಳ್ಳಿಗ್ರಾಮ ಕಲಾತಂಡದ ಎನ್. ಪಿ. ಈರಯ್ಯ, ಕೆರಕೇರಿ ಗ್ರಾಮ ಕಲಾತಂಡದ ಚನ್ನಯ್ಯ, ಕಾಡನಕೊಲ್ಲಿ ಹುತ್ತರಿ ಕೋಲಾಟ ತಂಡ, ಬೆಸೂರಿನ ಶಾಂತೇಶ್ ಸಾಹುಕಾರ್ ಕೋಲಾಟದ ತಂಡ (ಎಲ್ಲರೂ ಕೋಲಾಟದವರು), ವೀರರಾಜಪೇಟೆ ತಾಲೂಕು ಬೇಟೆಯಾಡ ಕಲಾತಂಡ, ದೇವಣಗೇರಿ ಗ್ರಾಮ ಕಲಾತಂಡದ ಚಿನ್ನ, ಹಾಲುಗುಂದ ಕೊಂಡಂಗೇರಿ ಯೆರವರ ಸಂಘದ ಯೆರವರ ಸಿದ್ಧ (ಎಲ್ಲರೂ ಯೆರವರ ಕುಣಿತದವರು) ಮೊದಲಾದವರನ್ನು ಇಲ್ಲಿ ಪ್ರಸ್ತಾಪಿಸಬಹುದು. ಇವರೇ ಅಲ್ಲದೆ, ಚೊಟ್ಟೆಕಮಾಡ ಅಯ್ಯಮ್ಮ, ಮಾಣಿರ ಪೂವಯ್ಯ, ಮಲಚಿರ ಪೂವಯ್ಯ ದಂಪತಿಗಳು, ತಾಣ್ಚಿರ ಶಂಭು, ಕೋಡಂಗಡ ಪೆಮ್ಮಯ್ಯ, ಅಚ್ಚಿಯಂಡ ಅಪ್ಪಣ್ಣಮ್ಮ, ಅಪ್ಪೇಂಗಡ ಮುತ್ತಣ್ಣ, ಪಣಿಕರ ಬೆಳ್ಯಪ್ಪ, ಪಿ. ಬಿ. ಬೋಪಣ್ಣ, ಚೇಂದಿರ ಎಸ್. ಮುತ್ತಮ್ಮ, ಬಡುವಮಂಡ ಟಿ. ಪೊನ್ನಮ್ಮ, ಕಿರ್‌ದಂಡ ಟಿ. ದೇಚಮ್ಮ, ಉದಿಯಾಂಡ ಅ. ಚೋಂದಮ್ಮ, ಪೊನ್ನೋಟಿರ ಚಿಣ್ಣಮ್ಮ, ಜಿ. ಕರಿಶೆಟ್ಟಿ, ಕೆಂಪಾಚಾರಿ, ಕೆ. ಕೆ. ಕಾಳಪ್ಪ ಮುಂತಾದವರೂ ಕೊಡಗು ಜಾನಪದದ ವಿವಿಧ ಕಲೆಗಳಲ್ಲಿ ಪರಿಣತರೆನಿಸಿರುವರು.

ಜನಪದ ಕಲೆಗಳ ಸಂವರ್ಧನೆಯಲ್ಲಿ ಕಲಾವಿದೆಯರ ಮತ್ತು ಕೆಲವು ಮಹಿಳಾ ಸಂಘಗಳ ಪಾತ್ರವೂ ಗಮನೀಯವಾದುದಾಗಿದ್ದು, ವೀರರಾಜಪೇಟೆ ತಾಲೂಕು ಹುದಿಕೇರಿ ಮಹಿಳಾ ಸಮಾಜ ಕಲಾತಂಡದ ಬಿ. ಬಿ. ಗೌರಮ್ಮ, ಹರಿಹರ ಸುಬ್ರಹ್ಮಣ್ಯ ಮಹಿಳಾ ಸಮಾಜದ ಎಂ. ಕೆ. ಮುತ್ತಮ್ಮ, ಮಡಿಕೇರಿ ತಾಲೂಕು ಕಾಂತೂರು ಗ್ರಾಮ ಕಲಾತಂಡದ ಎಂ. ಎ. ದೇವಕಿ (ಎಲ್ಲರೂ ಬೊಳಕಾಟ್ ಕಲಾವಿದೆಯರು), ವೀರರಾಜಪೇಟೆ ತಾಲೂಕು ಬಲ್ಯಮಂಡೂರಿನ ಉಮ್ಮತ್ತಾಟ್ ಕಲಾತಂಡದ ಎಂ. ಬಿ. ಅಮ್ಮಕ್ಕಿ, ಕಾನೂರು ಗ್ರಾಮ ಮಹಿಳಾ ಸಮಾಜದ ಎಂ. ಎಸ್. ಹೂವಮ್ಮ (ಉಮ್ಮತ್ತಾಟ್,

ಹುತ್ತರಿ ಆಟ್), ಬಿಟ್ಟಂಗಾಲ ಮಾತಾ ಮಹಿಳಾ ಸಮಾಜದ ಸಿ. ಎಂ. ಪೊನ್ನಮ್ಮ (ಕೋಲಾಟ, ಯೆರವರ ಕುಣಿತ, ಹಾಡುಗಾರಿಕೆ), ಕೆ.ಎಸ್. ಚೋಂದಮ್ಮ (ಯೆರವರ ಕುಣಿತ), ಹುದಿಕೇರಿಯ ಮುತ್ತಮ್ಮ, ಬಿ. ಕೆ. ಕಾರಿಯಪ್ಪ, ಹರಿಹರದ ರೋಹಿಣಿ ಸಿ. ಜಿ. ಗಣಪತಿ, ಹಾತೂರು ಮಹಿಳಾ ಸಮಾಜದ ಕೆ. ಕೆ. ಶಾಂತಿ (ಎಲ್ಲರೂ ಕೋಲಾಟದ ಕಲಾವಿದೆಯರು) ಮೊದಲಾದವರು ಇಲ್ಲಿ ಉಲ್ಲೇಖಾರ್ಹರಾಗಿರುವರು.

ಕಲೆಯನ್ನು ಗುರುತಿಸಿ, ಕಲಾವಿದರನ್ನು ಸಂಘಟಿಸಿ ಸೂಕ್ತ ತರಬೇತಿ ಮತ್ತು ಪ್ರೋತ್ಸಾಹಗಳನ್ನು ನೀಡುವುದರೊಡನೆ ಕೊಡಗಿನ ಜನಪದ ಕಲೆಗಳಿಗೆ ಜನಪ್ರಿಯತೆಯನ್ನು ತಂದುಕೊಟ್ಟವರು ದೇವಣಗೇರಿಯ ಪುಗ್ಗೇರ ಯಂ. ಕರುಂಬಯ್ಯ ಅವರು. ಕೊಡಗಿನ ಹುತ್ತರಿ ಕುಣಿತದ ತಂಡವು ಕರ್ನಾಟಕದ ಹಲವೆಡೆಗಳಲ್ಲಿಯೂ ದೆಹಲಿ ಮತ್ತು ಏಷಿಯಾ ಮೇಳಗಳಲ್ಲಿಯೂ ಇವರ ನಾಯಕತ್ವದಲ್ಲಿ ಪ್ರದರ್ಶನ ನೀಡಿದೆ. ಕೊಡಗಿನ ಜನಪದ ಕಲೆಗಳನ್ನು ಕುರಿತು ಇವರು ಲೇಖನಗಳನ್ನು ಪ್ರಕಟಿಸಿರುವರು. ಇವರ ಪತ್ನಿ ಪಿ. ಕೆ. ಪೂವಮ್ಮ ಅವರು ಉಮ್ಮತ್ತಾಟ್ ಕಲೆಯನ್ನು ಜನಪ್ರಿಯಗೊಳಿಸುವಲ್ಲಿ ಶ್ರಮಿಸಿರುವರಲ್ಲದೆ, ದೇವಣಗೇರಿಯ ಮಹಿಳಾ ಸಮಾಜದ ಆಶ್ರಯದಲ್ಲಿ ಸಾಂಪ್ರದಾಯಿಕ ಕೊಡವ ನೃತ್ಯಗಳ ತರಬೇತಿ ಹಾಗೂ ಪ್ರದರ್ಶನಗಳಿಗೂ ಅವಕಾಶ ಕಲ್ಪಿಸಿರುವರು. ಭಾರತದ ಅನೇಕ ಕಡೆಗಳಲ್ಲಿ ಕಾರ್ಯಕ್ರಮ ನೀಡಿರುವ ಹರಿಜನ ಎನ್. ಮಾದು ಅವರ ಕೊಂಬುಕೊಟ್ಟು ಮೇಳದ ಪ್ರೋತ್ಸಾಹಕರೂ ಕರುಂಬಯ್ಯ ಅವರೇ ಆಗಿರುವರು. ಹಾಗೆಯೇ, ಮಡಿಕೇರಿಯ ರಾಣು ಮಾಚಯ್ಯ ಅವರು ಕೊಡವ ನೃತ್ಯಗಳು ಮತ್ತು ಕೊಡವ ಜಾನಪದದ ಬಗೆಗೆ ವಿಶೇಷ ಆಸಕ್ತಿ ವಹಿಸಿರುವರು. ಕೊಡಗಿನ ಪ್ರಾದೇಶಿಕ ಚರಿತ್ರೆ ಮತ್ತು ಜಾನಪದ ಸಂಶೋಧನೆಗಳಿಗೆ ಮೀಸಲಾದ 'ಕೊಡಗು ಪ್ರಾದೇಶಿಕ ಸಂಶೋಧನ ಕೇಂದ್ರ'ದ (1985) ಸ್ಥಾಪಕರು ಪಾಲಚ್ಚಂಡ ಎ. ತುಳಸೀದೇವಿ ಮತ್ತು ಅರವಿಂದ ಆರ್ಯ ದಂಪತಿಗಳು. ಸೋಮವಾರಪೇಟೆ ತಾಲೂಕು ಬ್ಯಾಡಗೋಟ ಗ್ರಾಮದಲ್ಲಿ ಈಗ ನೆಲೆಗೊಂಡಿರುವ ಈ ಸಂಸ್ಥೆಯು ಕೊಡಗು ಜಾನಪದದ ಬಗೆಗೂ ವಿಶೇಷ ಗಮನ ಹರಿಸಿದೆ. ತುಳಸೀದೇವಿ ಅವರು ಮಾತೃಮೂಲದ ಕೊಡವ ಜಾನಪದೀಯ ವ್ಯವಸ್ಥೆ ಕುರಿತು ಗ್ರಂಥವನ್ನು ಸಿದ್ಧಪಡಿಸಿದ್ದಾರೆ, ಅರವಿಂದ ಆರ್ಯ ಅವರು ಕೊಡಗು ಚರಿತ್ರೆ ಕುರಿತ ಸಾಹಿತ್ಯಿಕ ಜಿಜ್ಞಾಸೆಗಳ ಬಗೆಗೆ ಅಧ್ಯಯನ ಕೈಗೊಂಡಿರುವರು.

## ರಂಗಭೂಮಿ

ಆಧುನಿಕ ನಾಟಕ ಕಲೆಯು ಕಳೆದ ಶತಮಾನದಲ್ಲಿಯೇ ಕೊಡಗಿನಲ್ಲಿ ತನ್ನ ಪ್ರಭಾವವನ್ನು ಬೀರಿದ್ದಿತು. ಇತರ ಎಡೆಗಳಲ್ಲಿಯಂತೆ ಯಕ್ಷಗಾನ ನಾಟಕಗಳು ಈ ಜಿಲ್ಲೆಯಲ್ಲಿಯೂ ಜನಪ್ರಿಯವಾಗಿದ್ದವು. ಗ್ರಂಥಸ್ಥವಾಗಿರದಿದ್ದ ಇಂತಹ ಕೆಲವು ನಾಟಕಗಳನ್ನು ಬರೆದಿಡುವ ಮತ್ತು ಅಭಿನಯ ಯೋಗ್ಯವಾದುವನ್ನು ಪ್ರದರ್ಶಿಸುವ ಪ್ರಥಮ ಪ್ರಯತ್ನವನ್ನು ಕೊಡಗಿನಲ್ಲಿ ಕೈಗೊಂಡವರು 'ಕೊಡಗಿನ ನಾಟಕ ಪಿತಾಮಹ'ರೆಂಬ ಹೆಗ್ಗಳಿಕೆಗೆ ಪಾತ್ರರಾದ ಮಡಿಕೇರಿಯ ವಿದ್ವಾಂಸ ಕೆ. ಶಾಮರಾವ್ (ವೆಂಕಟಾದ್ರಿ ಶಾಮರಾವ್) ಅವರು. ಇವರು ಸಾಹಿತಿಯೂ ಸಂಗೀತಜ್ಞರೂ ಆಗಿದ್ದರಲ್ಲದೆ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು. 1867ರಲ್ಲಿ 'ಕೃಷ್ಣಾರ್ಜುನರ ಕಾಳಗ', 'ಕೃಷ್ಣಾಸ್ವಾಮಿಯನ್ನು ದಾನ ಕೊಟ್ಟದ್ದು' ಮುಂತಾದ 6 ಕೃತಿಗಳನ್ನೂ 1868ರಲ್ಲಿ 'ಐರಾವತ ಪ್ರಸಂಗ'ವನ್ನೂ 1886ರಲ್ಲಿ 'ತಾಮ್ರಧ್ವಜನ ಕಾಳಗ', 'ಭೃಗುರಾಮನ ಗರ್ವಭಂಗ', ಮುಂತಾದ ಐದು ಕೃತಿಗಳನ್ನೂ ಸಂಗ್ರಹಿಸಿ, ಇವುಗಳಲ್ಲಿಯ ಸಾಹಿತ್ಯ, ರಾಗ–ತಾಳ–ಮಟ್ಟುಗಳನ್ನು ಪರಿಶೋಧಿಸಿ ಇವರು ಬರೆದಿದ್ದರು. 'ರಾವಣೋದ್ಭವ' ಎಂಬ ಯಕ್ಷಗಾನವು ಇವರ ಸ್ವಂತ ರಚನೆಯಾಗಿತ್ತು. ಷೇಕ್ಸ್‌ಪಿಯರ್‌ನ 'ಎಸ್ ಯು ಲೈಕ್ ಇಟ್' ಆಂಗ್ಲ ನಾಟಕವನ್ನೂ ಇವರು 'ಕಮಲಾವತಿ ಪರಿಣಯ'ವೆಂಬ ಹೆಸರಿನಲ್ಲಿ ಕನ್ನಡಕ್ಕೆ ಪರಿವರ್ತಿಸಿರುವರು. ಪದ್ಯ, ಜಾವಳಿ, ದೇವರನಾಮ, ಗೌರಿಹಾಡು, ಕಥೆ, ಇತ್ಯಾದಿಗಳೂ ಇವರಿಂದ ರಚಿಸಲ್ಪಟ್ಟವೆ.

ಕೊಡಗಿನ ಮಹಾನ್ ನಾಟಕ ಸಾಹಿತ್ಯ ಕರ್ತೃ ಹರದಾಸ ಅಪ್ಪಚ್ಚ ಕವಿಗಳು ವೆಂಕಟಾದ್ರಿ ಶಾಮರಾಯರಿಂದ ಸ್ಫೂರ್ತಿ ಮತ್ತು ಮಾರ್ಗದರ್ಶನ ಪಡೆದವರಲ್ಲಿ ಪ್ರಮುಖರು. ಸಾಹಿತ್ಯ, ಸಂಗೀತ ಮತ್ತು ನಾಟಕ ಕಲೆಗಳಲ್ಲಿ ಪರಿಣತಿ ಪಡೆದಿದ್ದ ಅಪ್ಪಚ್ಚ ಕವಿಗಳು ಕೊಡವ ಭಾಷೆಯಲ್ಲಿ ನಾಲ್ಕು ನಾಟಕಗಳನ್ನು ರಚಿಸಿ ಪ್ರಖ್ಯಾತರಾದರು. 1904 ರಿಂದ 1906 ರವರೆಗೆ 'ಯಯಾತಿ ರಾಜಂಡ ನಾಟಕ', 'ಸುಬ್ರಹ್ಮಣ್ಯ ನಾಟಕ' ಮತ್ತು 'ಸಾವಿತ್ರಿ ನಾಟಕ'ಗಳೂ 1917ರ ವೇಳೆಗೆ 'ಕಾವೇರಿ ಮಹಾತ್ಮೆ ನಾಟಕ'ವೂ ಇವರಿಂದ ರಚಿಸಲ್ಪಟ್ಟವು. ಈ ಕವಿಯು 1909ರಲ್ಲಿ ರಚಿಸಿದ ಕನ್ನಡ ನಾಟಕ ಕೃತಿಯೆಂದರೆ 'ಸುಕನ್ಯಾ ಪರಿಣಯ'.

**ಆಧುನಿಕ ನಾಟಕಕಾರರು :** ಪೌರಾಣಿಕ, ಚಾರಿತ್ರಿಕ ಮತ್ತು ಜಾನಪದ ವಸ್ತುಗಳನ್ನು ಆಧರಿಸಿದ ಆಧುನಿಕ ನಾಟಕ ಕೃತಿಗಳು ಈ ಜಿಲ್ಲೆಯ ಕೆಲವು ಲೇಖಕರಿಂದಲೂ ಇತರರಿಂದಲೂ ರಚಿಸಲ್ಪಟ್ಟಿವೆ. ಡಾ|| ಐ.ಮಾ. ಮುತ್ತಣ್ಣ ಅವರು ಅಪ್ಪಚ್ಚ ಕವಿಯ ಸಾವಿತ್ರಿ, ಯಯಾತಿರಾಜ ಮತ್ತು ಸುಬ್ರಹ್ಮಣ್ಯ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅವುಗಳ ಸಂಗ್ರಹವನ್ನು ಕವಿಯ ಪರಿಚಯ ಮತ್ತು ನಾಟಕದ ಪ್ರಸ್ತಾವನೆಯೊಡನೆ 'ಕೊಡಗಿನ ಹರದಾಸ ಅಪ್ಪಚ್ಚ ಕವಿಯ ಮೂರು ನಾಟಕಗಳು' ಎಂಬ ಶೀರ್ಷಿಕೆಯಲ್ಲಿ 1963ರಲ್ಲಿ ಪ್ರಕಟಿಸಿರುವರು. ಇದಲ್ಲದೆ, ಷೇಕ್ಸ್‌ಪಿಯರ್ ಮಹಾಕವಿಯ ಎರಡು ನಾಟಕಗಳನ್ನು 'ವೆನ್ನಿಸ್‌ನ ವರ್ತಕ' ಮತ್ತು 'ಜೂಲಿಯಸ್ ಸೀಸ್ಸರ್' ಎಂಬ ಹೆಸರುಗಳಲ್ಲಿ ಕನ್ನಡಕ್ಕೆ ಪರಿವರ್ತಿಸಿರುವರು. 1970ರಲ್ಲಿ ಆಚರಿಸಲಾದ ಈ ಕವಿಯ ಶತಮಾನೋತ್ಸವ ಸಂದರ್ಭದಲ್ಲಿ ನಾಲ್ಕು ನಾಟಕಗಳನ್ನೊಳಗೊಂಡ 'ಅಪ್ಪಚ್ಚ ಕವಿರ ನಾಲ್ ನಾಟಕ' ಸಂಗ್ರಹವು ಹೊರಬಂದಿತು.

ಮಡಿಕೇರಿ ತಾಲೂಕು ಬೇಂಗೂರಿನ ಬಿ.ಯಸ್. ಕೃಷ್ಣಯ್ಯ ತೋಳ್ಪಾಡಿತ್ತಾಯ ಅವರ 'ಶ್ರೀ ಕಾವೇರಿ ವಿಜಯ', ವೀರರಾಜಪೇಟೆ ತಾಲೂಕು ಹಾಲುಗುಂದದ ತೇಲಪಂಡ ಎಂ. ಕಾರ್ಯಪ್ಪ ಅವರ 'ವೀರರಾಜೇಂದ್ರ ವಿಜಯ', 'ಕಾವೇರಿ ಕಥೆ', ಮತ್ತು 'ರತ್ನಪುರದ ರತ್ನಶೆಟ್ಟಿ', ವಿ.ಎಸ್. ರಾಮಕೃಷ್ಣ ಅವರ 'ಅಭಿನಯ ಯೋಗ್ಯ ನಾಟಕಗಳು', ಡಾ|| ಕೆ. ಕುಶಾಲಪ್ಪಗೌಡ ಅವರ 'ಕರ್ಣಪ್ರಭ' ಮತ್ತು 'ಗರ್ವಭಂಗ', ಡಾ|| ಡಿ.ಬಿ. ರಾಮಚಂದ್ರಾಚಾರ್ ಅವರ 'ಚಿಕ್ಕವೀರರಾಜೇಂದ್ರ', 'ಅಸ್ತಮಾನ' ಮತ್ತು 'ಕಣ್ತೆರೆದರೆ ಸತ್ಯ', ಎಂ.ಜಿ. ನಾಗರಾಜ್ ಅವರ ಹುತ್ತರಿಹಬ್ಬ-ಕೋಲಾಟ ಕುರಿತ ರೂಪಕ, ಮೂರ್ನಾಡಿನ ಟಿ.ಎನ್. ಕಾರ್ಯಪ್ಪ ಅವರ 'ವೀರರಾಜೇಂದ್ರ ವಿಜಯ', 'ಸಾಮ್ರಾಟ್ ಅಶೋಕ', ಇತ್ಯಾದಿ, ಜೆಫ್ರಿ ಚೆಂಗಪ್ಪ ಅವರ 'ವರದಕ್ಷಿಣೆ ಬೇಕೆ ?', 'ಗುಗ್ಗುನನ್ಮಗ', 'ಪೆಪ್ಪ ವರರು', 'ಮಾಡರ್ನ್ ಲೇಡಿ'—ಇವೇ ಮೊದಲಾದ 12ಕ್ಕೂ ಹೆಚ್ಚು ನಾಟಕಗಳು, ಮಡಿಕೇರಿಯ ಬಿ.ಎ. ಹಸನಬ್ಬ ಅವರ 'ಕಿತ್ತೂರುರಾಣಿ ಚೆನ್ನಮ್ಮ' 'ಭಗತ್‌ಸಿಂಗ್', ಇತ್ಯಾದಿ, ಕೋಣಗೇರಿಯ ಇಟ್ಟೀರ ಕೆ. ಬಿದ್ದಪ್ಪ ಅವರ 'ಟಿಪ್ಪುಸುಲ್ತಾನ್', 'ಅಪ್ಪಚ್ಚೀರ ಮಂದಣ್ಣ', 'ಭಕ್ತ ಪ್ರಹ್ಲಾದ', 'ಮೀಸೆ ಮುತ್ತಣ್ಣ' ಮೊದಲಾದ ಏಕಪಾತ್ರಾಭಿನಯದ ರಚನೆಗಳು ಹಾಗೂ 'ಅಂದ್ ಶೋಕಿ ಇಂದ್' ಮತ್ತು 'ಜಮ್ಮ' ಎಂಬ ಕೊಡವ ಭಾಷಾ ನಾಟಕಗಳು—ಇವೇ ಮೊದಲಾದವು ಇಲ್ಲಿ ಉಲ್ಲೇಖನೀಯವಾದವು. ಕರ್ತಮಾಡ ದೇವು, ಮನಿಯಪಂಡ ಪ್ರಭು ಅವರುಗಳ 'ಮುಳ್ಳಚಿಕ್ಕ್‌ನ ಪೊಡಿಯ', 'ಗೂಮಗೂಡ್', ಡಿ.ಎಂ. ಸುರೇಶ್ ಅವರ 'ಕಳ್ಳಬೋಟೆ', ಸರೋಜಿನಿ ಅವರ 'ನಂಗ ಇಂದ್ ಎಲ್ಲಿ ಉಂಡ್ ?'—ಇವೇ ಮೊದಲಾದ ಕೊಡವ ನಾಟಕಗಳನ್ನೂ ಇಲ್ಲಿ ಪ್ರಸ್ತಾಪಿಸಬಹುದು. ಸೋಮವಾರಪೇಟೆಯ ಹೇಮಲತಾ ಹೆಗ್ಗಡೆ ಅವರು 'ಭಕ್ತಮೀರಾ', 'ರಾಮರಾಜ್ಯ' ಮತ್ತು ಕರ್ಣನನ್ನು ಕುರಿತ ನಾಟಕಗಳನ್ನು ರಚಿಸಿರುವರಲ್ಲದೆ, ಅವರ 'ಕಾವೇರಿ' ನಾಟಕವು ವೀರರಾಜಪೇಟೆಯಲ್ಲಿ ಪ್ರದರ್ಶನ ಕಂಡಿದೆ. ಹಾಗೆಯೇ, ಕೋರಿಕ್ಕಾರು ಕೇಶವಭಟ್ಟ ಅವರು ಬೈಬಲ್‌ನಲ್ಲಿ ಬರುವ ಸಂದರ್ಭವೊಂದನ್ನು 'ದುಂದುಗಾರ ಮಗ' ಎಂಬ ಹೆಸರಿನಲ್ಲಿ ನಾಟಕಕ್ಕೆ ಪರಿವರ್ತಿಸಿದ್ದು, 1952ರಲ್ಲಿ ಇದನ್ನು ಅಭಿನಯಿಸಲಾಯಿತು.

ಈ ನಾಟಕ ಕೃತಿಗಳೇ ಅಲ್ಲದೆ, ಕೊಡಗಿನ ರಂಗ ಚಟುವಟಿಕೆಗಳನ್ನು ಕುರಿತ ಹಲವಾರು ಬರಹಗಳೂ ಇವೆ. ಕೆ. ಪಿ. ಮುತ್ತಣ್ಣ ಅವರು ತಮ್ಮ 'ಜಗತ್ತಿಗೊಂದೇ ಕೊಡಗು' ಗ್ರಂಥದಲ್ಲಿ ಕೊಡಗಿನಲ್ಲಿ ರಂಗಭೂಮಿ ಉಗಮ ಕುರಿತು ಸ್ವಲ್ಪ ಮಟ್ಟಿಗೆ ವಿವೇಚಿಸಿದ್ದಾರೆ. ಓಡ್ಲಮನೆ ಆತ್ಮಾರಾಮಶಾಸ್ತ್ರಿ ಅವರ 'ನಾಟಕ ಕಲೆ' ಪುಸ್ತಕವೂ ಹೊರಬಂದಿದೆ. ವ್ಯೆ. ಕೇ. ಅನಂತಪದ್ಮನಾಭರಾವ್ ಅವರ 'ಕೊಡಗಿನಲ್ಲಿ ಕಲೆ, ಸಾಹಿತ್ಯ ಮತ್ತು ಇತರ ಚಟುವಟಿಕೆಗಳು', ಜಿ. ರಾಜಗೋಪಾಲರಾವ್ ಮತ್ತು ಕೆ. ಬಿ. ಡಾಲ್ ಅವರ 'ಕೊಡಗು ನಾಟಕರಂಗ',1 ಬಿ. ಎ. ಷಂಶುದ್ದೀನ್ ಅವರ 'ಕೊಡಗಿನಲ್ಲಿ ನಾಟಕ ಕಲೆ',2 ಇತ್ಯಾದಿ ಲೇಖನಗಳೂ ಎಂ. ಜಿ. ನಾಗರಾಜ್ ಅವರ ನಾಟಕ ಸಮೀಕ್ಷೆಗಳೂ ಪತ್ರಕರ್ತ ಸುಚೇತನ ಸ್ವರೂಪ ಅವರ ಕೊಡಗಿನ ರಂಗಮಂದಿರಗಳ ಸಮಸ್ಯೆ ಕುರಿತ ಪತ್ರಿಕಾ ಬರಹ, ಇತ್ಯಾದಿಗಳೂ ಇಲ್ಲಿ ಗಮನಾರ್ಹವಾದುವು.

**ವೃತ್ತಿ ಮತ್ತು ಹವ್ಯಾಸಿ ರಂಗ ಚಟುವಟಿಕೆಗಳು :** ರಂಗ ಸಜ್ಜಿಕೆ, ನಾಟಕ ಪ್ರದರ್ಶನಕ್ಕೆ ಅಗತ್ಯವಿರುವ ವೇಷ-ಭೂಷಣ, ಪರದೆ, ಇತ್ಯಾದಿ ಸಾಧನಗಳು, ನುರಿತ ಕಲಾವಿದರು—ಇಂತಹ ಕೊರತೆಗಳಿದ್ದಾಗ್ಗೂ ಕೊಡಗು ಮತ್ತು ಇತರೆಡೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಲು ಯತ್ನಿಸಿದವರಲ್ಲಿ ವೆಂಕಟಾದ್ರಿ ಶಾಮ

1. ಸಾಹಿತ್ಯ ಕಾವೇರಿ — ಸ್ಮರಣ ಸಂಚಿಕೆ, ಪು. 124–25
2. ಕನ್ನಡ ಕಾವೇರಿ — ಸ್ಮರಣ ಸಂಚಿಕೆ, ಪು. 112–13

ರಾಯರೇ ಮುಖ್ಯರು. ಇವರು ಸ್ಥಾಪಿಸಿದ ನಾಟಕ ಸಂಸ್ಥೆಯ ಹೆಸರು 'ರತ್ನಾವಳಿ ನಾಟಕ ಕಂಪೆನಿ'. ನಾಟಕದ ಪಾತ್ರಗಳಿಗೆ ಬೇಕಾಗುವಂತಹ ಎಲ್ಲಾ ವಸ್ತ್ರಭೂಷಣಗಳನ್ನೂ ಇವರು ತಾವೇ ಸಿದ್ಧಪಡಿಸಿ ಇಟ್ಟುಕೊಂಡಿದ್ದರಲ್ಲದೆ, ತಮ್ಮ ಗಡಸು ಶಾರೀರದ ವೈಶಿಷ್ಟ್ಯವನ್ನು ಖಳನಾಯಕ, ರಾಕ್ಷಸ ಮೊದಲಾದ ರೌದ್ರ ಪಾತ್ರಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಇವರ ಸಂಸ್ಥೆಯಲ್ಲಿದ್ದು ಇವರಿಂದ ಪ್ರೋತ್ಸಾಹ ಹೊಂದಿದ ಹಲವಾರು ರಂಗ ಕಲಾವಿದರು ಮತ್ತು ವಾದ್ಯ ಕಲಾವಿದರುಗಳಲ್ಲಿ ಅಪ್ಪನೆರವಂಡ ಅಪ್ಪಚ್ಚಕವಿ ಮತ್ತು ಪಿಟೀಲು ವಾದಕ ಬೆಟ್ಟದಪುರದ ಸುಬ್ಬಣ್ಣ ಅವರುಗಳು ಮುಖ್ಯರಾದವರು. ವೆಂಕಟಾದ್ರಿ ಶಾಮರಾಯರು 1918ರಲ್ಲಿ ಕಾಲವಾಗಲು ಅವರ ರತ್ನಾವಳಿ ನಾಟಕ ಕಂಪೆನಿಯೂ ಮುಚ್ಚಿಹೋಯಿತು. ಆದರೆ ಈ ಕಂಪೆನಿಯಲ್ಲಿದ್ದ ಕೆಲವು ಕಲಾವಿದರು ಆ ನಂತರ ಅಮೆಚೂರ್ ನಾಟಕ ಸಂಘವನ್ನು ಆರಂಭಿಸಿದರಲ್ಲದೆ, ದತ್ತಾತ್ರೇಯ ಜೋಶಿ (ದತ್ತುರಾಯರು), ವೆಂಕಟೇಶ ಅಯ್ಯರ್, ಕೆ. ನರಸಿಂಹ ಮೂರ್ತಿ, ಸೌತೆಕಲ್ ಸೀತಾರಾಮಯ್ಯ, ಬಿಟ್ಟಿಯಂಡ ಮುತ್ತಣ್ಣ, ಎಂ. ವಿ. ರಾಮರಾವ್, ರಂಗೈಂಗಾರ್, ಕಾಶಿ ಕೃಷ್ಣರಾವ್ ಮೊದಲಾದವರು ಈ ಸಂಘದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು.

ಸ್ವಯಂ ನಟರಾಗಿದ್ದು, ವೆಂಕಟಾದ್ರಿ ಶಾಮರಾಯರ ಕಂಪೆನಿಯಲ್ಲಿ ಪಾತ್ರವಹಿಸುತ್ತಿದ್ದ ಅಪ್ಪನೆರವಂಡ ಅಪ್ಪಚ್ಚ ಕವಿಗಳು ಕೊಡಗಿನ ರಂಗ ಚಟುವಟಿಕೆಗಳಲ್ಲಿ ಅಪಾರ ಆಸಕ್ತಿ ವಹಿಸಿದ ಮತ್ತೊರ್ವ ಗಮನಾರ್ಹ ವ್ಯಕ್ತಿಯೆನ್ನಬಹುದು. ಇವರು ಕೊಡಗನ್ನು ಬಿಟ್ಟು ಹೋಗುತ್ತಿದ್ದ ನಾಟಕ ಮಂಡಳಿಯೊಂದರಿಂದ ರಂಗಸ್ಥಳ ಸಾಮಗ್ರಿಗಳನ್ನು ತಮ್ಮ ಸ್ನೇಹಿತರು ಮತ್ತು ಒಬ್ಬಿಬ್ಬರು ಐಶ್ವರ್ಯವಂತರ ಸಹಾಯದಿಂದ ಕ್ರಯಕ್ಕೆ ಪಡೆದು, ತಮ್ಮ ಏಳುಜನ ಮಿತ್ರರೊಡಗೂಡಿ 'ಚಂದ್ರಹಾಸ' (ರಾಮರಾವ್ ಕೃತ) ಎಂಬ ನಾಟಕವನ್ನು ಅಭ್ಯಸಿಸಿ ನಟಿಸಿದರು.* 1908ರಲ್ಲಿ ಇವರು ಸ್ಥಾಪಿಸಿದ ಕೊಡಗು ನಾಟಕ ಕಂಪನಿಯ ವತಿಯಿಂದ ಕೊಡಗಿನ ಮುಖ್ಯ ಕೇಂದ್ರಗಳಲ್ಲಿ ಕೊಡವ ಭಾಷಾ ನಾಟಕಗಳನ್ನು ಪ್ರದರ್ಶಿಸಿದರು. ಸುಮಾರು 22 ಮಂದಿ ನಟ–ನಟಿಯರು ಇವರ ಕಂಪೆನಿಯಲ್ಲಿ ಪಾತ್ರವಹಿಸುತ್ತಿದ್ದು, 1909ರಲ್ಲಿ ಈ ಕಂಪೆನಿಯು ಮುಚ್ಚಿಹೋಯಿತು. ಅದೇ ವರುಷದಲ್ಲಿಯೇ ಅಪ್ಪಚ್ಚ ಕವಿಗಳು ಇನ್ನೊಂದು ಕಂಪೆನಿಯನ್ನು ಆರಂಭಿಸಿದರಲ್ಲದೆ, ಕೇವಲ ಕನ್ನಡ ನಾಟಕಗಳನ್ನು ಮಾತ್ರ ಪ್ರದರ್ಶಿಸಲಾರಂಭಿಸಿದರು. ಮೈಸೂರು ಪ್ರಾಂತ್ಯದಿಂದ ನಟರುಗಳನ್ನು ಕರೆಸಿಕೊಂಡು ಕೊಡಗಿನಲ್ಲಿ ಮಾತ್ರವಲ್ಲದೆ, ಹುಣಸೂರು, ಕಂಡಲಾವು ಮತ್ತು ಪಿರಿಯಾಪಟ್ಟಣಗಳಲ್ಲೂ ತಾವೇ ಸ್ವತಃ ರಚಿಸಿದ 'ವಿರಾಟಪರ್ವ', 'ಸುಕನ್ಯಾ ಪರಿಣಯ', ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿದರು. 1910ರಲ್ಲಿ ಈ ಕಂಪೆನಿಯೂ ನಿಂತುಹೋಯಿತು. ಇವರು ತಮ್ಮ ಅನೇಕ ನಾಟಕಗಳಲ್ಲಿ ರಾಜನ ಪಾತ್ರವನ್ನೇ ನಿರ್ವಹಿಸಲು ಇಚ್ಛಿಸುತ್ತಿದ್ದರು. ಡಾ|| ಐ. ಮಾ. ಮುತ್ತಣ್ಣ ಅವರು 1943ರಲ್ಲಿ ಮಡಿಕೇರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ 'ಯಯಾತಿರಾಜ' ನಾಟಕವನ್ನು ಮತ್ತು 1946ರಲ್ಲಿ ವಿದ್ಯಾರ್ಥಿಗಳಿಂದಲೇ 'ಸುಬ್ರಹ್ಮಣ್ಯ ನಾಟಕ'ವನ್ನು ಕಲಿಸಿ ಕೊಡಗಿನ ಹಲವೆಡೆ ಪ್ರದರ್ಶಿಸಿದ್ದರು. ಕರ್ನಾಟಕದ ಗಣ್ಯ ವೃತ್ತಿ ನಾಟಕ ಸಂಘಗಳೆಲ್ಲ ಕೊಡಗಿನಲ್ಲಿ ಪ್ರದರ್ಶನ ನಡೆಸಿದ್ದು, ಖ್ಯಾತ ರಂಗ ನಟ ಕೆ. ಹಿರಣ್ಣಯ್ಯ ಅವರು ಮಡಿಕೇರಿಯಲ್ಲಿ ನಾಟಕ ಪ್ರದರ್ಶನದ ಕಾಲದಲ್ಲೇ ದಿವಂಗತರಾದುದು ಉಲ್ಲೇಖನೀಯ ಘಟನೆ.

ಮಡಿಕೇರಿಯಲ್ಲಿ 1959ರಲ್ಲಿ ಸ್ಥಾಪನೆಗೊಂಡ ಜಿ. ಎಸ್. ಎ. ಈಶ್ ಅವರ ಈಶ್ ಮಿತ್ರಮಂಡಳಿಯು ಕೊಡಗಿನಲ್ಲಿ ರಂಗಚಟುವಟಿಕೆಗಳು ಅಧಿಕ ಉತ್ಸಾಹದಿಂದ ಮುಂದುವರಿಯಲು ಕಾರಣವೆನಿಸಿತು. ಆಧುನಿಕ ವಸ್ತುವನ್ನಾಧರಿಸಿದ ಸುಧಾರಿತ ನಾಟಕಗಳು ರಂಗಮಂಚವನ್ನೇರಿದವು. ಅಲ್ಲದೆ, ಪೌರಾಣಿಕ ಮತ್ತು ಚಾರಿತ್ರಿಕ ನಾಟಕಗಳೂ ಹೊಸ ಉತ್ಸಾಹದಿಂದ ಪ್ರದರ್ಶನಗೊಳ್ಳತೊಡಗಿದವು. ಈಶ್ ಅವರು ಕೆ. ಬಿ. ಡಾಲ್, ನಾಗಪ್ಪ, ಸತ್ಯಮೂರ್ತಿ, ಡಿ. ಎಸ್. ಅರವಿಂದ, ಸತ್ಯ, ವರ್ಣಾಲಂಕಾರಪಟು ಹರಿದಾಸಭಟ್ ಮೊದಲಾದ ಕಲಾವಿದರ ಸಹಕಾರದೊಡನೆ ಕೊಡಗಿನಲ್ಲೆಲ್ಲ 'ದೇವದಾಸಿ', 'ಎಚ್ಚಮನಾಯಕ', 'ಪಂಗನಾಮ', 'ಬೇಡರ ಕಣ್ಣಪ್ಪ', 'ಸತ್ಯಹರಿಶ್ಚಂದ್ರ' ಮತ್ತು 'ಸಾಹುಕಾರ' ನಾಟಕಗಳನ್ನು ಪ್ರದರ್ಶಿಸಿ, ಜನರಲ್ಲಿ ನಾಟಕದ ಬಗೆಗೆ ಒಲವು ಮೂಡಿಸಲು ಪ್ರಯತ್ನಿಸಿದರು. ಈಶ್ ಮಿತ್ರಮಂಡಲಿಯು ಮೈಸೂರಿನಲ್ಲಿಯೂ ನಾಟಕಗಳನ್ನು ಪ್ರದರ್ಶಿಸಿತಲ್ಲದೆ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಸಮ್ಮುಖದಲ್ಲಿ 'ದೇವದಾಸಿ' ನಾಟಕವನ್ನು ಅಭಿನಯಿಸಿತು. ಬಿ.ಎ. ಹಸನಬ್ಬ, ಕೆ. ಬಿ. ರಾಘವಯ್ಯ ಮೊದಲಾದವರೂ ಈ ಮಂಡಳಿಯ ನಾಟಕಗಳಲ್ಲಿ ಪಾತ್ರವಹಿಸಿದರು.

* ಐ. ಮಾ. ಮುತ್ತಣ್ಣ : ಕೊಡಗಿನ ಹರದಾಸ ಅಪ್ಪಚ್ಚಕವಿಯ ಮೂರು ನಾಟಕಗಳು, ಪು. 8

ವೀರರಾಜಪೇಟೆಯಲ್ಲಿ 1954ರಲ್ಲಿ ಮೈಕೇಲ್ ಡಿಸೋಜಾ ಅವರಿಂದ ಆರಂಭಿಸಲ್ಪಟ್ಟ ಶ್ರೀ ಗಜಾನನ ಮಿತ್ರಮಂಡಳಿಯು ಹಲವಾರು ನಾಟಕಗಳನ್ನು ಪ್ರದರ್ಶಿಸಿತಲ್ಲದೆ, ಇವರ ತಂದೆ ಜಾಕೋಬ್ ಡಿಸೋಜಾ ಅವರೂ ಸೇರಿದಂತೆ ದೇವರಾಜು ನಾಯುಡು, ದತ್ತಾತ್ರೇಯ, ಡಿ.ಎನ್. ಗಣೇಶ್, ಗೋಕುಲ್, ಶಿವರಾಂ, ಭಾಸ್ಕರ ಪೈ, ಪ್ರಕಾಶ್ ಮೊದಲಾದವರು ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಇವರೇ 1960ರಲ್ಲಿ ಆರಂಭಿಸಿದ ವೀರರಾಜ ಕಲಾವೃಂದವು ಸುಮಾರು ಹತ್ತು ವರುಷಗಳ ಕಾಲ ಕೊಡಗಿನ ನಾಟಕ ಕ್ಷೇತ್ರಕ್ಕೆ ತನ್ನ ಸೇವೆಯನ್ನು ಸಲ್ಲಿಸಿತು. ಈ ಸಂಸ್ಥೆಯು ಅಭಿನಯಿಸಿದ ಸುಮಾರು 13-14 ನಾಟಕಗಳಲ್ಲಿ 'ವಿಷಜ್ವಾಲೆ', 'ರಣದುಂದುಭಿ', 'ಜೈಸೀತಾರಾಂ', ಇತ್ಯಾದಿಗಳು ಜನಪ್ರಿಯವಾಗಿದ್ದುವು.

ಸಾಹಿತಿ ಮತ್ತು ಪತ್ರಕರ್ತ ಬಿ.ಎಸ್. ಗೋಪಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ 1961ರಲ್ಲಿ ಆರಂಭಗೊಂಡ ಯುವಜನ ಕಲಾವೃಂದವು ಈ ಜಿಲ್ಲೆಯಲ್ಲಿ ಹಲವಾರು ಕಲಾವಿದರನ್ನು ಹುಟ್ಟುಹಾಕಿದ ಕೀರ್ತಿಗೆ ಪಾತ್ರವೆನಿಸಿದೆ. 'ವೇಣಿಸಂಹಾರ', 'ಟಿಪ್ಪುಸುಲ್ತಾನ್', 'ನಿರ್ದೋಷಿ', 'ಗೃಹಲಕ್ಷ್ಮೀ', 'ಶಾಂತಿನಿವಾಸ', 'ಸಮಯಕ್ಕೊಂದ್ಸುಳ್ಳು', 'ಅಣ್ಣ ತಮ್ಮ', 'ಹೃದಯದೇಗುಲ' ಇವೇ ಮೊದಲಾದ ಕೆಲವು ನಾಟಕಗಳನ್ನು ಪ್ರದರ್ಶಿಸುವಲ್ಲಿ ಕೊಡಗಿನ ಪ್ರತಿಭಾನ್ವಿತರಲ್ಲಿ ಟಿ.ಎ. ಮಮುರಿಸೆಟ್ಟಿ, ಕೆ. ನಾರಾಯಣ, ಗುರುಮಲ್ಲಪ್ಪ, ಕೆ.ಬಿ. ಡಾಲ್, ಬಿ.ಬಿ. ಚೂಡಾಧರ್, ಯನ್.ಯಂ. ಅಪ್ಪಣ್ಣ, ಬಿ.ಟಿ. ಬೋಪಯ್ಯ, ಬಿ.ಎ. ಹಸನಬ್ಬ, ಕೆ. ಶಿವಪ್ಪ, ಗೋವಿಂದ, ನಾರಾಯಣ, ಎಸ್.ಎಮ್. ಷರೀಫ್, ಕುಮಾರಿ ಎಸ್. ರಾಧ, ದೇವಮ್ಮಾಜಿ, ಸೀತಮ್ಮ ಮೊದಲಾದವರನ್ನು ನಟನೆಗೆ ತೊಡಗಿಸಿಕೊಂಡಿತು. 1963ರಲ್ಲಿ ಗುರುಮಲ್ಲಪ್ಪ ಅವರ ನಿರ್ದೇಶನದಲ್ಲಿ ಸುವರ್ಣ ಕಲಾ ಮಂಡಲಿಯು ಅಸ್ತಿತ್ವಕ್ಕೆ ಬರುವುದರೊಡನೆ 'ದತ್ತುಪುತ್ರ', 'ಟಿಪ್ಪುಸುಲ್ತಾನ್' ಮತ್ತಿತರ ನಾಟಕಗಳನ್ನು ಪ್ರದರ್ಶಿಸಿತು. ಇವಲ್ಲದೆ, ಲೋಕೋಪಯೋಗಿ ಇಲಾಖೆಯ ಆಶ್ರಯದಲ್ಲಿ 1965ರಲ್ಲಿ ಜನ್ಮತಳೆದ ಲಲಿತಕಲಾ ಸಂಘವು ನಾಟಕ ಪ್ರದರ್ಶನಗಳತ್ತ ಗಮನ ಹರಿಸಿತು. ಕಲಾವಿದರಾದ ಎ. ಕೃಷ್ಣಪ್ಪ, ಹೆಚ್.ಸಿ. ವೆಂಕಟೇಶಯ್ಯ, ಡಿ.ಆರ್. ಕೃಷ್ಣಮೂರ್ತಿ, ಎಸ್.ಜಿ. ಶಿವಮೂರ್ತಿ, ಸುಬ್ಬರಾವ್ ಹಾಗೂ ನಿರ್ದೇಶಕ ರಾಜಗೋಪಾಲ್ ಅವರುಗಳ ನೇತೃತ್ವದಲ್ಲಿ 'ರಾಣಾ ಅಮರಸಿಂಹ', 'ಸ್ವಾಮಿನಿಷ್ಠ ಎಚ್ಚಮನಾಯಕ', 'ವಿಜಯದುಂದುಭಿ', 'ರಾಣಾ ಪ್ರತಾಪಸಿಂಹ' ಮೊದಲಾದ ಚಾರಿತ್ರಿಕ ಮತ್ತು ಸಾಮಾಜಿಕ ನಾಟಕಗಳು ಅಭಿನಯಿಸಲ್ಪಟ್ಟವು. ಈ ಸಂಘವು 1972ರಲ್ಲಿ ಮಡಿಕೇರಿಯ ಇತರ ಕಲಾವಿದರ ಸಹಕಾರದಿಂದ 'ನಿರ್ದೋಷಿ' ನಾಟಕವನ್ನು ಪ್ರದರ್ಶಿಸಿ ರಾಷ್ಟ್ರೀಯ ರಕ್ಷಣಾನಿಧಿಗೆ ತನ್ನ ಕಾಣಿಕೆ ಸಲ್ಲಿಸಿತು.

ರಂಗಭೂಮಿ ಮತ್ತು ಚಲನಚಿತ್ರ ಕಲಾವಿದ ಜೆಫ್ರಿ ಚೆಂಗಪ್ಪ ಅವರು 1972ರಲ್ಲಿ ವೀರರಾಜಪೇಟೆಯಲ್ಲಿ ಆರಂಭಿಸಿದ ಕಲಾತಂಡವೇ 'ತ್ರಿ ಎಸ್' (ಸೋಶಿಯಲ್ ಸರ್ವಿಸ್ ಸ್ಕೀಂ). ಇದು ಸೇವಾವೃಷ್ಟಿಯಿಂದ ಆರಂಭಗೊಂಡುದು. ಇವರು ತಾವೇ ಬರೆದ ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶಿಸುತ್ತಿದ್ದು, ಇದರ ಉತ್ಪತ್ತಿಯನ್ನು ಬಡ ವಿದ್ಯಾರ್ಥಿಗಳು ಮತ್ತು ಜನರ ಸಹಾಯಕ್ಕೆ ಬಳಸಲಾಗುತ್ತಿತ್ತು. ವಾದ್ಯಗೋಷ್ಠಿಯ ಕಾರ್ಯಕ್ರಮವನ್ನೂ ಈ ತಂಡವು ಏರ್ಪಡಿಸಿದೆ. ಸುಮಾರು ಎಂಟು ನಾಟಕಗಳನ್ನು ಪ್ರದರ್ಶಿಸಿರುವ ಈ ತಂಡದ ನಟರೆಂದರೆ ಶಿವಶಂಕರ್, ಮಂಜುನಾಥ ಕಿಣಿ, ಪುಟ್ಟಸ್ವಾಮಿ, ಪಾಲ್ ಸಿಕೇರಾ, ಎಂ. ಬಿ. ಮಾಚಯ್ಯ ಮೊದಲಾದವರು. 1977ರಲ್ಲಿ 'ತ್ರಿ ಎಸ್' ತಂಡದ ಚಟುವಟಿಕೆಗಳು ನಿಂತುಹೋದುದರಿಂದ ಜೆಫ್ರಿ ಚೆಂಗಪ್ಪ ಅವರು 1986ರಲ್ಲಿ ಅಕ್ಷಯ ಕಲಾ ಬಳಗವನ್ನು ವೀರರಾಜಪೇಟೆಯಲ್ಲಿಯೇ ಸ್ಥಾಪಿಸಿದರು. ಈ ಸಂಸ್ಥೆಯಿಂದ ಪ್ರದರ್ಶಿತವಾದ ಇವರ ಸ್ವಂತ ರಚನೆಯ ನಾಟಕಗಳಲ್ಲಿ ಚಂದ್ರಶೇಖರ್, ರಾಬರ್ಟ್, ಬಾಲಕೃಷ್ಣ, ಸುರೇಶ್, ಪಾಯಸ್ ಸಲ್ದಾನಾ, ಉಮ್ಮರ್ ಮೊದಲಾದವರು ಪಾತ್ರವಹಿಸಿರುವರು. ಈ ಬಳಗವು ನಾಟಕ ಪ್ರದರ್ಶನ ಕಾರ್ಯವನ್ನು ಹುರುಪಿನಿಂದ ಮುಂದುವರಿಸಿಕೊಂಡು ಬರುತ್ತಿದೆ.

ವೀರರಾಜಪೇಟೆಯ ಶ್ರೀ ವಿಘ್ನೇಶ್ವರ ಕೃಪಾಪೋಷಿತ ನಾಟಕ ಮಿತ್ರಮಂಡಳಿಯು 1982ರಲ್ಲಿ ಸ್ಥಾಪಿಸಲ್ಪಟ್ಟಿದ್ದು, ಆರ್. ರಾಮಕೃಷ್ಣ ಪೈ ಅವರ ಅಧ್ಯಕ್ಷತೆಯಲ್ಲಿ ಪೌರಾಣಿಕ ಕಥಾಪ್ರಸಂಗಗಳಾದ 'ಶನಿಮಹಾತ್ಮೆ', 'ಅಶ್ವಮೇಧಯಾಗ', 'ಗಯಚರಿತ್ರೆ', 'ಸಂಪೂರ್ಣರಾಮಾಯಣ', 'ಸತ್ಯವ್ರತ', ಇತ್ಯಾದಿಗಳನ್ನು ಪ್ರದರ್ಶಿಸಿದೆ. ಕೆ. ಎಂ. ಬೋಪಯ್ಯ ಅವರು ಅಧ್ಯಕ್ಷರಾಗಿರುವ ಮಡಿಕೇರಿಯ ಶ್ರೀ ಕಾವೇರಿ ಕೃಪಾಪೋಷಿತ ನಾಟಕ ಮಂಡಲಿಯು ಸುಮಾರು ಆರು ವರುಷಗಳಿಂದ ವರುಷಕ್ಕೊಂದು ನಾಟಕವನ್ನು ಪ್ರದರ್ಶಿಸುತ್ತಾ ಬಂದಿದೆ. ಗಣಗೂರಿನ ಶ್ರೀ ರಾಜರಾಜೇಶ್ವರಿ ಶ್ರೀ ಮಲ್ಲೇಶ್ವರ ಕೃಪಾಪೋಷಿತ ಯಕ್ಷಗಾನ ನಾಟಕ ಸಭಾ ಕೂಡ ಸಕ್ರಿಯವಾಗಿದೆ. 1989ರಲ್ಲಿ ಪ್ರಾರಂಭಿಸಲ್ಪಟ್ಟ ಮದೆನಾಡಿನ ಮದೆಮಹೇಶ್ವರ ಯಕ್ಷಗಾನ ಕಲಾವೃಂದವೂ ಗಮನೀಯವಾದುದು.

ಹವ್ಯಾಸಿ ಕಲೆಯನ್ನು ಕುರಿತು ಕೊಡಗಿನಲ್ಲಿ ಪ್ರಚಾರ ಕೈಗೊಳ್ಳುವ ದಿಸೆಯಲ್ಲಿ ಕ್ರಿಯಾಶೀಲವಾಗಿರುವ ಗೋಣಿಕೊಪ್ಪಲಿನ ಸ್ಪಂದನ ಸಂಘದ ಸಾಧನೆಯು ಗಮನಾರ್ಹವಾದುದು. ಈ ಸಂಘದ ಸ್ಥಾಪಕ ಅಧ್ಯಕ್ಷರು ಡಾ|| ಡಿ. ಬಿ. ರಾಮಚಂದ್ರಾಚಾರ್ ಅವರು. ಈ ನಾಟಕ ಸಂಘದ (1979) ಚಟುವಟಿಕೆಗಳಲ್ಲಿ, 1980ರಲ್ಲಿ ರಾಜ್ಯ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಏರ್ಪಡಿಸಿದ ಐದು ದಿನಗಳ ನಾಟಕೋತ್ಸವ, 1981ರಲ್ಲಿ ಏರ್ಪಡಿಸಿದ ಹಾಗೂ ಎಂಟು ದಿನಗಳ ಕಾಲ ನಡೆದ ರಾಜ್ಯಮಟ್ಟದ ನಾಟಕಸ್ಪರ್ಧೆ, ಅದೇ ವರುಷ ಮೈಸೂರಿನ 'ಸಮತಂತೋ' ತಂಡದ ಸಹಯೋಗದೊಡನೆ ನಡೆದ ಐದು ದಿನಗಳ ನಾಟಕೋತ್ಸವ 'ರಂಗಸ್ಮೃತಿ', 1982ರಲ್ಲಿ ಗೋಣಿಕೊಪ್ಪಲಿನ ಪುರಭವನದಲ್ಲಿ ಏರ್ಪಡಿಸಿದ ಕೊಡಗು ಜಿಲ್ಲಾ ಜಾನಪದ ಕಲಾಮೇಳ ಮತ್ತು ನಾಟಕ ಕಾರ್ಯಾಗಾರ, 1984ರಲ್ಲಿ ನಡೆಸಿದ ಯಕ್ಷಗಾನ ತರಬೇತಿ ಶಿಬಿರ ಹಾಗೂ 1985ರಲ್ಲಿ ಹೆಗ್ಗೋಡಿನ 'ನೀನಾಸಂ' ಜನಸ್ಪಂದನದ ಸಹಯೋಗದೊಡನೆ ಗೋಣಿಕೊಪ್ಪಲಿನಲ್ಲಿ ಇಕ್ಬಾಲ್ ಅಹಮದ್ ಅವರ ನಿರ್ದೇಶನದಲ್ಲಿ ನಡೆಸಿದ ಆರು ವಾರಗಳ ರಂಗ ತರಬೇತಿ ಶಿಬಿರಗಳು ಗಮನಾರ್ಹವಾದವು. 1980 ರಿಂದ 1985ರವರೆಗೆ ಈ ಸಂಘವು ತಯಾರಿಸಿದ ನಾಟಕ ಪ್ರದರ್ಶನಗಳ ಒಟ್ಟು ಸಂಖ್ಯೆ 40; ಈ ಸಂಘದ ಆಶ್ರಯದಲ್ಲಿ ಬೇರೆಯವರ ನಾಟಕಗಳ ಒಟ್ಟು ಪ್ರದರ್ಶನಗಳು 22 ಹಾಗೂ ಏರ್ಪಡಿಸಲಾದ ಒಟ್ಟು ಗೋಷ್ಠಿಗಳು 10. ಈ ಸಂಘವು ಕೊಡಗಿನ ಗೋಣಿಕೊಪ್ಪಲು, ಮಡಿಕೇರಿ, ವೀರರಾಜಪೇಟೆ, ಶ್ರೀಮಂಗಲ, ಹುದಿಕೇರಿ, ಸಿದ್ದಾಪುರ ಮತ್ತು ಕುಶಾಲನಗರಗಳಲ್ಲಿ ತನ್ನ ನಾಟಕ ಪ್ರದರ್ಶನಗಳನ್ನು ನೀಡಿದ್ದು, ಕೆ. ಆರ್. ಕೃಷ್ಣಯ್ಯ, ಎಸ್. ಆರ್. ರಮೇಶ್, ಚಂದ್ರಹಾಸ್, ಡಾ|| ಡಿ. ಬಿ. ರಾಮಚಂದ್ರಾಚಾರ್, ಕೆ. ವಿ. ಸತ್ಯನ್, ಸತ್ಯನಾರಾಯಣ, ಪ್ರಸಾದ್ ಬೆಳ್ಳೂರ್–ಇವರೇ ಮೊದಲಾದವರು ಈ ನಾಟಕ ಸಂಘದ ವತಿಯಿಂದ ಪ್ರದರ್ಶಿಸಲಾದ ಹಲವಾರು ಗಮನಾರ್ಹ ನಾಟಕಗಳನ್ನು ನಿರ್ದೇಶಿಸಿರುವರು. ಡಾ|| ಎಂ. ಎಸ್. ಮಧ್ಯಸ್ಥ, ಉಮಾ, ಪವಿತ್ರಾ ಚಿಣ್ಣಪ್ಪ, ಸಿ. ರಾಜು, ಪ್ರೊ|| ರಾಮಕೃಷ್ಣ ಉಡುಪ ಮೊದಲಾದವರೂ ಈ ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿದ್ದವರು. ರಾಜ್ಯ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಡಾ|| ಡಿ. ಬಿ. ರಾಮಚಂದ್ರಾಚಾರ್ ಅವರು ರಚಿಸಿದ 'ಚಿಕ್ಕವೀರರಾಜೇಂದ್ರ' ನಾಟಕವನ್ನು ಪ್ರದರ್ಶಿಸಿ ಕೊಡಗಿನ ಚರಿತ್ರೆಯನ್ನು ಜನತೆಗೆ ಪರಿಚಯಿಸಲು ಪ್ರಯತ್ನಿಸಿದುದು, 'ಏವಂ ಇಂದ್ರಜಿತ್' ನಾಟಕದ ಅಭಿನಯಕ್ಕೆ ರಾಜ್ಯ ಪ್ರಶಸ್ತಿಯನ್ನು ಪಡೆದುದು ಮತ್ತು 'ಸ್ಪಂದನ' ಎನ್ನುವ ತ್ರೈಮಾಸಿಕವನ್ನು ಹೊರತಂದುದು ಈ ಸಂಘದ ಇತರ ಗಮನಾರ್ಹ ಸಾಧನೆಗಳಾಗಿವೆ.

ಪ್ರಾದೇಶಿಕ ಚರಿತ್ರೆಯ ಹಿನ್ನೆಲೆಯಲ್ಲಿ ಕೊಡಗಿನ ಹಲವು ಮುಖಗಳನ್ನು, ಸಮಸ್ಯೆಗಳನ್ನು ರಂಗಮಾಧ್ಯಮದ ಮೂಲಕ ಪರಿಚಯಿಸುವ ಉದ್ದೇಶ ಹೊಂದಿರುವ ಸೃಷ್ಟಿ ಕೊಡಗು ರಂಗವು ಪೊನ್ನಂಪೇಟೆಯ ಅಡ್ಡಂಡ ಸಿ. ಕಾರ್ಯಪ್ಪ ಮತ್ತು ಅವರ ಪತ್ನಿ ಅನಿತಾ ಕಾರ್ಯಪ್ಪ ಅವರುಗಳ ಪ್ರಯತ್ನದ ಫಲವಾಗಿ ಅಸ್ತಿತ್ವಕ್ಕೆ ಬಂದಿದೆ. ಈ ಸಂಸ್ಥೆಯು ಪ್ರಪ್ರಥಮವಾಗಿ ಈ ಜಿಲ್ಲೆಯಲ್ಲಿ 'ರೆಪರ್ಟರಿ' (ರಂಗಮಂಡಲ) ಮಾದರಿಯಲ್ಲಿ ತನ್ನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಕೊಡಗಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದೆ. 1991ರಲ್ಲಿ ದೆಹಲಿಯಲ್ಲಿ 'ಕೊಡಗಿನ ಅಂತಿಮ ರಾಜ' ಎಂಬ ಕನ್ನಡ ಭಾಷಾ ನಾಟಕವನ್ನು ಪ್ರದರ್ಶಿಸಿದೆಯಲ್ಲದೆ, ವಿಲಿಯಂ ಷೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕದ ಕೊಡವ ಭಾಷಾ ರೂಪಾಂತರವನ್ನು ಸಿದ್ಧಪಡಿಸಿ 'ಮಾಚಯ್ಯ' ಎಂಬ ಹೆಸರಿನಲ್ಲಿ ರಂಗಕ್ಕೆ ತಂದಿದೆ. ಈ ಸಂಸ್ಥೆಯು 'ದಿವಾನ್ ಬೋಪಣ್ಣ', 'ದಂಗೆಕಿಂಜ ಮಿಂಞ', ಇತ್ಯಾದಿ ನಾಟಕಗಳೂ ಜನಪ್ರಿಯತೆಗಳಿಸಿವೆ. ದೇವು, ಪ್ರಭು ಮತ್ತು ದಾಸುರಂತಹ ಕಲಾವಿದರು ಇಲ್ಲಿ ಗಮನೀಯರಾದವರು. ಹಾಗೆಯೇ, ಕೊಡಗು ಯುವಕ ಮಂಡಳಿಯು ಬಿ. ಎ. ಷಂಶುದ್ದೀನ್ ಅವರ ನಿರ್ದೇಶನದ 'ದೊರೆ ಈಡಿಪಸ್' ನಾಟಕವನ್ನು 1978ರಲ್ಲಿ ಮೈಸೂರಿನಲ್ಲಿ ಪ್ರದರ್ಶಿಸಿ ಪ್ರಥಮ ಬಹುಮಾನವನ್ನು ಗಳಿಸಿತು.

ಮಡಿಕೇರಿಯ ಕೊಡಗು ಲೇಖಕ ಮತ್ತು ಕಲಾವಿದರ ಬಳಗವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಡನೆ 1986ರಲ್ಲಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಮಡಿಕೇರಿಯಲ್ಲಿ ಏಳು ದಿನಗಳ ನಾಟಕೋತ್ಸವವನ್ನು ಏರ್ಪಡಿಸಿದ್ದು, ಜಿಲ್ಲೆಯ ಆಯ್ದ 14 ತಂಡಗಳು ಈ ಉತ್ಸವದಲ್ಲಿ ಭಾಗವಹಿಸಿದ್ದವು. ಅದೇ ವರುಷದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸಹಯೋಗದೊಡನೆ ಜಿಲ್ಲಾಮಟ್ಟದ ನಾಟಕೋತ್ಸವವನ್ನೂ 1988ರಲ್ಲಿ ವಿಭಾಗೀಯ ನಾಟಕೋತ್ಸವವನ್ನೂ ಈ ಬಳಗವು ಏರ್ಪಡಿಸಿದ್ದಿತು. ಹಾಗೆಯೇ, ಸೋಮವಾರಪೇಟೆಯ ಡಾ|| ಜಿ.ಎಸ್. ಪರಮೇಶ್ ಅವರ ನೇತೃತ್ವದಲ್ಲಿ ಕ್ರಿಯಾಶೀಲವಾಗಿರುವ ಕಿರಣ್ ಕಲಾವೇದಿಕೆಯು 1985 ರಿಂದ 1990ರ ವರೆಗೆ ಕೊಡಗಿನಾದ್ಯಂತ ಸುಮಾರು 28 ನಾಟಕಗಳನ್ನು ಪ್ರದರ್ಶಿಸಿದ್ದು, 1990ರಲ್ಲಿ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದ್ದಿತು. ಮಡಿಕೇರಿಯ ಚಂದನ ಕಲಾವಿದರು, ಓಂಕಾರ್ ಕಲಾವಿದರು ಮತ್ತು ಸೋಮವಾರ

ಪೇಟೆಯ ಇಂಟೆರಾಕ್ಟ್ ಕ್ಲಬ್ ಇವು ಈ ಸ್ಪರ್ಧೆಯಲ್ಲಿ ಭಾಗ ವಹಿಸಿದ ತಂಡಗಳಲ್ಲಿ ಮುಖ್ಯವಾದುವು. ಈ ಸಂಸ್ಥೆಗಳೇ ಅಲ್ಲದೆ, ಪೊನ್ನಂಪೇಟೆಯ ಮಿತ್ರಮಂಡಳಿಯು ಎಂ.ಸಿ. ಮೊಣ್ಣಪ್ಪ, ಅಯ್ಯಪ್ಪಮ್ಮಯ್ಯ(ದಾಸ್), ಜಿ.ಕೆ. ಸೋಮಯ್ಯ ಮೊದಲಾದವರ ಪ್ರಯತ್ನದೊಡನೆ 'ಉಮ್ಮತ್‌ಪೂ', 'ಕೊಂಬು ತಪ್ಪ್‌ನ ಕೋಡ' ಮತ್ತು 'ಚೊಕ್ಕ್‌ನಕ ಚಿಕ್ಕ್'ಎಂಬ ಕೊಡವ ಭಾಷಾ ನಾಟಕಗಳನ್ನು ಕೊಡಗಿನಾದ್ಯಂತ ಪ್ರದರ್ಶಿಸಿದೆ.

ಈ ಜಿಲ್ಲೆಯ ಇನ್ನಿತರ ಹವ್ಯಾಸಿ ಸಂಸ್ಥೆಗಳಲ್ಲಿ ವೀರರಾಜ ಪೇಟೆಯ ಡಾ|| ಬಿ.ಎಸ್. ಸುಬ್ರಮಣಿ ಅವರ ಕಲ್ಪವೃಕ್ಷ ಬಳಗ, ಮಕ್ಕಳ ನಾಟಕಗಳನ್ನು ಪ್ರದರ್ಶಿಸಿರುವ ಗೋಣಿ ಕೊಪ್ಪಲಿನ ಶ್ರೀನಿವಾಸ್ ಅವರ ಪ್ರಭಾ ಕಲಾವಿದರ ಸಂಘ, ಸಂಪಾಜೆಯ ಎನ್.ಎಸ್. ದೇವಿಪ್ರಸಾದ್ ಅವರ ರಂಗ ನಿರಂತರ, ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ ಜಾನ್ ಪ್ರಸನ್ನಕುಮಾರ್ ಅವರು ಅಧ್ಯಕ್ಷರಾಗಿರುವ ಮಡಿ ಕೇರಿಯ ಮಂಗಳ ಕಲಾವೇದಿಕೆ, ಕುಶಾಲನಗರದ ವಿ.ಎಸ್. ರಾಮಕೃಷ್ಣ ಅವರ ಶ್ರೀ ರಾಘವೇಂದ್ರ ಕಲಾ ಸಂಘ, ಮಡಿ ಕೇರಿಯ ಸ್ನೇಹ ಕಲಾಕೂಟ, ಸೋಮವಾರಪೇಟೆಯ ಸಿಂಚನ, ಪ್ರತಿಭಾ ಸ್ಪಂದನ, ಸುವರ್ಣ ಕಲಾಸಂಘ, ವೇದಿಕಾ, ಅಭಿ ಲಾಷ್ ಮತ್ತು ಮಕ್ಕಳ ಹವ್ಯಾಸಿ ಕಲಾಸಂಘ ಮೊದಲಾದು ವನ್ನು ಗಮನಿಸಬಹುದು.

ವೃತ್ತಿ ಮತ್ತು ಹವ್ಯಾಸಿ ರಂಗಭೂಮಿ ಕಲಾವಿದರಲ್ಲಿ ಈ ಮೇಲೆ ಪ್ರಸ್ತಾಪಿಸಲ್ಪಟ್ಟಿರುವವರೇ ಅಲ್ಲದೆ, ಮಡಿಕೇರಿಯ ಚಂದ್ರಶೇಖರ್, ನಾಗಪ್ಪಾಚಾರ್, ಅಶೋಕ್ ಗುಮಾಸ್ತೆ, ಎಸ್. ಶ್ರೀಧರ್, ವೀರರಾಜಪೇಟೆಯ ಎಂ.ಎಸ್. ರಾಮದೇವ, ಹೆಚ್.ಜಿ. ಮಹಾಬಲೇಶ್ವರ, ಶಾರದಾ, ಡಾ|| ಪುಟ್ಟಣ್ಣ, ಭಾರತಿ, ಪಾರ್ವತಿ ಮೊದಲಾದವರನ್ನೂ ನೆನೆಯಬಹುದು. ಕೊಡ್ಲಿಪೇಟೆಯ ಎಂ.ಹೆಚ್. ಭಾಷಾಸಾಹೇಬ್, ನಿಲುವಾಗಿಲು ಗ್ರಾಮದ ಎನ್.ಕೆ. ಬಸವಲಿಂಗಪ್ಪ ಮತ್ತು ಸೋಮವಾರ ಪೇಟೆಯ ಪಿ.ಆರ್. ಮಂಜುನಾಥ ಅವರುಗಳು ನಾಟಕಕಾರ ರಾಗಿಯೂ ಬಿಟಿಗಾನಹಳ್ಳಿಯ ಬಸವಯ್ಯ ಅವರು ನಾಟಕದ ಭಾಗವತರಾಗಿಯೂ ಹೆಸರು ಮಾಡಿದ್ದಾರೆ.

'ಅಭಿನಯ' ತಂಡದ ಸ್ಥಾಪಕರೂ ನಿರ್ದೇಶಕರೂ ಇಂಗ್ಲಿಷ್ ರಂಗಭೂಮಿಯ ಪ್ರತಿಭಾವಂತ ನಟರೂ ಆಗಿರುವ ಬೆಂಗಳೂರಿನ ಅಶೋಕ್ ಮಂದಣ್ಣ ಅವರು ಕೊಡಗಿನವರು. ಸಿನಿಮಾರಂಗದಲ್ಲಿಯೂ ಇವರು ಸೇವೆ ಸಲ್ಲಿಸುತ್ತಿರುವರು. ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರಗಳಲ್ಲಿರುವ ಈ ಜಿಲ್ಲೆಯ ಇತರ ಗಮನಾರ್ಹ ನಟ-ನಟಿಯರಲ್ಲಿ ಮೆಹಬೂಬ್ ಉಸ್ಮಾನಿ (ದರ್ವೇಶ್), ಮಾಯಮುಡಿಯ ಶಶಿಕಲಾ, ವೀರರಾಜ ಪೇಟೆಯ ಜೆಫ್ರಿ ಚೆಂಗಪ್ಪ, ಮಜೀದ್ (ದೇವದಾಸ್), ಬಿಟ್ಟಂಗಳದ ಪುಷ್ಪ, ಗೋಣಿಕೊಪ್ಪಲಿನ ಎಸ್.ಜಿ. ಫಯಾಜ್, ಸೋಮವಾರಪೇಟೆ ತಾಲೂಕಿನ ಶಿವಾನಂದ್, ಸೋಮಶೇಖರ, ಕೆ.ಎಂ. ಶಿವಣ್ಣ, ದೇವರಾಜ್, ಪ್ರಸಿದ್ಧ ಓಟಗಾರ್ತಿ ಅಶ್ವಿನಿ ನಾಚಪ್ಪ ಮೊದಲಾದವರನ್ನು ಪ್ರಸ್ತಾಪಿಸಬಹುದು. ಅಭಿನಯ ದೊಡನೆ ಚಿತ್ರನಿರ್ಮಾಣದಲ್ಲೂ ಆಸಕ್ತರಾಗಿರುವವರು ಸೋಮ ವಾರಪೇಟೆ ತಾಲೂಕಿನ ಜೈಜಗದೀಶ್ ಅವರು. ಸಂಪಾಜೆಯ ಎನ್.ಎಸ್. ದೇವಿಪ್ರಸಾದ್ ಅವರೂ ಚಿತ್ರ ನಿರ್ಮಾಪಕರು.

ಕರ್ನಾಟಕದ ಪ್ರಾದೇಶಿಕ ಕಲೆ, ಸಂಸ್ಕೃತಿ, ಭಾಷೆ ಇತ್ಯಾದಿ ಗಳನ್ನು ಇತರರಿಗೆ ಪರಿಚಯಿಸುವ ಹಿನ್ನೆಲೆಯಲ್ಲಿ ಕೊಡಗಿನ ಚರಿತ್ರೆ, ಜನಜೀವನ ಮತ್ತು ಸಂಸ್ಕೃತಿ ಕುರಿತು ಕನ್ನಡ, ಇಂಗ್ಲಿಷ್ ಮತ್ತು ಕೊಡವ ಭಾಷೆಗಳಲ್ಲಿ ಸಾಕ್ಷ್ಯಚಿತ್ರಗಳೂ ಕಥಾಚಿತ್ರಗಳೂ ತಯಾರಿಸಲ್ಪಟ್ಟಿವೆ. ಇಂತಹ ಕೆಲವನ್ನು ಇಲ್ಲಿ ಪ್ರಸ್ತಾಪಿಸುವುದಾದರೆ, ನಾಯಕ ನಟ ಎಸ್. ಆರ್. ರಾಜನ್ ಅವರು ನಿರ್ದೇಶಿಸಿದ 'ನಾಡಮಣ್ಣ್ ನಾಡಕೂಳ್' ಎಂಬ ಪ್ರಥಮ ಕೊಡವ ಭಾಷಾ ಕಥಾಚಿತ್ರವು 1972ರಲ್ಲಿ ನಿರ್ಮಾಣಗೊಂಡಿತು. ಹಾಗೆಯೇ, 1983ರಲ್ಲಿ ತಯಾರಿ ಸಲ್ಪಟ್ಟ 'ಮಹಾವೀರ ಅಚ್ಚುನಾಯಕ' ಎಂಬ ಕಥಾಚಿತ್ರವು ಕೊಡಗಿನ ಪ್ರಥಮ ಕೊಡವ–ಕನ್ನಡ ವರ್ಣಚಿತ್ರ ಎನಿಸಿತಲ್ಲದೆ, ಇದನ್ನು ಪ್ರಸಿದ್ಧ ಕಲಾವಿದ ಜಿ. ಎಸ್. ಎ. ಈಶ್ ಅವರು ನಿರ್ದೇಶಿಸಿದ್ದರು. 'ನಾ ಬಯಂದ ಪೂವ್' ಎಂಬ ಇನ್ನೊಂದು ಕೊಡವ ಭಾಷಾ ಕಥಾಚಿತ್ರವು ತಯಾರಿಕೆಯ ಹಂತದಲ್ಲಿದೆ. ಇವಲ್ಲದೆ, ಎ. ಕೆ. ಬಾಲಕೃಷ್ಣನ್ ಅವರು ನಿರ್ಮಿಸಿ ನಿರ್ದೇಶಿಸಿದ 'ದಿ ವ್ಯಾಲಿಯಂಟ್ ವನ್ಸ್' ಎಂಬ ಆಂಗ್ಲ ಭಾಷಾ ಶೈಕ್ಷಣಿಕ ಚಿತ್ರವು ದೆಹಲಿಯ ಎನ್.ಸಿ.ಇ.ಆರ್.ಟಿ.ಯ ಘಟಕವಾದ ರಾಷ್ಟ್ರೀಯ ಶಿಕ್ಷಣ ತಂತ್ರಜ್ಞಾನ ಸಂಸ್ಥೆಯ ವತಿಯಿಂದ ತಯಾರಿಸಲ್ಪಟ್ಟಿದ್ದು, ಕೊಡವ ಜನಾಂಗದ ಇತಿಹಾಸ, ಸಂಸ್ಕೃತಿ, ಹಬ್ಬ–ಆಚರಣೆ, ಉತ್ಸವ, ಸಂಪ್ರದಾಯ ಇತ್ಯಾದಿಗಳನ್ನು ಪರಿಚಯಿಸುವ ಮುಖ್ಯೋದ್ದೇಶವನ್ನು ಹೊಂದಿದೆ. ಮಾನವಶಾಸ್ತ್ರ ಹಾಗೂ ಮಾನವಕುಲಶಾಸ್ತ್ರ ಚಿತ್ರ ವಿಭಾಗದಲ್ಲಿ ಅತ್ಯುತ್ತಮ ಚಿತ್ರವೆಂದು 1992ರ ರಾಷ್ಟ್ರೀಯ ಪ್ರಶಸ್ತಿಯನ್ನೂ ಇದು ಪಡೆದುಕೊಂಡಿದೆ.

ಕೊಡಗಿನಲ್ಲಿ ನಾಟಕ ಪ್ರದರ್ಶನಗಳಿಗೆ ಅನುಕೂಲವಾಗಿರುವ ಮಂದಿರಗಳು ಹೆಚ್ಚಿಲ್ಲದಿದ್ದರೂ ಹವ್ಯಾಸಿ ಕಲಾತಂಡಗಳು ತಮ್ಮ ರಂಗ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತಲೇ

ಬಂದಿವೆ. ಹಿಂದೆ ಹೊರ ಊರುಗಳಿಂದ ಬಂದ ಕಂಪೆನಿ ನಾಟಕಗಳನ್ನು ಓಂಕಾರೇಶ್ವರ ದೇವಾಲಯದ ಗಾರೆ ತೊಟ್ಟಿಯಲ್ಲಿ ಡೇರೆ ಹಾಕಿ ಪ್ರದರ್ಶಿಸುತ್ತಿದ್ದರು. ಮಡಿಕೇರಿಯ ಪುರಭವನವು 'ಕಾವೇರಿ ಕಲಾಕ್ಷೇತ್ರ'ವಾಗಿ ಪರಿವರ್ತನೆಗೊಂಡಿದ್ದು, ನಾಟಕ ಪ್ರದರ್ಶನಗಳಿಗೂ ತಕ್ಕಮಟ್ಟಿಗೆ ಉಪಯುಕ್ತವಾದುದೆನಿಸಿದೆ. ಅಲ್ಲಿಯ ಸರಕಾರಿ ಕಾಲೇಜಿನ ರಂಗಮಂದಿರ ಮತ್ತು ಸೋಮವಾರಪೇಟೆಯ ಚನ್ನಬಸಪ್ಪ ಹಾಲ್‌ಗಳೂ ಈ ದಿಸೆಯಲ್ಲಿ ಗಮನಿಸಬಹುದಾದುವು. ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನ ಹೊಸ ರಂಗಮಂದಿರವು ಸದ್ಯಕ್ಕೆ ಜಿಲ್ಲೆಯಲ್ಲಿಯ ಸುಸಜ್ಜಿತ ರಂಗಮಂದಿರವೆನಿಸಿದೆ.

## ಶಿಲ್ಪ ಮತ್ತು ಚಿತ್ರಕಲೆ

ಶಿಲ್ಪ ಮತ್ತು ಚಿತ್ರಕಲೆಯ ದೃಷ್ಟಿಯಿಂದ ಕೊಡಗು ಜಿಲ್ಲೆಯೂ ಗಮನಾರ್ಹ ಸ್ಥಾನದಲ್ಲಿದೆ. ಪರಂಪರಾಗತವಾಗಿ ಬಂದ ಶಿಲ್ಪ ಮತ್ತು ಚಿತ್ರಕಲಾ ಕ್ಷೇತ್ರಗಳಿಗೆ ಈ ಜಿಲ್ಲೆಯ ಕಲಾವಿದರು ಯಥಾಶಕ್ತಿ ಸೇವೆ ಸಲ್ಲಿಸಿರುವರು. ಈ ಜಿಲ್ಲೆಯ ಕೆಲವು ಕಲಾವಿದರು ಬೇರೆಡೆಯಲ್ಲಿಯೂ ನೆಲಸಿರುವರು.

**ಶಿಲ್ಪಕಲೆ :** ಕೊಡಗಿನ ಶಿಲ್ಪ ಕಲಾವಿದರ ಪರಂಪರೆಯನ್ನು ಗುರುತಿಸುವಲ್ಲಿ, ಸೋಮವಾರಪೇಟೆ ತಾಲೂಕು ಹುಲಕೋಡು ಗ್ರಾಮದ ವೀರಗಲ್ಲನ್ನು ಕಲಿನಬೋಜನೆಂಬ ಶಿಲ್ಪಿಯೂ1 ಅದೇ ತಾಲೂಕು ಶಿರಂಗಾಲದ ವೀರಗಲ್ಲನ್ನು ಮರಿಯೋಜನೆಂಬ ಶಿಲ್ಪಿಯೂ2 ಕೆತ್ತಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಆಧುನಿಕ ಶಿಲ್ಪಿಗಳಲ್ಲಿ ಕುಂಜಲಗೇರಿಯಲ್ಲಿ ಜನಿಸಿ ಈಗ ಮಡಿಕೇರಿಯಲ್ಲಿ ನೆಲಸಿರುವ ಕಾಮೆಯಂಡ ಎಂ. ಮುತ್ತಣ್ಣ ಅವರನ್ನು ಕೊಡಗಿನ ಗಣ್ಯ ಶಿಲ್ಪ ಕಲಾವಿದರೆಂದು ಕರೆಯಬಹುದಾಗಿದೆ. ಇವರ ಹಿರಿಯರಲ್ಲೊಬ್ಬರು ಕೊಡಗಿನ ಹಾಲೇರಿ ಅರಸರ ಬಳಿ ಇದ್ದು, ಕೋಳಿಮೊಟ್ಟೆಯ ಮೇಲೆ ಚಿನ್ನದ ತೆಳುಹಾಳೆಯನ್ನು ಹೊದ್ದಿಸಿ ಕೋಳಿಯಿಂದ ಆ ಮೊಟ್ಟೆಯನ್ನು ಮರಿ ಮಾಡಿಸಿದ ಕುಶಲತೆಗೆ ಅರಸರಿಂದ ಭೂಮಿಯನ್ನು ಉಂಬಳಿಯಾಗಿ ಪಡೆದಿದ್ದರೆಂದು ತಿಳಿದು ಬರುತ್ತದೆ. ಮರ ಮತ್ತು ಕಲ್ಲುಗಳಲ್ಲದೆ, ಕಂಚು ಮತ್ತು ಬೆಳ್ಳಿಯ ಲೋಹ ಮಾಧ್ಯಮಗಳಲ್ಲೂ ಮೂರ್ತಿಗಳನ್ನು ನಿರ್ಮಿಸಿರುವ ಮುತ್ತಣ್ಣ ಅವರ ಶಿಲ್ಪಕಲಾಕೃತಿಗಳಲ್ಲಿ ಭಾಗಮಂಡಲದ ಇಗ್ಗುತಪ್ಪ ದೇವಾಲಯದ ಪ್ರತಿಮೆ, ಕೆಲವು ಮನೆ ದೇವರುಗಳು, ಪೊನ್ನಂಪೇಟೆ ಪ್ರಶಾಂತಿ ನಿಲಯದ ಸ್ವಾಮೀಜಿಯ ವಿಗ್ರಹ, ರಾಷ್ಟ್ರನಾಯಕರ, ಸಾಹಿತಿಗಳ ಮತ್ತು ಕೊಡವ ಕನ್ಯೆಯರ ವಿಗ್ರಹಗಳು ಮೊದಲಾದವು ಗಮನಾರ್ಹವಾದವು. ಇವರು ಬೀಟೆಮರದಲ್ಲಿ ಕೆತ್ತಿರುವ ಗಣಪತಿ ದೇವರ ವಿಗ್ರಹವು ಬಾಸ್ಟನ್ ನಗರದ ರಾಬರ್ಟ್ ಮ್ಯೂಸಿಯಂನಲ್ಲಿ ಪ್ರದರ್ಶಿಸಲ್ಪಟ್ಟಿದೆ. ಒಂದೇ ಮರದ ತುಂಡಿನಲ್ಲಿ ಮೂಡಿಸಲಾಗಿರುವ ಲಿಂಕನ್, ಗಾಂಧಿ, ಏಸು ಮತ್ತು ಬುದ್ಧರ ಮುಖಗಳುಳ್ಳ ಕಲಾಕೃತಿಯು ಇವರ ಪ್ರತಿಭೆಯನ್ನು ವ್ಯಕ್ತಪಡಿಸುವಂತಹುದು. ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಸದಸ್ಯರಾಗಿ ಕೊಡಗಿನಿಂದ ಪ್ರಪ್ರಥಮವಾಗಿ ನೇಮಿಸಲ್ಪಟ್ಟ ವ್ಯಕ್ತಿಯೆಂದರೆ ಇವರೇ. ಇವರು ಸ್ಥಾಪಿಸಿರುವ ಶಿಲ್ಪಶ್ರೀ ಕಲಾಸಂಘವು ಶಿಲ್ಪಕಲಾ ಚಟುವಟಿಕೆಗಳತ್ತ ಗಮನ ಹರಿಸಿದೆ. ಮರದ ಕೆತ್ತನೆಯಲ್ಲಿ ಹೆಸರು ಮಾಡಿದ ಕೊಡಗಿನವರೇ ಆದ ಮೇಜರ್ ಚೆಪ್ಪುಡಿರ ಪೊನ್ನಪ್ಪ ರಾಜಾರಾಂ (ಸಿ. ಪಿ. ರಾಜಾರಾಂ) ಅವರ ಕೆಲವು ಕಲಾಕೃತಿಗಳನ್ನು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯ ಮೊದಲ ಅಂತಸ್ತಿನಲ್ಲಿ ಪ್ರತ್ಯೇಕವಾಗಿ ಪ್ರದರ್ಶಿಸಲಾಗಿದೆ.

ಯುವಪೀಳಿಗೆಯ ಪ್ರತಿಭಾವಂತ ಶಿಲ್ಪಕಲಾವಿದರಲ್ಲಿ ಪಾರಣೆಯವರಾದ ಮತ್ತು ಪ್ರಸ್ತುತ ಮೈಸೂರಿನಲ್ಲಿ ನೆಲಸಿರುವ ಕಿರಣ್ ಸುಬ್ಬಯ್ಯ ಅವರು ಗಮನಾರ್ಹರು. ಶಿಲ್ಪದೊಡನೆ ಚಿತ್ರಕಲೆ, ಕವನ ರಚನೆ, ಇತ್ಯಾದಿಗಳಲ್ಲಿಯೂ ಇವರು ಪರಿಶ್ರಮ ಪಡೆದಿದ್ದಾರೆ. 1976ರಲ್ಲಿ ಮೈಸೂರಿನಲ್ಲಿ ಇವರು ರಚಿಸಿದ ಶಿಲ್ಪ ಮತ್ತು ಮರದ ಕೆತ್ತನೆಗಳ ಏಕವ್ಯಕ್ತಿ ಪ್ರದರ್ಶನವು ಏರ್ಪಾಟಾಗಿದ್ದಿತು. ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನ ಮುಂದೆ ಪ್ರತಿಷ್ಠಾಪಿಸಲೋಸುಗ ಕೆತ್ತಲಾದ ಕಾವೇರಿ ತಾಯಿಯ ಪ್ರಮುಖ ಶಿಲಾಕೃತಿಯಲ್ಲದೆ, ಇತರ ಶಿಲ್ಪ ಕಲಾಕೃತಿಗಳೂ ಇವರಿಂದ ಸಿದ್ಧಗೊಂಡಿವೆ. 'ಶಿಲ್ಪಕಲಾರತ್ನ', ಮೊದಲಾದ ಬಿರುದುಗಳಿಂದ ಪುರಸ್ಕೃತರಾಗಿರುವ ಮಡಿಕೇರಿಯ ಬಿ. ಕೆ. ಗಣೇಶ್ ಅವರು ಸಹಾ ಗಮನಾರ್ಹ ಶಿಲ್ಪಕಲಾವಿದರಾಗಿದ್ದು, ಮಡಿಕೇರಿಯ ಪುರಭವನ (ಕಾವೇರಿ ಕಲಾಕ್ಷೇತ್ರ) ಮುಂಭಾಗದಲ್ಲಿ ನಿಲ್ಲಿಸಲಾದ ಕಾವೇರಿ ಮಾತೆಯ ಬೃಹತ್ ಪ್ರತಿಮೆಯನ್ನು ಒಳಗೊಂಡಂತೆ ಇನ್ನೂರಕ್ಕಿಂತಲೂ ಹೆಚ್ಚು ದೇವತಾ ಮತ್ತು ಇತರ ವಿಗ್ರಹಗಳನ್ನು ತಯಾರಿಸಿರುವರು. ವೀರರಾಜಪೇಟೆ ತಾಲೂಕು ಕುಮಟೂರು ಗ್ರಾಮದ ಬಾಚಿರಣೆಯಂಡ ಕೆ. ಅಣ್ಣಯ್ಯ ಅವರು ಮರದ ಕಲಾಕೃತಿಗಳು, ಮಕ್ಕಳ ಆಟಿಕೆಗಳು, ತೆಂಗಿನ ಕರಟದಲ್ಲಿ ಕಲಾಕೃತಿ, ಇತ್ಯಾದಿ

1. ಎಪಿಗ್ರಾಫಿಯ ಕರ್ನಾಟಕ, ಸಂಪುಟ 1, ಸಂಖ್ಯೆ 39, ಕ್ರಿ.ಶ. 1359
2. ಅದೇ, ಸಂಖ್ಯೆ 38, ಸು. 18ನೇಯ ಶತಮಾನ

ಗಳ ತಯಾರಿಕೆಯಲ್ಲಿ ಕುಶಲತೆ ಪಡೆದಿದ್ದಾರೆ. ಗಂಧದ ಕೆತ್ತನೆಯಲ್ಲಿ ಮಡಿಕೇರಿಯ ಪಿ. ಎಂ. ರಮಾನಂದ ಅವರೂ ಸಾಧನೆ ಮಾಡಿರುವರು.

ಚಿತ್ರಕಲೆ : ಕೊಡಗಿನಲ್ಲಿ ಪ್ರತಿಭಾನ್ವಿತ ಚಿತ್ರಕಲಾವಿದರ ಪರಂಪರೆಯು ಹಾಲೇರಿ ಅರಸರ ಕಾಲದಿಂದಲೇ ಮುಂದು ವರಿದು ಬಂದಿರುವುದನ್ನು ನೋಡಬಹುದು. ಈ ಅರಸರ ಆಸ್ಥಾನದಲ್ಲಿ ಚಿತ್ರಕಾರರೂ ಇದ್ದರು. ದೊಡ್ಡವೀರರಾಜೇಂದ್ರನ ಆಡಳಿತಾವಧಿಯಲ್ಲಿ, ಅಂದರೆ 1805ರ ಮಧ್ಯೆ ರಾಜನ ಮತ್ತು ಅತನ ಕುಟುಂಬದವರ ಚಿತ್ರಗಳನ್ನು ಬಿಡಿಸಲು ಬೊಂಬಾಯಿಯಿಂದ ನೆಸ್ ಎಂಬಾತನು ಬಂದಿದ್ದನು.1 ಗಂಗೋಜಿ ಎಂಬವನು ಆಸ್ಥಾನ ಚಿತ್ರಕಾರನಾಗಿದ್ದು, ಅವನ ಮಗ ಪೀರೋಜಿಯೂ ಚಿತ್ರಗಳನ್ನು ಬಣ್ಣದಲ್ಲಿ ಬರೆಯುವ ಕಲಾವಿದನಾಗಿದ್ದನು. ಚಿಕ್ಕವೀರರಾಜೇಂದ್ರನು ಸ್ವಲ್ಪಕಾಲ ಕಾಶಿಯಲ್ಲಿ ನೆಲಸಿದ್ದಾಗ ಪೀರೋಜಿಯು ಕಾಶಿಗೆ ಹೋಗಿ ಈ ಅರಸನ ಆಶ್ರಯದಲ್ಲಿ ಚಿತ್ರಗಳನ್ನು ಬರೆದನು.2 ನಾಲ್ಕುನಾಡು, ಮಡಿಕೇರಿ ಅರಮನೆಗಳ ಭಿತ್ತಿಗಳಲ್ಲಿ ಇರುವ ಚಿತ್ರಗಳಲ್ಲಿ ಐರೋಪ್ಯ ಪ್ರಭಾವ ಕಾಣಬರುತ್ತದೆ.

ತಮ್ಮ ಸಮಾಜಸೇವೆಗಾಗಿ 1930ರಲ್ಲಿ ಭಾರತ ಸರಕಾರ ದಿಂದ 'ಕೈಸರ್-ಇ-ಹಿಂದ್' ಪದಕವನ್ನು ಪಡೆದುಕೊಂಡ ಕೊಡಗಿನ ಕೋದಂಡೇರ ಸೀತಮ್ಮ ಅವರು ಸಂಗೀತದ ಅಭಿ ರುಚಿಯೊಡನೆ ಚಿತ್ರಕಲಾವಿದೆಯೂ ಆಗಿದ್ದರು. 1890 ರಲ್ಲಿಯೇ ಇವರು ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಮದ ರಾಸಿನಲ್ಲಿ ಏರ್ಪಡಿಸಿದ್ದರು. ಬೊಂಬಾಯಿಯಲ್ಲಿ ನೆಲಸಿದ್ದ ನಡಿ ಕೇರಿಯಂಡ ರಾಣಿ ನಂಜಪ್ಪ ಅವರು ಸಹಾ ಉತ್ತಮ ವರ್ಣ ಚಿತ್ರ ಕಲಾವಿದೆಯೆನಿಸಿದ್ದು, ಇವರ ಕೆಲವು ಕಲಾಕೃತಿಗಳು ಭಾರತ ಮತ್ತು ವಿದೇಶಗಳಲ್ಲಿಯ ಪ್ರಮುಖ ನಗರಗಳ ಆಧು ನಿಕ ಕಲಾಕೃತಿ ಸಂಗ್ರಹಾಲಯಗಳಲ್ಲಿ ಇಡಲ್ಪಟ್ಟಿವೆ.

ಇವರೇ ಅಲ್ಲದೆ, ಸಾಹಿತಿಯಾಗಿಯೂ ಇದ್ದ ಜಿ. ಶ್ರೀನಿವಾಸ ಮೂರ್ತಿ ಅವರು ಮಡಿಕೇರಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ದ್ದರು. ಮನವಟ್ಟಿರ ಮಾಚಯ್ಯ, ಟಿ. ರಾಜು ಮೇಸ್ತ್ರು, ಚೆನ್ನವೀರಪ್ಪ, ಎಂ. ಚಂದ್ರಶೇಖರ್ ಮೊದಲಾದವರೂ ಚಿತ್ರ ಕಲಾ ಕುಶಲರಾಗಿದ್ದರು. ದಾಮೋದರ ಜೋಶಿ ಅವರು ಜನರನ್ನು ಎದುರಿಗೆ ಕೂರಿಸಿಕೊಂಡು ರೇಖಾಚಿತ್ರಗಳನ್ನು ಸ್ಥಳದಲ್ಲಿಯೇ ಬಿಡಿಸಿ ತೋರಿಸುತ್ತಿದ್ದರು. ಈ ಜಿಲ್ಲೆಯ ಇತರ ಕಲಾವಿದರಲ್ಲಿ ಜಲವರ್ಣ, ತೈಲವರ್ಣ ಮತ್ತು ವಾಣಿಜ್ಯ ಕಲೆಯಲ್ಲಿ ನುರಿತ ಮಡಿಕೇರಿಯ ಬಿ. ಕೆ. ಗಣೇಶ್, ಚಿತ್ರಕಲಾ ಧ್ಯಾಪಕ ಹಾಗೂ ಕಲಾವಿದ ಪ್ರಸನ್ನಕುಮಾರ್, ವಿಗ್ರಹ ನಿರ್ಮಾಣ ಮತ್ತು ಚಿತ್ರಕಲೆಗಳಲ್ಲಿ ಸಮಾನ ನೈಪುಣ್ಯತೆ ಸಾಧಿಸಿರುವ ಮತ್ತು ಶಿಲ್ಪಿ ಕಾಮೆಯಂಡ ಎಂ. ಮುತ್ತಣ್ಣ ಅವರ ಪುತ್ರರಾದ ಕೆ. ಎಂ. ಭೀಮಯ್ಯ, ಕೆ.ಎಂ. ಕರುಂಬಯ್ಯ (ಮುಖೇಶ್)ಹಾಗೂ ಇವರೀರ್ವರ ಸಹೋದರ ಎಂ. ಹರೀಶ್, ಆರ್. ಟಿ. ನಾರಾಯಣಸಿಂಗ್, ಬಿ. ಎ. ವಿಜಯಕುಮಾರ್, ಗೋವಿಂದಭಟ್, ಜಿ. ಅನಂತಶಯನ, ಜಿ. ಟಿ. ರಾಘವೇಂದ್ರ, ಕಮಾಂಡರ್ ಎಂ. ವಿ. ಸೋಮಣ್ಣ, ವೀರರಾಜಪೇಟೆಯ ಬಿ. ಆರ್. ಸತೀಶ್, ಡಾ|| ನರಸಿಂಹನ್, ಕಾವಾಡಿ ಗ್ರಾಮದ ಎನ್. ಬಿ. ಕಾವೇರಪ್ಪ, ಚೆಂಬೆಬೆಳ್ಳೂರಿನ ಜಿ. ಕೆ. ಮುತ್ತಪ್ಪ, ಮೈತಾಡಿಯ ಉದಯೋನ್ಮುಖ ಕಲಾವಿದೆ ಐ. ಎಂ. ತುಳಸಿ, ಸೋಮವಾರಪೇಟೆಯ ಹೆಚ್. ಎಂ. ಶಿವಾನಂದ, ಕೆದಕಲ್‌ನ ಎಂ. ಕೆ. ಮುತ್ತಪ್ಪ, ಕುಶಾಲನಗರದ ಕೆಂಪೇಗೌಡ ಮೊದ ಲಾದವರು ಇಲ್ಲಿ ಉಲ್ಲೇಖನೀಯರು. ಜಲವರ್ಣ ಚಿತ್ರಣ ದಲ್ಲಿ ವಿಶೇಷ ಪರಿಶ್ರಮ ಪಡೆದಿರುವ ಪ್ರಮಿಳಾ ಚೋಳಯ್ಯ ಅವರು ರಚಿಸಿ ಅರ್ಪಿಸಿರುವ ಕಿತ್ತೂರು ರಾಣಿ ಚೆನ್ನಮ್ಮನ ವರ್ಣಚಿತ್ರವು ವೀರರಾಜಪೇಟೆಯ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಇಟ್ಟೀರ ಕೆ. ಬಿದ್ದಪ್ಪ ಅವರು ವ್ಯಂಗ್ಯ ಚಿತ್ರಗಳಿಗೆ ಸಂದರ್ಭ ಸಂಭಾಷಣೆಯನ್ನು ರಚಿಸುವಲ್ಲಿ ಸಿದ್ಧ ಹಸ್ತರು. ಮಡಿಕೇರಿಯ ಕೆ. ಗೋವಿಂದಭಟ್ ಅವರು ಉತ್ತಮ ಛಾಯಾಚಿತ್ರಗ್ರಾಹಕರು.

## ನೃತ್ಯ ಮತ್ತು ಸಂಗೀತ

ಕೊಡಗಿನ ಪಾರಂಪರಿಕ ಹಾಗೂ ಪ್ರಾದೇಶಿಕ ಜನಪದ ನೃತ್ಯ ಮತ್ತು ಸಂಗೀತಗಳೇ ಇಲ್ಲಿಯ ಜನರ ಜೀವಾಳವಾಗಿ ದ್ದರೂ ಶಾಸ್ತ್ರೀಯ ನೃತ್ಯ ಮತ್ತು ಸಂಗೀತಗಳು ಕಳೆದ ಶತ ಮಾನದಲ್ಲಿಯಷ್ಟೆ ಕೊಡಗನ್ನು ಪ್ರವೇಶಿಸಿದುವೆನ್ನಬಹುದು. ಕರ್ನಾಟಕ ಏಕೀಕರಣ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಕೊಡಗು ಸರಕಾರವು 1953ರಲ್ಲಿ ಬಿ. ಎಸ್. ಕುಶಾಲಪ್ಪ ಅವರ ಅಧ್ಯಕ್ಷತೆಯಲ್ಲಿ ಕೊಡಗು ರಾಜ್ಯ ನೃತ್ಯ, ನಾಟಕ ಮತ್ತು ಸಂಗೀತ ಅಕಾಡೆಮಿಯನ್ನು ಸ್ಥಾಪಿಸಿತು. ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆಗಳಲ್ಲಿ ವಾರಕ್ಕೆ

1. ಕೊಡಗಿನ ಇತಿಹಾಸ, ಪು. 350
2. ಅದೇ, ಪು. 593–94

ಎರಡು ದಿನಗಳ ಪ್ರಕಾರ, ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಉಪಾಧ್ಯಾಯರಿಂದ ಸಂಗೀತ ಮತ್ತು ನೃತ್ಯಕಲೆಗಳ ಪಾಠ ವನ್ನು ಹೇಳಿಸಲಾಗುತ್ತಿತ್ತು. ವರುಷಕ್ಕೆ ಕನಿಷ್ಠ ಮೂರು ಬಾರಿಯಾದರೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸ ಲಾಗುತ್ತಿದ್ದಿತು. ನವ ಮೈಸೂರಿನ ಉದಯಾನಂತರ ಈ ಅಕಾಡೆಮಿಯು ಮೈಸೂರು ರಾಜ್ಯ ನೃತ್ಯ, ನಾಟಕ ಮತ್ತು ಸಂಗೀತ ಅಕಾಡೆಮಿಯಲ್ಲಿ ಲೀನವಾಯಿತು. ಅಕಾಡೆಮಿಯ ಕೊಡಗು ಜಿಲ್ಲಾ ಶಾಖೆಯಿಂದ ನೇಮಿಸಲ್ಪಟ್ಟ ಉಪಾಧ್ಯಾ ಯರು ಭರತನಾಟ್ಯ ಮತ್ತು ಮಣಿಪುರಿ ನೃತ್ಯಗಳ ತರಗತಿ ಗಳನ್ನು ನಡೆಸತೊಡಗಿದ್ದರಿಂದ, ಕೊಡಗಿನ ಹೊಸ ಪೀಳಿಗೆ ಯವರಲ್ಲಿ ಭರತನಾಟ್ಯವು ಜನಪ್ರಿಯಗೊಳ್ಳಲು ಸಾಧ್ಯವಾಗಿದೆ.

ನೃತ್ಯ : ಕೊಡಗಿನಲ್ಲಿ ಶಾಸ್ತ್ರೀಯ ನೃತ್ಯಕಲೆಯ ಚಟು ವಟಿಕೆಗಳಲ್ಲಿ ಪ್ರಥಮತಃ ಭಾಗವಹಿಸಿದವರು ಕೋದಂಡ ಪೂವಯ್ಯ ಅವರ ಪುತ್ರಿಯರು. ಇವರನ್ನು ಪೂವಯ್ಯ ಸಹೋದರಿಯರೆಂದು ಗುರುತಿಸಲಾಗಿದ್ದಿತು.[1] ಕಲೆ ಮತ್ತು ನೃತ್ಯಕಲೆ ಕುರಿತ ತಮ್ಮ ಮಹಾಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾನಿಲಯದಿಂದ ಡಾಕ್ಟೊರೇಟ್ ಪದವಿಯನ್ನು ಪಡೆದ ಕೊಡಗಿನ ಸೀತಾ ಪೂವಯ್ಯ ಅವರು, ಭಾರತೀಯ ನೃತ್ಯ ಕಲೆಯ ಬಗೆಗೆ ವಿದೇಶಗಳಲ್ಲಿ ಉಪನ್ಯಾಸ ನೀಡಿದ್ದಾರೆ.[2] ಮದರಾಸಿನ ಆಡಿಯಾರ್‌ನಲ್ಲಿ ನಾಲ್ಕು ವರುಷ ವೃತ್ತಿ ಶಿಕ್ಷಣ ಪಡೆದವರು ಕೋಟೆರ ಚಿಣ್ಣಪ್ಪ ಅವರ ಪುತ್ರಿ ರಾಣಿ. ಆ ನಂತರ ಮಡಿಕೇರಿ ವೆಂಕಟಾದ್ರಿ ಶಾಮರಾಯರ ಮೊಮ್ಮಗ ಅಡ್ವೊಕೇಟ್ ವೆಂಕಟಗಿರಿರಾಯರ ಮಗಳ ಲೀಲಾಗಿರಿ ಅವರು 1951–60ರ ಅವಧಿಯಲ್ಲಿ, ಶಿವರಾವ್‌ಸಿಂಗ್ ಮತ್ತು ಖ್ಯಾತ ನೃತ್ಯಪಟು ಡಾ|| ಕೆ. ವೆಂಕಟಲಕ್ಷಮ್ಮ ಅವರ ಸಮರ್ಥ ಮಾರ್ಗದರ್ಶನದಲ್ಲಿ ಈ ಕಲೆಯಲ್ಲಿ ತರಬೇತಿ ಪಡೆದು ಕೊಂಡರು. ಇವರು ಕೆಲಕಾಲ ಪಶ್ಚಿಮ ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ಭರತನಾಟ್ಯ ತರಗತಿಗಳ ನಿರ್ವಹಣೆಯನ್ನೂ ಮಾಡಿರುವರು. ಕೊಡಗು ಸರಕಾರದ ರಾಜ್ಯ ಪ್ರಶಸ್ತಿ ಮತ್ತು ಇತರ ಪುರಸ್ಕಾರಗಳಿಗೂ ಇವರು ಪಾತ್ರರಾಗಿರುವರು. ಮಡಿಕೇರಿಯ ಭಾರತೀಯ ಸಂಗೀತ ನೃತ್ಯ ಕಲಾಶಾಲೆಯ ಸ್ಥಾಪಕರಾದ 'ನಾಟ್ಯಶಾಸ್ತ್ರ ವಿಮರ್ಶಕ' ಅಂಬಳೆ ಸುಬ್ಬರಾವ್ ಅವರು ಸಂಗೀತ ಮತ್ತು ನೃತ್ಯ ಶಿಕ್ಷಕರಾಗಿದ್ದರಲ್ಲದೆ, 'ಧೂಪಾರತಿ', 'ಶ್ರೀಮದ್ರಾಮಾಯಣ', 'ಸತ್ಯ ಹರಿಶ್ಚಂದ್ರ', 'ಭಕ್ತಧ್ರುವ' ಮೊದಲಾದ ಜನಪ್ರಿಯ ನೃತ್ಯರೂಪಕಗಳನ್ನು ರಚಿಸಿದರು. ಸೋಮವಾರಪೇಟೆಯಲ್ಲಿಯೂ ಇವರ ಕಲಾ ಶಾಲೆಯ ಶಾಖೆ ಇದೆ. ಇವರು ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರು. 1950 ರಿಂದ 1958ರ ವರೆಗೆ ಮಡಿಕೇರಿಯಲ್ಲಿ ನಾಟ್ಯಾಚಾರ್ಯರಾಗಿದ್ದ ಕೆ. ಎಸ್. ಮಣಿ ಅವರು ಸಹಾ ಈ ಜಿಲ್ಲೆಯಲ್ಲಿ ಕೆಲವರಿಗೆ ನಾಟ್ಯಾಭ್ಯಾಸ ಮಾಡಿಸಿದ್ದಾರೆ.

ಮೂಗೂರು ಸುಬ್ಬಣ್ಣನವರ ವಂಶಸ್ಥರಾದ ಖ್ಯಾತ ನೃತ್ಯ ಶಿಕ್ಷಕ ಅಮೃತಪ್ಪನವರ ಮೊಮ್ಮಗಳೇ ಜೇಜಮ್ಮ ಅವರು. ನೃತ್ಯ ಮತ್ತು ಅಭಿನಯದಲ್ಲಿ ಸಮನಾದ ಹೊಂದಾಣಿಕೆಯನ್ನು ಸಾಧಿಸಿದ್ದ ಜೇಜಮ್ಮನವರು ಕೊಡಗು ಸರಕಾರದ ನೃತ್ಯ, ನಾಟಕ ಮತ್ತು ಸಂಗೀತ ಅಕಾಡೆಮಿಯಲ್ಲಿ ನೃತ್ಯ ಶಿಕ್ಷಕಿ ಯಾಗಿದ್ದು, ತಮ್ಮ ಕಡೆಯ ದಿನಗಳವರೆಗೆ ಸೇವೆ ಸಲ್ಲಿಸಿದ್ದ ರೆಂಬುದನ್ನು ಇಲ್ಲಿ ಸ್ಮರಿಸಬಹುದು. ಕೊಡಗಿನಲ್ಲಿ ನೃತ್ಯ ಕಲಾ ಶಾಲೆಗಳನ್ನು ಆರಂಭಿಸಿ ಈ ಕಲೆಗೆ ಸೇವೆ ಸಲ್ಲಿಸುತ್ತಿರುವವರಲ್ಲಿ ಭರತನಾಟ್ಯ ಪ್ರವೀಣೆ ಮಡಿಕೇರಿಯ ಶೋಭಾ ಸುಬ್ಬಯ್ಯ ಅವರು ಮುಖ್ಯರಾಗಿದ್ದಾರೆ. ಇವರು ವೀರರಾಜಪೇಟೆಯಲ್ಲಿ ಸಂಗೀತ ನೃತ್ಯಕಲಾ ಸಭಾವನ್ನು ಆರಂಭಿಸಿರುವರಲ್ಲದೆ, ಅಮ್ಮತ್ತಿಯ ಕೊಡವ ಸಮಾಜದ ಆಶ್ರಯದಲ್ಲಿ ನೃತ್ಯ ತರಗತಿಗಳನ್ನು ನಡೆಸುತ್ತಿರುವರು. 1986ರಲ್ಲಿ ಇವರ ಸಂಸ್ಥೆಯ ವತಿಯಿಂದ ರಾಜ್ಯಮಟ್ಟದ ಭರತನಾಟ್ಯ ಸ್ಪರ್ಧೆಯು ಏರ್ಪಾಟಾಗಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದು. ಇವರ ಪುತ್ರಿಯರಾದ ಸ್ಮಿತಾ ಸುಬ್ಬಯ್ಯ ಮತ್ತು ಸುಜಾತಾ ಸುಬ್ಬಯ್ಯ ಅವರೂ ಭರತನಾಟ್ಯ ಪ್ರವೀಣೆಯರು. ಸೋಮ ವಾರಪೇಟೆಯ ಸರಸ್ವತಿ ಭರತನಾಟ್ಯ ಕಲಾಶಾಲೆಯೂ ಹಲ ವಾರು ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ನೃತ್ಯ ತರಬೇತಿ ನೀಡಿದೆ.

ಈ ಜಿಲ್ಲೆಯ ನೃತ್ಯಪಟುಗಳು ಮತ್ತು ಪ್ರತಿಭಾವಂತ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಕೆಲವರನ್ನು ಇಲ್ಲಿ ಪ್ರಸ್ತಾಪಿಸ ಬಹುದು. ಮಡಿಕೇರಿ ಭಾರತೀಯ ಸಂಗೀತ ಕಲಾಶಾಲೆಯ ಅಧ್ಯಾಪಕಿ ಮತ್ತು ಅಂಬಳೆ ಸುಬ್ಬರಾಯರ ಪುತ್ರಿ ಕೆ.ಎಸ್. ರಾಜೇಶ್ವರಿ ಮತ್ತು ಈ ಶಾಲೆಯ ಶ್ವೇತಾ ಪ್ರಿಯದರ್ಶಿನಿ ಕೃಷ್ಣಪ್ಪ, ಕರುಣಾ ವಾಸುದೇವ್, ಕಾವೇರಮ್ಮ ಉತ್ತಯ್ಯ, ಪಲ್ಲವಿ ಉತ್ತಯ್ಯ, ಶ್ರೀವಿದ್ಯಾ ರಾಮನ್, ಸ್ವಪ್ನಾ ಮೊದ ಲಾದವರು, ಕೆ.ಎಸ್. ಮಣಿ ಅವರಿಂದ ಉತ್ತೇಜನ ಪಡೆದು

1. ಜಗತ್ತಿಗೊಂದೇ ಕೊಡಗು, ಪು. 220
2. ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ, ಪು. 192

ಭರತನಾಟ್ಯ ಪಟುವಾದ ಜಿ.ಕೆ ಜಗದೀಶ್ (ಜಿ.ಯಸ್. ಕೇಶವಾಚಾರ್ಯ ಅವರ ಮಗ), ಕಮಲಾಕ್ಷಿ ಭಗವಾನ್‌ದಾಸ್ ಅವರ ಪುತ್ರ ಗಿರೀಶ್, ಸೋಮವಾರಪೇಟೆಯ ಎಂ. ಉಮಾ ಮಹೇಶ್ವರಿ, ಎನ್.ಎಸ್. ರಾಜೇಶ್ವರಿ, ಚಿತ್ರಲೇಖಾ-ಚಂದ್ರ ಲೇಖಾ, ಸಿ.ಸಿ. ಸೌಮ್ಯ ದೇಚಮ್ಮ, ಸಿ.ಸಿ. ಶುಭ, ಬಿ.ಎಸ್. ವಿನುತ, ಮಾದಾಪುರದ ಬೀ.ಚಂ. ಶಂಕರ್ ಮೊದಲಾದವರು ನೃತ್ಯಕಲೆಯಲ್ಲಿ ಹೆಸರು ಮಾಡಿದ್ದಾರೆ.

ಜನರಲ್ ತಿಮ್ಮಯ್ಯ ಅವರ ಪತ್ನಿ ನೀನಾ ತಿಮ್ಮಯ್ಯ ಅವರೂ ಭರತನಾಟ್ಯದಲ್ಲಿ ಪ್ರವೀಣೆಯೆನಿಸಿದ್ದರೆಂಬುದನ್ನು ಇಲ್ಲಿ ಸ್ಮರಿಸಬಹುದು. ಮಡಿಕೇರಿಯ ಭಾರತೀಯ ಸಂಗೀತ, ನೃತ್ಯ ಕಲಾಶಾಲೆಯ ಸ್ಥಾಪಕ ಅಂಬಳೆ ಸುಬ್ಬರಾಯರ ಸ್ಮರಣೆಗೆ 1991ರಲ್ಲಿ ಮಡಿಕೇರಿಯಲ್ಲಿ ಆ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿನಿಯರಿಂದ ಆರು ದಿನಗಳ ನೃತ್ಯ ಮತ್ತು ಸಂಗೀತ ಉತ್ಸವವು ನಡೆಯಿತು. ಬ್ರೇಕ್‌ಡ್ಯಾನ್ಸ್‌ಪಟುವೆನಿಸಿರುವ ಬಿ.ಆರ್. ಸುಬ್ರಮಣಿ ಅವರು ಈ ಜಿಲ್ಲೆಯನ್ನು ಪ್ರತಿನಿಧಿಸಿದ್ದಾರೆ. ಮಡಿಕೇರಿಯಲ್ಲಿರುವ ಶ್ರೀಕೃಷ್ಣ ನೃತ್ಯಕಲಾ ಸಂಘವು ಹೆಚ್.ಕೆ. ಪ್ರೇಮಾ ಅವರ ಅಧ್ಯಕ್ಷತೆಯಲ್ಲಿ ಸಕ್ರಿಯವಾಗಿದೆ.

**ಸಂಗೀತ :** ದೀರ್ಘಕಾಲದಿಂದ ಪ್ರವಹಿಸಿದ ಮತ್ತು ಮಾಧುರ್ಯದಿಂದ ಪಕ್ವಗೊಂಡ ಜನಪದ ಸಂಗೀತವು ಕೊಡಗಿನಾದ್ಯಂತ ಪಸರಿಸಿದ್ದಂತೆಯೇ ಶಾಸ್ತ್ರೀಯ ಸಂಗೀತದ ಪರಿಮಳವೂ ಇದ ರೊಡನೆ ಬೆರೆಯಿತು; ಬಹುಬೇಗನೆ ತನ್ನ ಪ್ರಭಾವವನ್ನೂ ಬೀರತೊಡಗಿತು. ಕೊಡಗಿನ ಹಾಲೇರಿ ಅರಸರು ಪಾರಂಪರಿಕ ಸಂಗೀತಕ್ಕೆ ತಕ್ಕ ಸ್ಥಾನ-ಮಾನಗಳನ್ನು ನೀಡಿದ್ದರು. ಚಿಕ್ಕ ವೀರರಾಜೇಂದ್ರ ಒಡೆಯನು ತನ್ನ ಆಸ್ಥಾನದಲ್ಲಿ ಸಂದರ್ಭೋಚಿತವಾಗಿ ವಾದ್ಯಗಳನ್ನು ನುಡಿಸುವುದಕ್ಕೆ ವಾದ್ಯಗಾರರ ತಂಡವನ್ನು ನೇಮಿಸಿಕೊಂಡಿದ್ದನು.[1] ಹಾಗೆಯೇ, ಐರೋಪ್ಯರ ವಾದ್ಯಗೋಷ್ಠಿಯನ್ನೂ ಇರಿಸಿಕೊಂಡಿದ್ದನು. ಈ ವಾದ್ಯ ಗೋಷ್ಠಿಯು ಲಂಡನ್ನಿನ ವಾದ್ಯತಂಡವನ್ನು ಮೀರಿಸುವುದಾಗಿದ್ದಿತೆಂದು ಡಾ॥ ಜೆಫರ್‌ಸನ್ನನು ಹೇಳಿದ್ದಾನೆ.[2]

ಆಧುನಿಕ ಕಾಲದಲ್ಲಿ 'ಕೊಡಗಿನ ಸಂಗೀತ ಪಿತಾಮಹ' ರೆಂತಲೂ ಕರೆಯಲ್ಪಟ್ಟ ಕೆ. ವೆಂಕಟಾದ್ರಿ ಶಾಮರಾಯರು ಈ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಅಡಿಗಲ್ಲನ್ನಿಟ್ಟ ಆದ್ಯರಲ್ಲಿ ಒಬ್ಬರೆನ್ನಬಹುದು. ಮಡಿಕೇರಿಯ ಬ್ರಾಹ್ಮಣರ ಕೇರಿಯು ಸಂಗೀತಾಭ್ಯಾಸಕ್ಕೆ ತವರುಮನೆಯಾಗಿದ್ದಿತು.[3] ಸೋಮವಾರಪೇಟೆ ಮತ್ತು ಕೊಡ್ಲಿಪೇಟೆಗಳಲ್ಲೂ ಸಂಗೀತಕಲೆಗೆ ಉತ್ತೇಜನ ದೊರಕಿತು. ಮಡಿಕೇರಿಯ ಓಂಕಾರೇಶ್ವರ ದೇವಾಲಯದಲ್ಲಿ ಗಾಯನ ಕಾರ್ಯಕ್ರಮ ನೀಡುತ್ತಿದ್ದ ಸುಬ್ಬಣ್ಣ ಮತ್ತು ಅವರ ನಂತರ ಸಂಗೀತ ಕಲೆಯನ್ನು ಮುಂದುವರಿಸಿದ ದತ್ತಾತ್ರೇಯ ಜೋಶಿ, ಕಣಗಾಲು ಕೃಷ್ಣಪ್ಪ ಮೊದಲಾದವರು ಇಲ್ಲಿ ಗಮನಾರ್ಹರು, ಸಂಜೀವರಾಯರು ಹಿಂದೂಸ್ತಾನಿ ಸಂಗೀತದ ವಿದ್ವಾನರೆನಿಸಿದ್ದು, ಈ ಪದ್ಧತಿಯನ್ನು ಜನಪ್ರಿಯಗೊಳಿಸಲೆತ್ನಿಸಿದರು.

ಆರಂಭದಲ್ಲಿ ಮಡಿಕೇರಿಯ ಪುಟ್ಟಮಾಡ, ಚಾಮರಾಜ್, ಇತ್ಯಾದಿ ಕುಟುಂಬಗಳವರು ಸಂಗೀತ ಕಲಿಕೆಯತ್ತ ತಮ್ಮ ಆಸಕ್ತಿವಹಿಸಿದ್ದು, ಸುಮಾರು 1848ರಿಂದೀಚೆಗೆ ಕೊಡಗಿನ ದಿವಾನ ಮುಂಡೇಪಂಡ ತಿಮ್ಮಯ್ಯ ಅವರ ಮಗ ಇನ್ಸ್‌ಪೆಕ್ಟರ್ ಸೋಮಣ್ಣ ಅವರು ತಮ್ಮ ಮಗಳಿಗೆ ಸಂಗೀತವನ್ನು ಕಲಿಸುವಲ್ಲಿ ಆಸಕ್ತಿ ವಹಿಸಿದರು. ಆ ನಂತರ ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪ ಅವರ ಶಿಷ್ಯರಾಗಿದ್ದ ಕೋಣಗೇರಿಯ 'ಕೂರ್ಗ್‌ಸ್ಟಾರ್' ಚಕ್ಕೇರ ಅಪ್ಪಯ್ಯ ಅವರು ಸಂಗೀತ ಪಾಠವನ್ನು ಹೇಳುವುದರಲ್ಲಿ ಆಸಕ್ತಿ ವಹಿಸಿದರು. ಕೊಡವರಲ್ಲಿ ಡಾ॥ ಪಾಂಡಂಡ ಸೋಮಪ್ಪ ಸಹೋದರ-ಸಹೋದರಿಯರು, ಬಿದ್ದಂಡ ಅಯ್ಯಪ್ಪ ಅವರ ಪುತ್ರಿಯರು, ಕೋಟೆರ ಮುತ್ತಣ್ಣ ಹಾಗೂ ಚಿಣ್ಣಪ್ಪ ಅವರುಗಳ ಮಕ್ಕಳು, ಹೀಗೆ ಹಲವಾರು ಕುಟುಂಬಗಳವರು ಶಾಸ್ತ್ರೀಯ ಸಂಗೀತದ ಕಲಿಕೆಯಲ್ಲಿ ಆಸಕ್ತಿ ತೋರಿದರು.

ಸುಮಾರು 25 ವಿದ್ಯಾರ್ಥಿನಿಯರಿಗೆ ತರಬೇತಿ ನೀಡಿ 1945 ರಿಂದ 1950ರ ವರೆಗೆ ಮಡಿಕೇರಿಯಿಂದ ಮದರಾಸಿನ ಸಂಗೀತ ಪರೀಕ್ಷೆಗೆ ಪ್ರಥಮವಾಗಿ ಕಳುಹಿಸಿ ಕೊಟ್ಟವರೆಂದರೆ ವಿದ್ವಾನ್ ಚಕ್ರಕೋಡಿ ನಾರಾಯಣಶಾಸ್ತ್ರಿ. ಇವರು ಬಿ. ದೇವೇಂದ್ರಪ್ಪ ಅವರ ಶಿಷ್ಯರಲ್ಲೊಬ್ಬರು. ಜೂನಿಯರ್ ಮತ್ತು ಸೀನಿಯರ್-ಈ ಎರಡು ಪರೀಕ್ಷೆಗಳಲ್ಲೂ ಕೋಟೆರ ಅಕ್ಕಮ್ಮ ಅವರು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ

1. ಕೊಡಗಿನ ಇತಿಹಾಸ, ಪು. 593
2. ಕೂರ್ಗ್ ಅಂಡ್ ಇಟ್ಸ್ ರಾಜಾಸ್, ಪು. 40
3. ಜಗತ್ತಿಗೊಂದೇ ಕೊಡಗು, ಪು. 219

ಹೊಂದಿರುದು ಗಮನೀಯವಾದುದು. ಚಕ್ರಕೋಡಿ ನಾರಾಯಣಶಾಸ್ತ್ರಿ ಅವರ ತರುವಾಯ ಎಮ್. ಆನಂದರಾವ್ ಅವರು ಮಡಿಕೇರಿಯಲ್ಲಿ ಸಂಗೀತ ಪಾಠವನ್ನು ಮುಂದುವರಿಸಿದರು. 1955ರಲ್ಲಿ ಕೊಡಗಿನಲ್ಲಿ ಸಂಗೀತ ಅಕಾಡೆಮಿಯ ಉದ್ಘಾಟನೆಯ ತರುವಾಯ ವೈ. ಎನ್. ಶ್ರೀನಿವಾಸಮೂರ್ತಿ ಅವರು ಮಡಿಕೇರಿಯಲ್ಲಿ ಸಂಗೀತ ಪಾಠವನ್ನು ಬೋಧಿಸಿದರು. ಈ ಅಕಾಡೆಮಿಯಲ್ಲಿ ಸಂಗೀತ ಶಿಕ್ಷಕರಾಗಿ ನೇಮಕಗೊಂಡವರೆಂದರೆ ವೈ. ಎನ್. ಕೃಷ್ಣಮೂರ್ತಿ ಮತ್ತು ಅರಕೆರೆ ನಾರಾಯಣರಾಯರು. ಡಾ॥ ಪಾಂಡಂಡ ಸೋಮಪ್ಪ ಅವರ ಪುತ್ರಿ ಗೌರಮ್ಮ, ಬಿದ್ದಂಡ ಅಯ್ಯಪ್ಪ ಅವರ ಪುತ್ರಿ ಸೀತಮ್ಮ ಮತ್ತು ವೆಂಕಟಸುಬ್ಬರಾಯರ ಪುತ್ರಿ ನಿರುಪಮಾ ಅವರುಗಳು ಸಂಗೀತದ ಪದವೀಧರರು. ಪೊನ್ನಂಪೇಟೆಯ ನಿರ್ಮಲಾ, ಕುಟ್ಟಂಡ ರಾಜಾರಾಂ ಹಾಗೂ ಚಕ್ಕೇರ ಅಪ್ಪಯ್ಯ ಅವರ ಮಗ ತ್ಯಾಗರಾಜ್ ಅವರುಗಳು ಜನರಲ್ಲಿ ಸಂಗೀತ ಕಲೆಯ ಅಭಿರುಚಿ ಮೂಡಿಸುವಲ್ಲಿ ಪ್ರಯತ್ನಶೀಲರಾಗಿರುವರು. ಯು. ಕೆ. ಮಂಜುನಾಥಯ್ಯ, ವಿದ್ವಾನ್ ರಾಮಕೃಷ್ಣಯ್ಯ ಮೊದಲಾದವರು ಸಂಗೀತ ವಿದ್ವಾಂಸರು.

ಅಂಬಳೆ ಸುಬ್ಬರಾಯರ ಪುತ್ರಿಯರಾದ ಕೆ. ಎಸ್. ಭಾರತಿ ಮತ್ತು ಕೆ. ಎಸ್. ರಾಜೇಶ್ವರಿ ಅವರುಗಳು ಸಂಗೀತದಲ್ಲಿ ಪರಿಶ್ರಮ ಹೊಂದಿರುವರು. ಮಡಿಕೇರಿಯ ಸುಧಾ ಶ್ರೀಧರ್ ಅವರು ಕರ್ನಾಟಕ ಸಂಗೀತದಲ್ಲಿ ನುರಿತಿದ್ದು, ಆ ಕುರಿತು ಬೋಧಿಸುತ್ತಿದ್ದಾರೆ. ಸಂಗೀತ ವಿದ್ವಾಂಸರನ್ನು ಪೋಷಿಸಿ ಪ್ರೋತ್ಸಾಹಿಸಿದವರಲ್ಲಿ ಮಡಿಕೇರಿಯಲ್ಲಿ ಮುನ್ಸೀಫರಾಗಿದ್ದ ಜಿ. ನಾರಾಯಣರಾಯರು, ಅಡ್ವೊಕೇಟ್ ಕೆ. ಸುಬ್ಬರಾಯರು, ಕಮೀಶನರ್ ಆಫೀಸ್ ಮ್ಯಾನೇಜರ್ ಹೆಚ್. ಚೆನ್ನಿಗರಾಯರು, ಜನರಲ್ ತಿಮ್ಮಯ್ಯ ಅವರ ತಂದೆ ಕೊಡಂದೇರ ತಿಮ್ಮಯ್ಯ ಮೊದಲಾದವರು ಮುಖ್ಯರಾಗಿದ್ದರು. ಇವರಲ್ಲದೆ, ಕೊಡಗಿನವರಲ್ಲದ ಸಂಗೀತ ವಿದ್ವಾಂಸರಲ್ಲಿ ಮೈಸೂರು ಮಹಾರಾಜರಿಂದ ಬಂಗಾರದ ರುದ್ರಾಕ್ಷಿ ಮಾಲೆಯನ್ನು ಬಹುಮಾನವಾಗಿ ಪಡೆದ ಪಾಲಕ್ಕಾಡು ಈಶ್ವರ ಭಾಗವತರು ಪ್ರತೀ ವರುಷವೂ ತುಲಾ ಸಂಕ್ರಮಣ ಕಾಲದಲ್ಲಿ ಭಾಗಮಂಡಲದಲ್ಲಿ ಒಂದು ತಿಂಗಳು ಕಾಲ ಕಾವೇರಮ್ಮನಿಗೆ ತಮ್ಮ ಸಂಗೀತ ಸೇವೆ ಸಲ್ಲಿಸುತ್ತಿದ್ದರು. ಮಡಿಕೇರಿಯಲ್ಲಿಯೂ ಒಂದು ತಿಂಗಳು ಕಾಲ ತಂಗಿದ್ದು, ಅಪೇಕ್ಷಿಸಿದವರಿಗೆ ಅವರು ಬಯಸಿದ ಕೀರ್ತನೆಗಳನ್ನು ಹೇಳಿಕೊಡುತ್ತಿದ್ದರು. ವೀರರಾಜಪೇಟೆಯಲ್ಲಿ ಸಂಗೀತ ರಂಜಿನಿ ಸಭಾ ಎಂಬ ಸಂಸ್ಥೆ ಇದ್ದಿತೆಂದು ತಿಳಿದುಬರುತ್ತದೆ.

ಶಾಸ್ತ್ರೀಯ ಹಾಡುಗಾರಿಕೆಯೊಡನೆ ವಾದ್ಯ ಸಂಗೀತದಲ್ಲಿ ಪಳಗಿದವರನ್ನೂ ಇಲ್ಲಿ ಪ್ರಸ್ತಾಪಿಸಬಹುದು. ಕೆ. ವೆಂಕಟಾದ್ರಿ ಶಾಮರಾಯರ ರತ್ನಾವಳಿ ನಾಟಕ ಕಂಪೆನಿಯಲ್ಲಿ ಸಹಕರಿಸಿದವರೂ ಆದ ಸಂಗೀತಗಾರ ಸುಬ್ಬಣ್ಣ (ಪಿಟೀಲು ಸುಬ್ಬಣ್ಣ) ಅವರು ಪಿಟೀಲುವಾದನದಲ್ಲಿ ವಿದ್ವಾಂಸರಾಗಿದ್ದು, ಹಲವಾರು ಜನರಿಗೆ ಈ ವಾದನದಲ್ಲಿ ತರಬೇತಿ ನೀಡಿದರು. ಬೆಟ್ಟದಪುರದ ವೆಂಕಟರಮಣ ಅವರು ವೀಣೆಯನ್ನು ಕಲಿಸುತ್ತಿದ್ದರು. 1848 ರಿಂದ 1856ರ ವರೆಗೆ ಕೊಡಗಿನ ದಿವಾನರಾಗಿದ್ದ ಮಂಡೇಪಂಡ ತಿಮ್ಮಯ್ಯ ಅವರು ಪಿಟೀಲು ವಾದನದಲ್ಲಿ ತರಬೇತಿ ಹೊಂದಿದ್ದರೆ, 'ಕೂರ್ಗ್‌ಸ್ಟಾರ್' ಚಕ್ಕೇರ ಅಪ್ಪಯ್ಯ ಅವರು ಹಾರ್ಮೋನಿಯಂ ಮತ್ತು ವೀಣೆ ಪಾಠ ಮಾಡುತ್ತಿದ್ದರು. ಬಿಡಾರಂ ಕೃಷ್ಣಪ್ಪ ಅವರ ಶಿಷ್ಯರುಗಳಾದ ಆರ್. ರಾಮಕೃಷ್ಣಯ್ಯ ನಾಯ್ಡು ಮತ್ತು ಎ. ನಾರಾಯಣಸ್ವಾಮಿ ನಾಯ್ಡು ಹಾಗೂ ಕೊಡಗಿನ ಅರಣ್ಯಾಧಿಕಾರಿಯಾಗಿದ್ದ ರಂಗಸ್ವಾಮಿ ಅಯ್ಯಂಗಾರ್ಯರು ಪ್ರಸಿದ್ಧ ಪಿಟೀಲು ವಿದ್ವಾಂಸರಾಗಿದ್ದರು. ಇವರಲ್ಲದೆ, ಕೊಡಗು ಸರಕಾರದ ಸಂಗೀತ, ನೃತ್ಯ ಮತ್ತು ನಾಟಕ ಅಕಾಡೆಮಿಯಲ್ಲಿ ದಾಸಪ್ಪ ಅವರು ಪಿಟೀಲಿಗೂ ಎಂ. ಎಸ್. ಶೇಷಪ್ಪ ಅವರು ಮೃದಂಗಕ್ಕೂ ಶಿಕ್ಷಕರಾಗಿದ್ದರು.

ವಾದ್ಯ ಸಂಗೀತದಲ್ಲಿ ನಿಪುಣರಾದ ಈಚಿನ ಕಲಾವಿದರಲ್ಲಿ ಸೋಮವಾರಪೇಟೆಯ ದಾಮೋದರ್ (ಕೊಳಲು), ಶ್ರೀಕಂಠಯ್ಯ (ತಬಲ), ಶನಿವಾರಸಂತೆಯ ರಾಜಣ್ಣ (ಹಾರ್ಮೋನಿಯಂ), ಹೊಸಗುತ್ತಿ ಗ್ರಾಮದ ಮಂಜುನಾಥಾಚಾರ್ (ಹಾರ್ಮೋನಿಯಂ), ಚಿಕ್ಕಭಂಡಾರದ ಕೃಷ್ಣಾಚಾರ್ (ತಬಲ), ಮಡಿಕೇರಿಯ ಅಂಬಳೆ ಸುಬ್ಬರಾಯರ ಪುತ್ರ ಕೆ. ಎಸ್. ಶಿವಪ್ರಸಾದ್ (ಮೃದಂಗ, ತಬಲ) ಹಾಗೂ ಎ. ಪಿ. ಶ್ರೀನಿವಾಸ್ (ವೀಣೆ), ಎ. ವಿ. ಪ್ರಕಾಶ್ (ಕೊಳಲು) ಮೊದಲಾದವರನ್ನು ಪ್ರಸ್ತಾಪಿಸಬಹುದು. ಅಲ್ಲದೆ, ಸುಧಾ ಶ್ರೀಧರ್, ಜಯಲಕ್ಷ್ಮಿ ರಮೇಶ್, ಸಿದ್ಧರಾಮು, ಎಂ. ಎಂ. ಲಿಯಾಕತ್ ಆಲಿ, ಮುರುಗೇಶ್, ನಿರ್ಮಲಾ ನಾಚಪ್ಪ, ಮಡಿಕೇರಿ ರಾಘವೇಂದ್ರ ಮೊದಲಾದವರು ಸುಗಮ ಸಂಗೀತದಲ್ಲಿ ಹೆಸರು ಮಾಡಿರುವರು. ಪಾಪ್ ಸಂಗೀತದಲ್ಲಿ ಅಂತರ ರಾಷ್ಟ್ರೀಯ ಖ್ಯಾತಿ ಪಡೆದವರು ಮಂದಣ್ಣ (ಬಿಡ್ಡೂ) ಅವರು. ಚೆಪ್ಪುಡೀರ ಪಿ. ಅಯ್ಯಪ್ಪ (ಕಿಟ್ಟು) ಅವರು ಆರಂಭಿಸಿದ ಸಂಗೀತ ಕಲಾ ಸಂಘವು ವೀರರಾಜಪೇಟೆ ಕರ್ನಾಟಕ ಸಂಘದಲ್ಲಿ ತನ್ನ ಅಸ್ತಿತ್ವ ಪಡೆದಿದೆ.

ಕೊಡವ ಹಾಡುಗಳನ್ನು ಜನಪ್ರಿಯಗೊಳಿಸುವಲ್ಲಿ ಕ್ಯಾಸೆಟ್‌ಗಳ ಬಳಕೆಯು ಪರಿಣಾಮಕಾರಿ ಪ್ರಯೋಜನವನ್ನು ಉಂಟು ಮಾಡುತ್ತಿದೆ. ಡಾ|| ಐ. ಮಾ. ಮುತ್ತಣ್ಣ ಅವರು ಕೊಡವರ ಹಬ್ಬ, ಮದುವೆ, ಸಾವು, ಕಾವೇರಿ ಸಂಕ್ರಮಣ, ಹುತ್ತರಿ ಹಾಡು, ಗಾದೆಗಳು, ಕೊಡವ ಭಾಷೆಗೆ ಅನುವಾದಿಸಲ್ಪಟ್ಟ ಗೋವಿನ ಹಾಡು ಹಾಗೂ ಅಪ್ಪಚ್ಚ ಕವಿಯ ಹಾಡುಗಳು ಮತ್ತು ನಾಟಕದ ಹಾಡುಗಳನ್ನು 'ಕೊಡವ ಜನಪದ ಹಾಡುಗಳು' ಶೀರ್ಷಿಕೆಯಲ್ಲಿ ಹಾಡಿಸಿ ಕ್ಯಾಸೆಟ್ ರೂಪದಲ್ಲಿ ಹೊರ ತಂದಿರುವರು. ಕೊಡವ ಭಾಷೆಯಲ್ಲಿರುವ ಉಮ್ಮತ್ತಾಟ್ ಮತ್ತು ಹರದಾಸ ಅಪ್ಪಚ್ಚ ಕವಿಯ ಹಾಡುಗಳು ಜನಪ್ರಿಯಗೊಳ್ಳಲು ಈ ಕ್ಯಾಸೆಟ್‌ಗಳಿಂದ ಸಾಧ್ಯವಾಗಿದೆ. ವೀರರಾಜಪೇಟೆಯ ಸಂಗೀತ ಕಲಾಸಂಘದ ಕಾಣಿಕೆಗಳಾದ ಹಾಗೂ ಕೊಡವ ಭಾಷೆಯಲ್ಲಿರುವ 'ಮಾಡರ್ನ್ ಕೊಡವ ಸಾಂಗ್ಸ್', 'ಪುದಿಯ ಕೊಡವ ಪಾಟ್', 'ಪ್ರೇಮ ಸಂಗಮ' ಮೊದಲಾದವು ಕೊಡಗಿನಲ್ಲಿ ದಾಖಲೆ ಮಾಡಿರುವಂತಹವು. ಗೋಣಿಕೊಪ್ಪಲಿನ ಮನೆಯಪಂಡ ಹರೀಶ್ ನಾಚಪ್ಪ ಅವರ ಸಾಹಿತ್ಯದೊಡನೆ ವೀರರಾಜಪೇಟೆಯ ಸುಚಿತ್ರಾ ಸೋಮಯ್ಯ, ಮುಲ್ಲೇರ ಜಿಮ್ಮಿ ಮುತ್ತಪ್ಪ (ಜಿಮ್ಮಿ), ವೇಣು ಮತ್ತು ಅಬ್ರಹಾಂ ಅವರುಗಳ ಕಂಠದಲ್ಲಿ ಇವು ಹೊರಬಂದಿವೆ. ಹೆಚ್. ಎಸ್. ಪುಟ್ಟಯ್ಯ ಮತ್ತು ತಂಡದವರ 'ಸೌಂಡ್ಸ್ ಆಫ್ ಕೂರ್ಗ್' ಸಹಾ ಉಲ್ಲೇಖನೀಯ.

ಮೂರು ಭಾಗಗಳಲ್ಲಿರುವ 'ಕೊಡವ ವಾಲಗ' ಎಂಬುದು ಕೊಡವರ ಸಾಂಪ್ರದಾಯಿಕ ಸಂಗೀತವನ್ನು ಒಳಗೊಂಡಿದೆ. ವೀರರಾಜಪೇಟೆ ತಾಲೂಕು ನೆಲಜಿಯ ತೋಲಂಡ ನಾಣಯ್ಯ ಚಂಗಪ್ಪ (ತೋನಾಚಂ) ಅವರು ಸಾಹಿತ್ಯ ರಚನೆಯೊಡನೆ ತಮ್ಮ ಪತ್ನಿ ಪ್ರಭಾ ಚಂಗಪ್ಪ ಅವರೊಂದಿಗೆ ಹಾಡಿ ಹೊರ ತಂದಿರುವ ಕೊಡವಭಾಷಾ ಕ್ಯಾಸೆಟ್‌ಗಳೆಂದರೆ 'ಚಂಗ್ರಾಂದಿ', 'ಪೊನ್ನಿಗುತ್ತಪ್ಪ' ಮತ್ತು 'ಚಂದೂಕ'. ಕಳ್ಳಿಚಂಡ ಸುತಾ ದೇವಯ್ಯ ಅವರು ಬಿಡುಗಡೆ ಮಾಡಿರುವ 'ನಾ ಬಯಂದ ಪೂವ್' ಕ್ಯಾಸೆಟ್ ಸಹಾ ಕೊಡವ ಭಾಷೆಯಲ್ಲಿದೆ. ಶರೀಫ್ ಲೈವ್ ಕ್ಯಾಸೆಟ್ಸ್ ಸಂಸ್ಥೆಯು ಹೊರತಂದ ಮತ್ತು ಮೊಟ್ಟ ಮೊದಲ ಬ್ಯಾರಿ ಭಾವಗೀತೆಗಳ ಸಂಗ್ರಹವಾದ 'ಪುದಿಯೊ ಬ್ಯಾರಿ ಪಾಟ್' (ಆಧುನಿಕ ಬ್ಯಾರಿ ಹಾಡುಗಳು) ಕ್ಯಾಸೆಟ್‌ಗಾಗಿ ಬ್ಯಾರಿ ಭಾಷೆಯ ಹಾಡುಗಳನ್ನು ರಚಿಸಿಕೊಟ್ಟಿರುವವರು ಮಡಿಕೇರಿಯ ಬಿ. ಎ. ಷಂಶುದ್ದೀನ್ ಅವರು. ಇತರ ಗಾಯಕರೊಡನೆ ಲಿಯಾಕತ್ ಅಲಿ ಅವರು ಸಹಾ ಈ ಕ್ಯಾಸೆಟ್‌ಗೆ ತಮ್ಮ ಕಂಠದಾನ ಮಾಡಿರುವರು.

### ಗಮಕ ಮತ್ತು ಕೀರ್ತನೆ

ಗಮಕ ಮತ್ತು ಕೀರ್ತನ ಕ್ಷೇತ್ರಗಳಿಗೆ ಕೊಡಗು ಜಿಲ್ಲೆಯ ಕಾಣಿಕೆಯೂ ಸಂದಿದೆ. ಕೊಡಗಿನ ಆದಿಕವಿಯೆಂದು ಪ್ರಸಿದ್ಧರಾದ ಅಪ್ಪನೆರವಂಡ ಅಪ್ಪಚ್ಚಕವಿಗಳು ದೇವರನಾಮಗಳನ್ನು ರಚಿಸಿ ಹಾಡುವುದರಲ್ಲಿ ಆಸಕ್ತಿ ವಹಿಸಿದ್ದರಲ್ಲದೆ, ಸ್ವಲ್ಪಕಾಲ ಭಗವತ್‌ಸೇವೆಯಲ್ಲಿ ತೊಡಗಿದ್ದು ಹರಿಕಥಾ ಕಾಲಕ್ಷೇಪ ಕೈಗೊಂಡಿದ್ದರೆಂಬುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಈಚೆಗೆ ಕಾವ್ಯರಚನೆ ಮತ್ತು ಕಾವ್ಯವಾಚನದಲ್ಲಿ ಹೆಸರು ಮಾಡಿದವರಲ್ಲಿ ಮತ್ತು ಗಮಕ ಕಲೆಯನ್ನು ಕೊಡಗಿನಾದ್ಯಂತ ಜನಪ್ರಿಯಗೊಳಿಸಿದವರಲ್ಲಿ ಎಂ. ಎಸ್. ಅನಂತಪದ್ಮನಾಭರಾವ್ ಅವರು ಮುಖ್ಯರೆನಿಸಿದ್ದಾರೆ. ಇವರು 1943ರಲ್ಲಿ ತಮ್ಮ ಮನೆಯಲ್ಲಿ ಪ್ರಾರಂಭಿಸಿದ ಗಮಕ ಶಿಕ್ಷಣ ತರಗತಿಗಳನ್ನು 1960ರ ವರೆಗೂ ಅವ್ಯಾಹತವಾಗಿ ನಡೆಸಿಕೊಂಡು ಬಂದರು. ಈ ಜಿಲ್ಲೆಯ ಉದ್ದಗಲಕ್ಕೂ ಗಮಕ ಕಾರ್ಯಕ್ರಮಗಳನ್ನು ನೀಡಿರುವುದು ಅನಂತಪದ್ಮನಾಭರಾವ್ ಅವರ ಹೆಗ್ಗಳಿಕೆ. ಇವರ ಶಿಷ್ಯರಲ್ಲಿ ಪ್ರಸಿದ್ಧ ಸಾಹಿತಿಯೂ ಗಮಕಿಯೂ ಆದ ಬಿ. ಎಸ್. ಗೋಪಾಲಕೃಷ್ಣ ಅವರು ಗಮಕ ಕಲೆಯನ್ನು ಜನಪ್ರಿಯಗೊಳಿಸುವಲ್ಲಿ ಮತ್ತು ಮಡಿಕೇರಿಯ ಕರ್ನಾಟಕ ಸಂಘದಲ್ಲಿ ಗಮಕ ತರಗತಿಗಳನ್ನು ನಡೆಸುವಲ್ಲಿ ಶ್ರಮವಹಿಸಿರುವರು. ಇವರೇ ಅಲ್ಲದೆ, ಕೋಟೆರ ಮೇದಪ್ಪ, ರಾಜಲಕ್ಷ್ಮಿ, ವಿದ್ವಾನ್ ಟಿ. ಕೇಶವಭಟ್, ಪ್ರಮೀಳಾ ವೆಂಕೋಬರಾವ್, ಚಂದ್ರಯ್ಯ ಮೊದಲಾದವರು ಸಹಾ ಗಮಕ ವಾಚನ ಮತ್ತು ಪ್ರಚಾರ ಕಾರ್ಯಗಳನ್ನು ರೂಢಿಸಿಕೊಂಡು ಬಂದಿರುವರು. ಸಂಗೀತ, ಜಾನಪದ, ನಾಟಕ ಮತ್ತು ನೃತ್ಯಕಲೆಗಳ ಅಭಿವೃದ್ಧಿಗೂ ದುಡಿದಿರುವ ಮಡಿಕೇರಿಯ ವಿದ್ವಾನ್ ಅಂಬಳೆ ಸುಬ್ಬರಾವ್ ಅವರು ಕೀರ್ತನಕಾರರೂ ಗಮಕಿಗಳೂ ಆಗಿದ್ದರಲ್ಲದೆ, ಕರ್ನಾಟಕ ಗಮಕ ಕಲಾ ಪರಿಷತ್ತಿನ ಕೊಡಗು ಜಿಲ್ಲಾ ಪ್ರತಿನಿಧಿಗಳಾಗಿಯೂ ಸೇವೆ ಸಲ್ಲಿಸಿದ್ದರು. ವೀರರಾಜಪೇಟೆ ತಾಲೂಕು ಬಾಳೆಲೆಯ ಗೋಪಾಲದಾಸ್ ಅವರು ಹರಿಕಥೆ ವಿದ್ವಾಂಸರಾಗಿಯೂ ಎಂ. ಎಸ್. ರಾಮದೇವ ಅವರು ಗಮಕಿಗಳಾಗಿಯೂ ಹೆಸರು ಮಾಡಿದ್ದಾರೆ.

## ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಘ–ಸಂಸ್ಥೆಗಳು

ಕೊಡಗಿನಾದ್ಯಂತ ಪಸರಿಸಿರುವ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಘ–ಸಂಸ್ಥೆಗಳು ಈ ಜಿಲ್ಲೆಯ ಜನಜೀವನದ ಉತ್ಸಾಹ–ಹುಮ್ಮಸ್ಸುಗಳನ್ನು ಹೆಚ್ಚಿಸುವಲ್ಲಿ ಮತ್ತು ಬೌದ್ಧಿಕ ಪ್ರತಿಭೆ–ಪ್ರಗತಿಗಳನ್ನು ಪ್ರೋತ್ಸಾಹಿಸುವಲ್ಲಿ ಪರಿ

ಕಾಮಕಾರಿ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ. ಮದುವೆ-ಮುಂಜಿ, ಹಬ್ಬ-ಉತ್ಸವ ಮುಂತಾದ ಸಂದರ್ಭಗಳಲ್ಲಿ ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ತಪ್ಪದೆ ಏರ್ಪಡಾಗುತ್ತಿದ್ದರೂ ಇಂತಹ ಕಾರ್ಯಕ್ರಮಗಳೊಂದಿಗೆ ಕ್ರಮೇಣ ಸಾಹಿತ್ಯಿಕ ಸಂದರ್ಭಗಳೂ ಸಮ್ಮಿಳಿತವಾಗಿ ಅವುಗಳಿಗೆ ಶೈಕ್ಷಣಿಕ ಮಹತ್ವವನ್ನು ತಂದುಕೊಟ್ಟವೆನ್ನಬಹುದು. ಗ್ರಂಥರಚನೆ, ಕಾವ್ಯವಾಚನ, ಇತ್ಯಾದಿಗಳು ಕಳೆದ ಶತಮಾನದಲ್ಲೆ ಸಾಕಷ್ಟು ಪ್ರಚಲಿತವಿದ್ದರೂ ಮುಖ್ಯವಾಗಿ, ಗಮನಾರ್ಹ ಸಾಹಿತ್ಯಿಕ ಚಟುವಟಿಕೆಗಳು ಕೊಡಗಿನಲ್ಲಿ ಈ ಶತಮಾನದ ಆದಿಯಿಂದ ವ್ಯವಸ್ಥಿತವಾಗಿ ಆರಂಭಗೊಂಡುವೆನ್ನಬಹುದು. ಕೊಡಗಿನ ವೃತ್ತಪತ್ರಿಕೆಗಳು ಸಹಾ ಈ ದಿಸೆಯಲ್ಲಿ ಅಮೂಲ್ಯ ಸೇವೆ ಸಲ್ಲಿಸಿವೆ.

ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮಡಿಕೇರಿಯಲ್ಲಿ 1916ರಲ್ಲಿ ಹುಟ್ಟಿಕೊಂಡ ವೇದಾಂತ ಸಂಘವೇ ಈ ಜಿಲ್ಲೆಯ ಮೊದಲನೇಯ ಸಂಘವೆನ್ನಬಹುದು. ಇದು ಧಾರ್ಮಿಕ ಸಾಹಿತ್ಯ ಪ್ರಚಾರಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿತು. ಇದಕ್ಕೆ ಮುನ್ನ ಮಡಿಕೇರಿಯಲ್ಲಿ ಆಂಜನೇಯ ದೇವಾಲಯ ಮತ್ತು ಮಹದೇವಪೇಟೆಯ ಕನ್ನಿಕಾಪರಮೇಶ್ವರಿ ದೇವಾಲಯಗಳಲ್ಲಿ ನಡೆಯುತ್ತಿದ್ದ ರಾಮೋತ್ಸವಗಳು ಧಾರ್ಮಿಕ ಕ್ರಿಯಾ ವೇದಿಕೆಗಳೆನಿಸಿದ್ದವು. ಮಡಿಕೇರಿಯಲ್ಲಿ ಉಪಾಧ್ಯಾಯರಾಗಿದ್ದ ಮೊರಾಜೆ ಶಂಕರನಾರಾಯಣರಾಯರು ಸ್ಥಾಪಿಸಿದ ವೇದಾಂತ ಸಂಘದ ಹಿನ್ನೆಲೆಯಲ್ಲಿ ಅಲ್ಲಿಯವರೇ ಆದ ಎ. ಕಾಳಮ್ಮಯ್ಯ, ಅಮ್ಮೆಂಬಳ ರಾಮರಾವ್, ಎಂ. ಎಸ್. ಮಂದಣ್ಣ, ಸಿ. ತಿಮ್ಮಯ್ಯ, ಪಳಂಗಂಡ ಅಪ್ಪಯ್ಯ, ಬೇನಿಸಿಂಗ್ ಮೊದಲಾದ ಅಧಿಕಾರಿ ವರ್ಗದವರೂ ಸಾರ್ವಜನಿಕ ಸೇವಾಸಕ್ತರೂ ಸಕ್ರಿಯ ಪಾತ್ರ ವಹಿಸಿದರು. ಬಂಗಾಳದ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಸ್ವಾಮಿಗಳಾದ ವೀರೇಶ್ವರಾನಂದಜಿ ಹಾಗೂ ಸ್ವಾಮಿಗಳಾದ ನಿರ್ಮಲಾನಂದಜಿ, ವಿಮಲಾನಂದಜಿ, ಪ್ರಣವೇಶಾನಂದಜಿ, ಯತೀಶ್ವರಾನಂದಜಿ ಇವರೇ ಮೊದಲಾದ ಪ್ರಮುಖ ಗುರುಗಳು ಧರ್ಮ ಪ್ರಚಾರಕ್ಕಾಗಿ ಕೊಡಗಿಗೆ ಬಂದು ಹೋದರು.

ಇದಲ್ಲದೆ, ಕೇವಲ ಸಾಹಿತ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸುಮಾರು 1927-28ರ ಅವಧಿಯಲ್ಲಿ ಮಡಿಕೇರಿಯ ಸಿ. ಎಸ್. ವೆಂಕಪ್ಪಯ್ಯನವರ ಮನೆಯಲ್ಲಿ ಪ್ರಾರಂಭಿಸಲ್ಪಟ್ಟ ಕನ್ನಡ ವಾಙ್ಮಯ ಸಂಘವೇ ಮೊದಲನೇಯದೆನ್ನಬಹುದು. ಕೋಡಿ ಮಣಿಯಂಡ ಸುಬ್ಬಯ್ಯ, ಬಿ. ಟಿ. ಗೋಪಾಲಕೃಷ್ಣ ಮತ್ತು ಮೈ. ಶೇ. ಅನಂತಪದ್ಮನಾಭರಾವ್ ಅವರುಗಳೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಧಾರವಾಡದ ಕವಿ ಶ್ರೀಧರ ಖಾನೋಳ್ಕರ ಅವರೂ ಈ ಸಂಘಕ್ಕೆ ಭೇಟಿ ಇತ್ತಿದ್ದರು. ಸ್ವಲ್ಪ ಕಾಲಾನಂತರ ಈ ಸಂಘದ ಚಟುವಟಿಕೆಗಳು ನಿಂತುಹೋದವು.

ಮಡಿಕೇರಿಯಲ್ಲಿ 1932ರಲ್ಲಿ ಸಮಾವೇಶಗೊಂಡ 18ನೇಯ ಕನ್ನಡ ಸಾಹಿತ್ಯ ಸಮ್ಮೇಳನವು ಕೊಡಗಿನಲ್ಲಿ ಸಾಹಿತ್ಯ ಸಂಘಗಳ ಮರುಹುಟ್ಟಿಗೆ ನಾಂದಿ ಹಾಡಿತು. ಡಾ|| ಡಿ.ವಿ. ಗುಂಡಪ್ಪ ಅವರು ಅಧ್ಯಕ್ಷರಾಗಿದ್ದ ಈ ಸಾಹಿತ್ಯ ಸಮ್ಮೇಳನದಲ್ಲಿ ಕೊಡಗಿನ ಪಾಲೇಕಂಡ ಮೇದಪ್ಪ ಪೂವಮ್ಮ, ಬಿ. ಎಸ್. ಕುಶಾಲಪ್ಪ, ನ. ಚಿ. ಸುಬ್ಬಯ್ಯ, ಟಿ.ಎಂ. ಕಾರ್ಯಪ್ಪ ಮೊದಲಾದ ಲೇಖಕ–ಲೇಖಕಿಯರೂ ಪಾಲ್ಗೊಂಡಿದ್ದರಲ್ಲದೆ, ಸಮ್ಮೇಳನದ ಕಾರ್ಯಕಲಾಪಗಳು ಮಡಿಕೇರಿಯ ಕವಿ ಜಿ. ಶ್ರೀನಿವಾಸಮೂರ್ತಿ ಅವರ "ಬನ್ನಿರಿ ಕರ್ನಾಟಕ ಬಂಧುಗಳೇ" ಎಂಬ ಸ್ವರಚಿತ ಗೀತೆಯೊಂದಿಗೆ ಆರಂಭಗೊಂಡುದು ಉಲ್ಲೇಖಾರ್ಹ. ಸಮ್ಮೇಳನದ ಸ್ಮಾರಕಾರ್ಥವಾಗಿ ಓಡ್ಲಮನೆ ಆತ್ಮಾರಾಮಶಾಸ್ತ್ರಿ ಅವರು ಸಂಪಾದಿಸಿದ 'ಕೊಡಗಿನ ಕಾಣಿಕೆ' ಸಂಗ್ರಹಕೃತಿಯೂ ಬಿಡುಗಡೆ ಹೊಂದಿತು. ಡಾ|| ಡಿ. ವಿ. ಗುಂಡಪ್ಪ ಅವರ ಪ್ರೋತ್ಸಾಹದ ಫಲವಾಗಿ ಮರುವರುಷವೇ, ಅಂದರೆ 1933ರಲ್ಲಿ ಓಡ್ಲಮನೆ ಆತ್ಮಾರಾಮಶಾಸ್ತ್ರಿ, ಹರಿಶೆಣೈ, ಜಿ. ಶ್ರೀನಿವಾಸಮೂರ್ತಿ, ಐಚೆಟ್ಟಿರ ಸುಬ್ಬಯ್ಯ, ಬಿ. ಎಸ್. ಕುಶಾಲಪ್ಪ ಮೊದಲಾದವರ ಪ್ರಯತ್ನದ ಫಲವಾಗಿ ಕೊಡಗು ಕರ್ನಾಟಕ ಸಂಘವು ಅಸ್ತಿತ್ವಕ್ಕೆ ಬಂದಿತು. ಈ ಸಂಘವು ಕೈಗೊಂಡ ಸಾಹಿತ್ಯ ಚಟುವಟಿಕೆಗಳಲ್ಲಿ ಕರ್ನಾಟಕದ ಮತ್ತು ಹೊರಗಿನ ಉದ್ದಾಮ ಸಾಹಿತಿಗಳೂ ವಿದ್ವಾಂಸರೂ ಭಾಗವಹಿಸಿರುವರು. ಈ ಸಂಘದೊಡನೆ ನಿಕಟ ಸಂಬಂಧವಿರಿಸಿಕೊಂಡ ಸ್ಥಳೀಯರಲ್ಲಿ ಬಿ.ಎನ್. ಕೃಷ್ಣಮೂರ್ತಿ, ಪಂದ್ಯಂಡ ಬೆಳ್ಯಪ್ಪ, ಡಾ||ಕೆ.ಡಿ. ಮಾಚಯ್ಯ, ವಿದ್ವಾನ್ ಐ.ಮಾ. ಮುತ್ತಣ್ಣ, ಎಸ್.ಆರ್. ನಾರಾಯಣರಾವ್ (ಭಾರತೀಸುತ), ಮೈ.ಶೇ. ಅನಂತಪದ್ಮನಾಭರಾವ್ ಮೊದಲಾದವರು ಗಣ್ಯರು. ಈ ಸಂಘದ ಈಗಿನ ಅಧ್ಯಕ್ಷರು ಕೆ.ಎಂ. ಬೋಪಯ್ಯ.

ವೀರರಾಜಪೇಟೆಯ ಕೊಡಗು ಕನ್ನಡ ಸಾಹಿತ್ಯ ಸಂಘವನ್ನು ಅಯ್ಯಣ್ಣ ಮತ್ತು ತಮ್ಮಯ್ಯ–ಈ ಅಧಿಕಾರಿಗಳ ಸಹಕಾರದಿಂದ ಸ್ಥಳೀಯ ಪ್ರೌಢಶಾಲೆಯಲ್ಲಿ ವಿಜ್ಞಾನದ ಉಪಾಧ್ಯಾಯರಾಗಿದ್ದ ಬಿ.ಕೆ. ವಿಠ್ಠಲ್ 1938ರಲ್ಲಿ ಸ್ಥಾಪಿಸಿದರು. ಮುಂದೆ ದಕ್ಷಿಣ ಕೊಡಗು ಕನ್ನಡ ಸಾಹಿತ್ಯ ಸಂಘವೆಂತಲೂ

ಇದು ಕರೆಯಲ್ಪಟ್ಟಿತು. ತಿಂಗಳಿಗೊಮ್ಮೆ ಏರ್ಪಾಡಾಗುತ್ತಿದ್ದ ಈ ಸಂಘದ ಕಾರ್ಯಕ್ರಮಗಳಲ್ಲಿ ಸಾಹಿತ್ಯಿಕ ಉಪನ್ಯಾಸ, ಗಮಕ ವಾಚನ, ಇತ್ಯಾದಿಗಳು ಮುಖ್ಯವಾದುವು. ಈ ಸಂಘದ ಅಭಿವೃದ್ಧಿಗಾಗಿ ಶ್ರಮಿಸಿದವರಲ್ಲಿ ನಾಣಯ್ಯ, ಭಾರತೀ ಸುತ, ನಾಯಡ ಚಿಣ್ಣಪ್ಪ, ಡಾ|| ಐ. ಆರ್. ಅಶ್ರಣ್ಣ, ಕೋದಂಡ ನಂಜಪ್ಪ, ಸಿ. ಎಂ. ಪೂಣಚ್ಚ, ಪದ್ಮನಾಭರಾವ್, ಬಿ. ಡಿ. ಗಣಪತಿ, ಕೇಟೋಳಿರ ಚಂಗಪ್ಪ ಮೊದಲಾದವರನ್ನು ಇಲ್ಲಿ ಸ್ಮರಿಸಬಹುದು. 1962ರಲ್ಲಿ ವೀರರಾಜಪೇಟೆಯಲ್ಲಿ ಅಸ್ತಿತ್ವಕ್ಕೆ ಬಂದ ವೀರರಾಜಪೇಟೆ ಕರ್ನಾಟಕ ಸಂಘದಲ್ಲಿ ಈ ಸಂಘವು ಸೇರಿಹೋಯಿತು.

ವೀರರಾಜಪೇಟೆ ಕರ್ನಾಟಕ ಸಂಘವು ಉತ್ಸಾಹಿ ಕಾರ್ಯ ಕರ್ತರಾದ ಡಿ. ಜೆ. ಪದ್ಮನಾಭ, ಅ. ನಾ. ಶರ್ಮ ಹಾಗೂ ಅವರ ಬಳಗದ ಕನ್ನಡಾಭಿಮಾನ ಮತ್ತು ಸತತ ಪ್ರಯತ್ನದ ಫಲವಾಗಿ ಉದಯಿಸಿದ ಕೊಡಗಿನ ಹೆಮ್ಮೆಯ ಸಂಸ್ಥೆ. ವೀರರಾಜಪೇಟೆಯ ಬಸವಣ್ಣನಗುಡಿಯಲ್ಲಿ ಜೆ. ಜೆ. ಸುರೇಂದ್ರ ಬಾಬು ಅವರ ನೇತೃತ್ವದಲ್ಲಿ ಸಂಘಟಿಸಲ್ಪಟ್ಟ ಈ ಸಂಘವು, ಕೊಡಗಿನಲ್ಲಿ ಕನ್ನಡದ ವಾತಾವರಣವು ಶಾಶ್ವತವಾಗಿ ಉಂಟಾ ಗುವಂತೆ ಮಾಡಲೋಸುಗ ಅಂದಿನಿಂದ ಇಂದಿನವರೆಗೆ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಏರ್ಪಡಿ ಸುತ್ತಾ ಬಂದಿದೆ. 1976ರಲ್ಲಿ ಈ ಸಂಘವು ತನ್ನ ಸ್ವಂತ ಕಟ್ಟಡದಲ್ಲಿ ನೆಲೆಯೂರಿದ ಮೇಲೆ ಇದರ ಚಟುವಟಿಕೆಗಳು ಇನ್ನಷ್ಟು ಹುರುಪಿನಿಂದ ನಡೆಯುತ್ತಲಿವೆ. ತನ್ನ ಸಭಾಂಗಣಕ್ಕೆ ಅರಮೇರಿಮಠದ ಶ್ರೀ ಶಾಂತಮಲ್ಲಸ್ವಾಮಿಗಳ ಮತ್ತು ರಂಗ ಮಂಟಪಕ್ಕೆ ಹರದಾಸ ಅಪ್ಪಚ್ಚ ಕವಿಗಳ ಹೆಸರುಗಳನ್ನು ಇಡು ವುದರೊಡನೆ ದಾನಿಗಳಿಗೂ ಕೊಡಗಿನ ಆದಿಕವಿಗೂ ಈ ಸಂಘವು ತನ್ನ ಗೌರವವನ್ನು ಸಲ್ಲಿಸಿದೆ. ಉಪನ್ಯಾಸ, ಚರ್ಚಾಗೋಷ್ಠಿ, ವಿಚಾರ ಸಂಕಿರಣ, ಸಂಗೀತ–ನಾಟಕಾದಿ ಲಲಿತಕಲಾ ಮಹೋತ್ಸವ, ರಾಜ್ಯೋತ್ಸವ, ಪ್ರಬಂಧ ಸ್ಪರ್ಧೆ, ಸಾಹಿತ್ಯ ಸಮ್ಮೇಳನ, ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಲೂ ಇಂತಹ ಕಾರ್ಯಕ್ರಮಗಳಲ್ಲಿ ತನ್ನ ಸಹಕಾರವನ್ನು ನೀಡು ತ್ತಲೂ ಈ ಸಂಘವು ಬೆಳೆದು ಬಂದಿದೆ. ಈ ಸಂಘವು ಕೈಗೊಂಡ ಕಾರ್ಯಕ್ರಮಗಳಲ್ಲಿ 1978ರಲ್ಲಿ ಬಿ. ಡಿ. ಗಣಪತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಪ್ರಥಮ ಕೊಡವ ಭಾಷಾ ಭಿವೃದ್ಧಿ ಸಮ್ಮೇಳನ, 1980ರಲ್ಲಿ ವೀರರಾಜೇಂದ್ರಪೇಟೆ ಎರಡನೇಯ ಶತಮಾನೋತ್ಸವದ ಅಂಗವಾಗಿ ನಡೆದ 'ಕೊಡಗಿನ ಇತಿಹಾಸ ವಿಚಾರ ಸಂಕಿರಣ' ಮೊದಲಾದವು ಗಮನಾರ್ಹವಾದುವು. ಈ ಸಂಘದ ಸರ್ವತೋಮುಖ ಬೆಳವಣಿಗೆಯಲ್ಲಿ ಆಸಕ್ತಿ ವಹಿಸಿ ಸಹಾಯ–ಸಹಕಾರಗಳನ್ನು ನೀಡಿದವರಲ್ಲಿ ತೋಟಂಬೈಲು ಮಾದಪ್ಪ, ರಾವ್‌ಬಹದ್ದೂರ್ ಕೆ. ಟಿ. ಉತ್ತಪ್ಪ, ಅರಮೇರಿಮಠದ ಶ್ರೀ ಶಾಂತಮಲ್ಲ ಸ್ವಾಮಿಗಳು, ಆರ್. ಗುಂಡೂರಾವ್, ಡಾ|| ಯನ್. ಬಿ. ಉತ್ತಪ್ಪ, ಗುಂಡಕುಟ್ಟಿಯ ಜಿ. ಎಂ. ಮಂಜುನಾಥಯ್ಯ, ಎಂ. ಬಿ. ಅಪ್ಪಯ್ಯ, ಸಿ. ಎಂ. ಪೂಣಚ್ಚ ಡಾ|| ಸಿದ್ಧಯ್ಯ ಪುರಾಣಿಕ ಮೊದಲಾದ ಪ್ರಮುಖರು ಉಲ್ಲೇಖನೀಯರು. ಈ ಜಿಲ್ಲೆಯ ಪ್ರಮುಖ ಸಾಹಿತಿಗಳು, ಸಮಾಜ ಸೇವಕರು ಮತ್ತು ಅಭಿಮಾನಿಗಳೂ ತಮ್ಮ ಪಾಲಿನ ಸೇವಾಕಾಣಿಕೆ ಸಲ್ಲಿಸಿರುವರು. ಇವರಲ್ಲದೆ, ಡಿ. ಜೆ. ಪದ್ಮನಾಭ, ಎನ್. ಜಿ. ಕಾಮತ್, ಆರ್. ಜೆ. ಮುಕುಂದಸಿಂಗ್, ಜೆ. ಜೆ. ಸುರೇಂದ್ರಬಾಬು, ಜೆ. ಎನ್. ಧನಿಕುಮಾರ್, ಎ. ಕೆ. ಕೇಶವರಾವ್, ಟಿ. ಎ. ಮದುರೆಸೆಟ್ಟಿ, ಎಂ.ಎಶ್. ಪೂವಯ್ಯ,ತಾತಂಡ ಎಂ. ನಂಜಪ್ಪ, ಡಿ. ಯು. ನಾಯಕ್, ಸಿ. ಎಂ. ಕುಞ್ಞಪ್ಪ, ಮು. ಅ. ಕಾಶಿಯಪ್ಪ. ಎಂ. ಎ. ಕಾವೇರಪ್ಪ, ಶ್ರೀಮತಿ ಬಲ್ಲಡಿಚಂಡ ಬೇಬಿ ಮೇದಪ್ಪ, ಅ. ರಾ. ಯೋಗಾನಂದರಾವ್, ಕೆ. ಬಿ. ಟಾಟಾ ಚಂಗಪ್ಪ, ಮುರವಂಡ ಎಂ. ಪ್ರಕಾಶ್ ಮೊದಲಾದ ವರು 1962 ರಿಂದ 1989ರ ವರೆಗೆ ಈ ಸಂಘದ ಪ್ರಮುಖ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿರುವರು. ಮುಲ್ಲೇರ ಯಂ. ಅಯ್ಯಪ್ಪ (ಜಿಮ್ಮಿ) ಅವರು ಈ ಸಂಘದ ಈಗಿನ ಆಡಳಿತ ಮಂಡಳಿಯ ಅಧ್ಯಕ್ಷರು. ಈ ಸಂಘವು 1990ರಲ್ಲಿ ತನ್ನ ಬೆಳ್ಳಿಹಬ್ಬವನ್ನು ಆಚರಿಸುವುದರೊಡನೆ 'ರಜತರಶ್ಮಿ' ಎಂಬ ಸ್ಮರಣ ಸಂಚಿಕೆಯನ್ನೂ ಹೊರತಂದಿದೆ.

ಜಿಲ್ಲೆಯ ಎಲ್ಲ ಬರಹಗಾರರು ಮತ್ತು ಕಲಾವಿದರನ್ನು ಸಂಘಟಿಸಿ ಇವರೆಲ್ಲರಿಗೆ ಸೂಕ್ತ ವೇದಿಕೆಯನ್ನು ರೂಪಿಸುವ ಉದ್ದೇಶದಿಂದ ಟಿ. ಕೆ. ತ್ಯಾಗರಾಜ್, ಎಂ. ಎಂ. ಲಿಯಾಕತ್ ಅಲಿ ಮತ್ತು ಬಿ. ಎ. ಷಂಶುದ್ದೀನ್ ಅವರುಗಳು 1981ರಲ್ಲಿ ಹುಟ್ಟುಹಾಕಿದ ಸಂಸ್ಥೆಯೇ ಮಡಿಕೇರಿಯ ಕೊಡಗು ಲೇಖಕ ಮತ್ತು ಕಲಾವಿದರ ಬಳಗ. ಜಿಲ್ಲೆಯ ಬಹುತೇಕ ಕಲಾವಿದರು ಮತ್ತು ಬರಹಗಾರರು ಇದರ ಸದಸ್ಯರು. ಈ ಸಂಘವು ವಿವಿಧ ಇಲಾಖೆ, ಅಕಾಡೆಮಿ, ಇತ್ಯಾದಿಗಳ ಸಹ ಯೋಗದೊಡನೆ ಈವರೆಗೆ ಈ ಜಿಲ್ಲೆಯಲ್ಲಿ ವಿಚಾರ ಸಂಕಿರಣ, ನೃತ್ಯ–ನಾಟಕಗಳ ಪ್ರದರ್ಶನ, ನಾಟಕೋತ್ಸವ, ಚಿತ್ರಕಲಾ ಪ್ರದರ್ಶನ, ಕವಿಗೋಷ್ಠಿ,ಮಹಿಳಾ ವಿಚಾರಗೋಷ್ಠಿ, ಭಾಷಣ, ಪ್ರಬಂಧ ಮುಂತಾದವುಗಳ ಸ್ಪರ್ಧೆ–ಹೀಗೆ ಹಲವಾರು ಕಾರ್ಯ ಕ್ರಮಗಳನ್ನು ಏರ್ಪಡಿಸಿದೆ. 1986ರಲ್ಲಿ ಮಡಿಕೇರಿಯಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ಕಲಾವಿದರ ಶಿಬಿರ ಮತ್ತು ಜಿಲ್ಲೆಯ ಕವಿಗಳ ಗೀತೆಗಳಿಗೆ ಜಿಲ್ಲೆಯ ಕಲಾವಿದರೇ ರಾಗ ಸಂಯೋಜಿಸಿ ಸಿದ್ಧಪಡಿಸಿದ ಕ್ಯಾಸೆಟ್‌ನ ಬಿಡುಗಡೆ, ಇತ್ಯಾದಿ

ಗಳು ಈ ಬಳಗವು ಕೈಗೊಂಡ ಗಮನಾರ್ಹ ಕಾರ್ಯಕ್ರಮ ಗಳು. ಟಿ. ಕೆ. ತ್ಯಾಗರಾಜ್ ಅವರು ಈ ಬಳಗದ ಸ್ಥಾಪಕ ಅಧ್ಯಕ್ಷರಾಗಿದ್ದರಲ್ಲದೆ, ಆ ನಂತರ ಇ. ವಿ. ಸತ್ಯನಾರಾಯಣ ಅವರು ಅಧ್ಯಕ್ಷರಾದರು. ಹೆಚ್. ಜಿ. ಮಹಾಬಲೇಶ್ವರ ಅವರು ಈಗಿನ ಅಧ್ಯಕ್ಷರು. ಕ. ಗೋ. ಚಂದ್ರಶೇಖರಾಚಾರಿ ಹಾಗೂ ಬಿ. ಎ. ಷಂಶುದ್ದೀನ್ ಅವರುಗಳು ಕಾರ್ಯಾಧ್ಯಕ್ಷರು ಗಳಾಗಿ ಉಪಯುಕ್ತ ಸೇವೆ ಸಲ್ಲಿಸಿದ್ದಾರೆ.

ಕೊಡಗಿನಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಚಟು ವಟಿಕೆಗಳನ್ನು ಸತತವಾಗಿ ಮತ್ತು ಬೃಹತ್ ಪ್ರಮಾಣದಲ್ಲಿ ನಡೆಸುತ್ತಾ ಬಂದಿರುವ ಏಕೈಕ ಸಂಘಟಿತ ಸಂಸ್ಥೆಯೆಂದರೆ ಬೆಂಗಳೂರಿನ ಕೇಂದ್ರ ಸಾಹಿತ್ಯ ಪರಿಷತ್ತಿನ ಘಟಕವಾದ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು. 1969ರಲ್ಲಿ ವೀರರಾಜಪೇಟೆಯ ಡಿ. ಜೆ. ಪದ್ಮನಾಭ ಅವರ ಅಧ್ಯಕ್ಷತೆಯಲ್ಲಿ ಅಸ್ತಿತ್ವಕ್ಕೆ ಬಂದ ಈ ಪರಿಷತ್ತು, 1970 ರಿಂದ ಇಂದಿನ ವರೆಗೆ ಜಿಲ್ಲೆಯಾದ್ಯಂತ ನೂರಾರು ಕಾರ್ಯಕ್ರಮಗಳನ್ನು ಏರ್ಪಡಿಸುವುದರೊಡನೆ ವಿದ್ವಾಂಸರು, ಕಲಾವಿದರು, ಅಧಿಕಾರಿ ಗಳು, ಬರಹಗಾರರು, ವಿದ್ಯಾರ್ಥಿಗಳು—ಹೀಗೆ ವಿವಿಧ ವರ್ಗ ಗಳವರನ್ನು ತನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ; ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂವರ್ಧನೆಗೆ ಶ್ರಮಿಸಿದೆ. ಈ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಮೊದಲನೆಯದು 1970ರಲ್ಲಿ ವೀರರಾಜ ಪೇಟೆಯಲ್ಲಿಯೂ ಎರಡನೆಯದು 1979ರಲ್ಲಿ ಮಡಿಕೇರಿ ಯಲ್ಲಿಯೂ ಮೂರನೆಯದು 1990ರಲ್ಲಿ ಸೋಮವಾರಪೇಟೆ ಯಲ್ಲಿಯೂ ಸಮಾವೇಶಗೊಂಡಿದ್ದು, ಸಾಹಿತಿಗಳಾದ ಡಾ|| ಶಿವರಾಮ ಕಾರಂತ, ಡಾ|| ಸಿದ್ದಯ್ಯ ಪುರಾಣಿಕ ಮತ್ತು ಡಾ|| ಹಾ.ಮಾ. ನಾಯಕ ಅವರುಗಳು ಕ್ರಮವಾಗಿ ಈ ಮೂರು ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. ಇಷ್ಟಲ್ಲದೆ, 1981ರಲ್ಲಿ ಮಡಿಕೇರಿಯಲ್ಲಿ, ಈ ಜಿಲ್ಲೆಯಲ್ಲಿ ಎರಡನೇಯ ಬಾರಿಗೆ ಸೇರಿದ ಅಖಿಲ ಭಾರತ 54ನೇಯ ಕನ್ನಡ ಸಾಹಿತ್ಯ ಸಮ್ಮೇಳನವು ಖ್ಯಾತ ಸಂಶೋಧಕ ಡಾ|| ಶಂ. ಬಾ. ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಾಹಿತ್ಯ ಪರಿಷತ್ತಿನ ಸಮಿತಿಗಳಲ್ಲಿದ್ದು ಕಾರ್ಯನಿರ್ವಹಿಸಿದವರಲ್ಲಿ ಡಿ. ಜೆ. ಪದ್ಮನಾಭ, ಟಿ. ಎ. ಮದುರೆಸೆಟ್ಟಿ, ಎನ್. ಜಿ. ಕಾಮತ್, ಎನ್. ಎಸ್. ದೇವೀಪ್ರಸಾದ್, ಎಸ್. ಆರ್. ನಾರಾಯಣರಾವ್ (ಭಾರತೀ ಸುತ), ಬಿ.ಡಿ. ಗಣಪತಿ, ಎಮರ್ಳ ಶಂಕರನಾರಾಯಣಭಟ್, ಕೆ. ಸಚ್ಚಿದಾನಂದಯ್ಯ (ಚಿರಂತನ), ಕೆ. ಎಂ. ಬೋಪಯ್ಯ, ಪಿ. ಕೆ. ಅಯ್ಯಮ್ಮ, ಜೆ. ಜೆ. ಸುರೇಂದ್ರಬಾಬು, ಬಿ. ದೇವಕಿಯಮ್ಮ, ಎಂ. ಜಿ. ಪ್ರಕಾಶ್, ಬಿ. ಎ. ಹಸನಬ್ಬ, ಡಾ|| ಐ. ಎ. ದುರ್ಗಾಪ್ರಸಾದ್, ಕೆ. ಎ. ಸೋಮಣ್ಣ, ಶ್ರೀ ಶಾಂತಮಲ್ಲಸ್ವಾಮಿಗಳು, ಶ. ಚಂ. ರಾಜಶೇಖರ್, ಯು. ಎಂ. ಪೂವಯ್ಯ, ಬಿ. ಜಿ. ರಘುನಾಥನಾಯಕ್, ಕ. ಗೋ. ಚಂದ್ರಶೇಖರಾಚಾರಿ, ಡಾ|| ಜಿ. ಎಸ್. ಪರಮೇಶ್, ಇ. ವಿ. ಸತ್ಯನಾರಾಯಣ, ಕೆ. ರಂ. ಗೋಪಾಲ, ಎಸ್. ಜಿ. ಮಣಿ, ಪಿ. ಜಿ. ಅಯ್ಯಪ್ಪ, ಎಸ್. ಜಿ. ಮಹಾಬಲೇಶ್ವರ, ಬಿ. ಎ. ಷಂಶುದ್ದೀನ್, ಅ. ನಾ. ಶರ್ಮ, ಸದಾಶಿವಶೆಟ್ಟಿ, ಎ. ಎ. ಪೂವಯ್ಯ, ಪೂ. ರಾ. ಶ್ರೀನಿವಾಸ್, ಕೆ. ಪಿ. ಬಾಲಸುಬ್ರಹ್ಮಣ್ಯ, ಸರೋಜಾ ಸೋಮಯ್ಯ, ರಾಣಿ ಅಪ್ಪಣ್ಣ, ಮೀನಾಕ್ಷಿ ಗಣಪತಿ, ಕಮಲಾ ಕರಿಯಪ್ಪ, ಪಾರ್ವತಮ್ಮ ಬಸಪ್ಪ ಮೊದಲಾದವರನ್ನು ಪ್ರಸ್ತಾಪಿಸಬಹುದು. 1970 ರಿಂದ 90ರ ವರೆಗೆ—ಇಪ್ಪತ್ತು ವರುಷಗಳನ್ನು ಪೂರೈಸಿದ ಈ ಜಿಲ್ಲಾ ಘಟಕವು, 1990ರಲ್ಲಿ ತನ್ನ 20ನೇಯ ವಾರ್ಷಿ ಕೋತ್ಸವವನ್ನು ಆಚರಿಸಿತು. ಈ ಘಟಕದ ಈಗಿನ ಅಧ್ಯಕ್ಷರು ಮಾದಂಡ ಎಸ್. ಪೂವಯ್ಯ ಅವರು.

ಕೊಡವ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ 1978ರಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥೆಯೆಂದರೆ ಕೊಡವ ತಕ್ಕ್ ಪರಿಷತ್. ಇದರ ಪ್ರಥಮ ಸಮ್ಮೇಳನವು ಬಿ. ಡಿ. ಗಣಪತಿ ಅವರ ಅಧ್ಯಕ್ಷತೆಯಲ್ಲಿ ಅದೇ ವರುಷ ವೀರರಾಜಪೇಟೆಯಲ್ಲಿ ಸಮಾವೇಶಗೊಂಡಿದ್ದಿತು. ಈ ಸಂಸ್ಥೆಯ ಆಶ್ರಯದಲ್ಲಿ 1978 ರಿಂದ 1990ರವರೆಗೆ ಪೂರ್ಣ ಪ್ರಮಾಣದ ಐದು ಕೊಡವ ಸಾಹಿತ್ಯ ಸಮ್ಮೇಳನಗಳು ನಡೆದಿವೆ. ಈ ಚಟುವಟಿಕೆ ಗಳ ಪರಿಣಾಮವಾಗಿ ಕೊಡವ ಭಾಷಾ ಪತ್ರಿಕೆ, ಗ್ರಂಥ, ಚಲನ ಚಿತ್ರ, ಕ್ಯಾಸೆಟ್, ಇತ್ಯಾದಿಗಳು ಹೊರಬರತೊಡಗಿವೆಯಲ್ಲದೆ, ಕೊಡವ ನಾಟಕ ಸಂಸ್ಥೆಯೂ ತಲೆ ಎತ್ತುವುದರೊಡನೆ ಕೊಡಗಿನ ಸಾಮಾಜಿಕ ಪರಿಸ್ಥಿತಿಯನ್ನು ಪ್ರಭಾವಶಾಲಿಯಾಗಿ ಚಿತ್ರಿಸುವ ಹೊಸ ಅಲೆಯ ರಚನೆಗಳು ಅಭಿನಯಿಸಲ್ಪಡುತ್ತಿವೆ.

ಮಡಿಕೇರಿಯಲ್ಲಿ 1980ರಲ್ಲಿ ಸಮಾವೇಶಗೊಂಡ ಕೊಡಗು ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನವನ್ನೂ ಇಲ್ಲಿ ಪ್ರಸ್ತಾಪಿಸ ಬಹುದು. ಸಾಹಿತಿ ಬಿ. ಕೃಷ್ಣಪ್ಪ ಅವರು ಇದರ ಉದ್ಘಾಟಕ ರಾಗಿದ್ದರು. 1982ರಲ್ಲಿ ಸ್ಥಾಪನೆಗೊಂಡ ಪೊನ್ನಂಪೇಟೆಯ ಕನ್ನಡ ಸಾಹಿತ್ಯ—ಸಂಸ್ಕೃತಿ ಸಂಘವು ಅಡ್ಡಂಡ ಸಿ. ಕಾಶಿ ಅವರ ಅಧ್ಯಕ್ಷತೆಯಲ್ಲಿ ಕಾವ್ಯವಾಚನ, ಜಯಂತ್ಯುತ್ಸವ, ಕನ್ನಡ ರಾಜ್ಯೋತ್ಸವ, ಸಂಗೀತೋತ್ಸವ, ಇತ್ಯಾದಿ ಕಾರ್ಯಕ್ರಮ ಗಳನ್ನು ನಡೆಸಿದೆ.

ಬೆಂಗಳೂರಿನ ಅಖಿಲ ಕರ್ನಾಟಕ ಮಕ್ಕಳ ಕೂಟವು 1969 ರಲ್ಲಿ ಮಡಿಕೇರಿಯಲ್ಲಿ ಏರ್ಪಡಿಸಿದ ಅಖಿಲ ಕರ್ನಾಟಕ 20 ನೇಯ ಮಕ್ಕಳ ಸಮ್ಮೇಳನವೂ ಇಲ್ಲಿ ಉಲ್ಲೇಖನೀಯ ವಾದುದು. ಮಡಿಕೇರಿಯ ಕುಮಾರಿ ಬಿ. ಪೂರ್ಣಿಮಾ ಬಾಳಿಗಾ ಮತ್ತು ಕುಮಾರಿ ಕುಪ್ಪಂಡ ನಿರ್ಮಲ ನಾಚಪ್ಪ ಅವರುಗಳು ಈ ಸಮ್ಮೇಳನದ ಬಾಲಾಧ್ಯಕ್ಷೆ ಮತ್ತು ಬಾಲ ಉಪಾಧ್ಯಕ್ಷೆಯರಾಗಿದ್ದರು. ನಾಡು–ನುಡಿ, ಇತ್ಯಾದಿಗಳ ಬಗೆಗೆ ಕೆಲವು ಸಂಘಟನೆಗಳು ಈ ಜಿಲ್ಲೆಯಲ್ಲಿ ಕ್ರಿಯಾಶೀಲ ವಾಗಿದ್ದು, ಸಾಂದರ್ಭಿಕ ಹೋರಾಟಗಳಲ್ಲಿ ಭಾಗವಹಿಸಿವೆ. ವೀರರಾಜಪೇಟೆಯಲ್ಲಿ ಆರ್. ಜೆ. ಮುಕುಂದಸಿಂಗ್ ಅವರ ನೇತೃತ್ವದಲ್ಲಿಯ ಕನ್ನಡ ಚಳುವಳಿಗಾರರ ಸಂಘವು ಇಲ್ಲಿ ಉಲ್ಲೇಖನೀಯವಾದುದು. ಕೊಡಗು ಕನ್ನಡ ಕ್ರಿಯಾ ಸಮಿತಿ, ಡಾ|| ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಇತ್ಯಾದಿಗಳೂ ಸಕ್ರಿಯವಾಗಿವೆ. ಇವಲ್ಲದೆ, 58ಕ್ಕೂ ಹೆಚ್ಚು ಕನ್ನಡ ಸಂಘ–ಸಂಸ್ಥೆಗಳು ಮತ್ತು ಯುವಕ–ಯುವತಿ ಮಂಡಲಗಳು ಈ ಜಿಲ್ಲೆಯಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವಲ್ಲಿ ಆಸಕ್ತಿ ವಹಿಸಿವೆ.

## ಪತ್ರಿಕೋದ್ಯಮ

ಸುಮಾರು 1883 ರಿಂದ ಇಂದಿನವರೆಗೆ ಈ ಜಿಲ್ಲೆಯಲ್ಲಿ ಪತ್ರಿಕೋದ್ಯಮ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ತಮ್ಮ ಪರಿಮಿತಿಯಲ್ಲಿಯೇ ಈ ಜಿಲ್ಲೆಯ ವೃತ್ತ ಪತ್ರಿಕೆಗಳು ಇಲ್ಲಿಯ ನಾಡು, ನುಡಿ, ಜನಾಂಗ ಮೊದಲಾದವು ಗಳ ಬಗೆಗೆ ಹೆಚ್ಚಿನ ಒಲವು ಮತ್ತು ಕಾಳಜಿಗಳನ್ನು ಹೊಂದಿ ಅವುಗಳ ಪ್ರಗತಿ ಹಾಗೂ ಸುಧಾರಣೆಗಾಗಿ ಶ್ರಮಿಸುತ್ತಲೇ ಬಂದಿವೆ. ಸುಮಾರು 1920 ರಿಂದೀಚೆಗೆ ಬ್ರಿಟಿಷರ ವಿರುದ್ಧ ಹೋರಾಡುವಲ್ಲಿ ಈ ಪತ್ರಿಕೆಗಳು ತಳೆದ ನಿಲುವು ಹಾಗೂ ನೀಡಿದ ನೆರವುಗಳು ಅಮೂಲ್ಯವಾದವು. ಗಡಿನಾಡಿನ ಪ್ರದೇಶ ವಾದುದರಿಂದ ಈ ಜಿಲ್ಲೆಯ ಭಾಷಾಸಮಸ್ಯೆ, ಜನಾಂಗಿಕ ಸಮಸ್ಯೆ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ನಿಭಾಯಿಸುವಲ್ಲಿಯೂ ಇಲ್ಲಿಯ ಪತ್ರಿಕೆಗಳು ವ್ಯಕ್ತಪಡಿಸಿರುವ ಸಹನೆ ಮತ್ತು ಭಾವೈಕ್ಯ ಧೋರಣೆಗಳು ಪ್ರಶಂಸನೀಯವಾದುವೆನ್ನಬಹುದು. ಮುಖ್ಯವಾಗಿ, ಕೊಡಗಿನ ಬಹುಪಾಲು ಉದಯೋನ್ಮುಖರ ಬರವಣಿಗೆ, ಕವನ, ಇತ್ಯಾದಿಗಳನ್ನು ಬೆಳಕಿಗೆ ತರುವಲ್ಲಿ ಈ ಸ್ಥಳೀಯ ಪತ್ರಿಕೆಗಳು ಮುಖ್ಯ ಪಾತ್ರವಹಿಸಿವೆ. ಸ್ಥೂಲವಾಗಿ ಹೇಳುವುದಾದರೆ, ಇಲ್ಲಿ ನೆಲಸಿರುವ ವಿವಿಧ ಭಾಷಾವರ್ಗಗಳ ಅಗತ್ಯಕ್ಕೆ ತಕ್ಕಂತೆ ಕನ್ನಡ, ಕೊಡವ, ಮಲಯಾಳಂ, ಇಂಗ್ಲಿಷ್ ಮೊದಲಾದ ಭಾಷಾ ಪತ್ರಿಕೆಗಳು ಕಾಲಕಾಲಕ್ಕೆ ಹುಟ್ಟಿಕೊಂಡು ತಮ್ಮದೇ ಆದ ವಿಧದಲ್ಲಿ ಸೇವೆ ಸಲ್ಲಿಸಿವೆ.

ಕೊಡಗಿನಲ್ಲಿ ಪತ್ರಿಕೋದ್ಯಮದ ಬೆಳವಣಿಗೆ ಮತ್ತು ಚಟುವಟಿಕೆಗಳನ್ನು ಕುರಿತು ಕೆ. ಪಿ. ಮುತ್ತಣ್ಣ,[1] ಡಾ|| ಐ. ಮಾ. ಮುತ್ತಣ್ಣ,[2] ಡಾ|| ಬಿ. ಶಾಮಸುಂದರ,[3] ಕೊ.ರಾ. ರವೀಂದ್ರ,[4] ಯು. ಎಂ. ಪೂವಯ್ಯ,[5] ಅಮ್ಮೆಂಬಳ ನಾರಾಯಣ ಶರ್ಮ[6] ಹಾಗೂ ಬಲ್ಯಮೀದೇರಿರ ಸುಬ್ರಮಣಿ, ಸೋಮವಾರಪೇಟೆ ರಾಧೇಯ ಮೊದಲಾದವರು ಸ್ಥೂಲವಾಗಿಯಾದರೂ ತಮ್ಮ ಬರಹಗಳಲ್ಲಿ ಚರ್ಚಿಸಿರುವರು.

'ಕೊಡಗು ಚಂದ್ರಿಕೆ' ಕನ್ನಡ ಸಾಪ್ತಾಹಿಕವು ಈ ಜಿಲ್ಲೆಯ ಮೊಟ್ಟ ಮೊದಲ ಪತ್ರಿಕೆಯೆಂದು ಪರಿಗಣಿಸಲ್ಪಟ್ಟಿದ್ದು, 1884ರಲ್ಲಿ ಸೋಮವಾರಪೇಟೆ ತಾಲೂಕು ಶನಿವಾರಸಂತೆ ಯಿಂದ ಇದು ತನ್ನ ಪ್ರಕಟಣೆಯನ್ನಾರಂಭಿಸಿತು. ಮೈಸೂರು ರಂಗರಾಯರು ಇದರ ಸಂಪಾದಕರಾಗಿದ್ದರು. ಇದು ಎರಡು ವರುಷಗಳ ಕಾಲ ಪ್ರಸಾರದಲ್ಲಿದ್ದಿತು. ಇದೇ ಹೆಸರಿನ ಮಾಸ ಪತ್ರಿಕೆಯು 1939ರಲ್ಲಿ ಮಡಿಕೇರಿಯಿಂದ ಹೊರಟಿದುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಬಿ. ಆರ್. ಸುಬ್ರಾಯ ಅವರು ಇದರ ಸಂಪಾದಕರಾಗಿದ್ದು, ಎರಡು ವರುಷಗಳ ವರೆಗೆ ಇದನ್ನು ನಡೆಸಿದರು.

---

1. ಜಗತ್ತಿಗೊಂದೇ ಕೊಡಗು, ಪು. 74–75
2. ಕೂರ್ಗ್ ಮೆಮೊಯರ್ಸ್, ಪು. 345–46
3. 'ಕೊಡಗಿನ ಪತ್ರಿಕೆಗಳು', ವೀರರಾಜೇಂದ್ರಪೇಟೆ ಕರ್ನಾಟಕ ಸಂಘದ ಕಟ್ಟಡ ಉದ್ಘಾಟನೆ ಸ್ಮರಣ ಸಂಚಿಕೆ, ಪು. 10–11
4. 'ಕೊಡಗಿನಲ್ಲಿ ಕನ್ನಡ ಪತ್ರಿಕೋದ್ಯಮ', ಸಾಹಿತ್ಯ ಕಾವೇರಿ – ಸ್ಮರಣ ಸಂಚಿಕೆ, ಪು. 53–56
5. 'ಕೊಡಗಿನಲ್ಲಿ ಪತ್ರಿಕೋದ್ಯಮ', ಕನ್ನಡ ಕಾವೇರಿ – ಸ್ಮರಣ ಸಂಚಿಕೆ, ಪು. 114–116
6. 'ಕೊಡಗಿನಲ್ಲಿ ಕನ್ನಡ ಪತ್ರಿಕೋದ್ಯಮ', ಕನ್ನಡ ಸುಜ್ಯೋತಿ – ಸ್ಮರಣ ಸಂಚಿಕೆ, ಪು. 39–46

ಆ ನಂತರ ಕೊಡಗಿನಲ್ಲಿ ಪತ್ರಿಕೆಗಳೇ ಇಲ್ಲದ ಕಾಲದಲ್ಲಿ ಮಡಿಕೇರಿಯಲ್ಲಿ 1920ರಲ್ಲಿ ಕೊಡಗು ಕಂಪೆನಿಯು ಸ್ಥಾಪಿಸಲ್ಪಟ್ಟು, ಇದರ ವತಿಯಿಂದ ಕೆ. ಪಿ. ಚಿಣ್ಣಪ್ಪ ಅವರ ಪ್ರಯತ್ನದಿಂದಾಗಿ 'ಕೊಡಗು' ಎಂಬ ಕನ್ನಡ ವಾರಪತ್ರಿಕೆಯು ಆರಂಭಗೊಂಡಿತು. 1921ರ ಜೂನ್ 3 ರಿಂದ ಮೈಸೂರಿನಲ್ಲಿ ಅಚ್ಚಾಗಿ ಮಡಿಕೇರಿಯಲ್ಲಿ ಪ್ರಕಟಗೊಂಡಿತು. (ಪು. 113 ನೋಡಿ). 1909ರ ಸುಮಾರಿನಲ್ಲಿ ಆರಂಭಿಸಿದ ಕೊಡಗು ಜಮೀನ್ದಾರರ ಸಂಘದ ಧ್ಯೇಯೋದ್ದೇಶ ಮತ್ತು ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಲೋಸುಗ ಈ ಪತ್ರಿಕೆಯು ಅಸ್ತಿತ್ವಕ್ಕೆ ಬಂದಿತು. ಈ ಪತ್ರಿಕೆಯು ತನ್ನ ಪ್ರಥಮ ಸಂಚಿಕೆಯಲ್ಲಿ ". . . ಈ ಪತ್ರಿಕೆಯ ನೀತಿ ಮತ್ತು ಉದ್ದೇಶಗಳಾವುವೆಂದರೆ ದೇಶಕ್ಕೆ ಸಂಬಂಧಿಸುವ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನರಿಗೆ ತಿಳುವಳಿಕೆ ಕೊಟ್ಟು ದೇಶದ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದು" ಎಂದು ಸಾರಿತು. 1923ರಲ್ಲಿ ಕೊಡಗು ಜಿಲ್ಲಾ ಸರಕಾರಿ ಪ್ರೆಸ್ಸಿನ ಯಂತ್ರೋಪಕರಣಗಳನ್ನು ಕ್ರಯಕ್ಕೆ ಪಡೆದ ನಂತರ ಇದು ಮಡಿಕೇರಿಯಲ್ಲಿ ಅಚ್ಚಾಗತೊಡಗಿತು. ಪಂದ್ಯಂಡ ಬೆಳ್ಯಪ್ಪ ಅವರು 1965ರ ವರೆಗೂ ಈ ಪತ್ರಿಕೆಯ ಸಂಪಾದಕರಾಗಿದ್ದು, ಇದನ್ನು ಯಶಸ್ವಿಯಾಗಿ ನಡೆಸಿದರು. ಸಿ.ಎಂ. ಪೂಣಚ್ಚ ಅವರೂ ಇದರ ಸಂಪಾದಕ ವರ್ಗದಲ್ಲಿ ಇದ್ದರು. ಬಹುವರುಷಗಳಿಂದ ಇದರ ಉಪಸಂಪಾದಕರಾಗಿದ್ದ ಬಿ. ಡಿ. ಗಣಪತಿ ಅವರು ಆ ನಂತರ ಇದರ ಸಂಪಾದಕರಾಗಿ 1970 ರಿಂದೀಚೆಗೆ ನಿವೃತ್ತರಾದರು. ಇವರ ತರುವಾಯ ಬಿ. ಡಿ. ಸುಬ್ಬಯ್ಯ (ಕಾಕೆಮಾನಿ) ಮತ್ತು ಕೆ.ಬಿ. ಕಾಳಪ್ಪ ಅವರುಗಳು ಕ್ರಮವಾಗಿ ಈ ಪತ್ರಿಕೆಯ ಸಂಪಾದಕರಾದರು. ರಾಷ್ಟ್ರೀಯತಾವಾದಿಯಾದ ಈ ಪತ್ರಿಕೆಯು ಬ್ರಿಟಿಷರ ಆಳ್ವಿಕೆಯಲ್ಲಿ ಹಲವಾರು ಕಿರುಕುಳಗಳನ್ನು ಅನುಭವಿಸಿತು. ಸತ್ಯನಿಷ್ಠೆ, ಕನ್ನಡದ ಸ್ಥಾನ–ಮಾನಗಳಿಗಾಗಿ ಹೋರಾಟ ಮತ್ತು ಪ್ರಚಾರ–ಇವೂ ಈ ಪತ್ರಿಕೆಯ ಧ್ಯೇಯೋದ್ದೇಶಗಳಾಗಿದ್ದವು. 1971ರಲ್ಲಿ ಈ ಪತ್ರಿಕೆಗೆ 50 ವರುಷಗಳು ತುಂಬಿತಲ್ಲದೆ, 1973ರಲ್ಲಿ ಸುವರ್ಣೋತ್ಸವವನ್ನು ಆಚರಿಸುವುದರೊಡನೆ ಚಿನ್ನದ ಹಬ್ಬದ ವಿಶೇಷ ಸಂಚಿಕೆಯನ್ನೂ ಹೊರತಂದಿತು. ಈ ಪತ್ರಿಕೆಯು ಇಂದಿಗೂ ಪ್ರಚಲಿತವಿದೆ. ಇಷ್ಟಲ್ಲದೆ, ಕೊಡಗು ಕಂಪೆನಿಯು ನಿರ್ಣಯದ ಪ್ರಕಾರ 1975ರಲ್ಲಿ 'ಕೊಡಗು ದೈನಿಕ' ಪತ್ರಿಕೆ ಪ್ರಾರಂಭಿಸಲ್ಪಟ್ಟಿತು. ಕೊಡಗು-ಸಾಪ್ತಾಹಿಕ ಮತ್ತು ಕೊಡಗು-ದೈನಿಕಗಳು ಈಗ ಮಡಿಕೇರಿಯಿಂದ ಪ್ರಕಟಗೊಳ್ಳುತ್ತಿವೆ. ಯಂ. ಯು. ಕಾಳಪ್ಪ ಕೊಡಗು–ದೈನಿಕದ ಈಗಿನ ಸಂಪಾದಕರಾಗಿರುವರು.

ಜಮೀನ್ದಾರ್ ಸಂಘದ ನೀತಿ–ಧೋರಣೆಗಳನ್ನು ಖಂಡಿಸಲು ಮತ್ತು ಕೊಡಗನ್ನು ಪ್ರತ್ಯೇಕವಾಗಿಯೇ ಉಳಿಸಿಕೊಳ್ಳಬೇಕೆಂಬ ಕೊಡಗು ಸರಕಾರದ ಧೋರಣೆಯನ್ನು ಬೆಂಬಲಿಸಲು ಕೊಡಗು ಸಭಾ ಎಂಬ ಸಂಘವು ಹುಟ್ಟಿಕೊಂಡಿತು. ಇದನ್ನು ಸಮರ್ಥಿಸಲೋಸುಗ ಬಲ್ಲಚಂಡ ಬೆಳ್ಯಪ್ಪ ಅವರು 1925ರಲ್ಲಿ 'ಲೋಕಪಾವನ' ಕನ್ನಡ ಸಾಪ್ತಾಹಿಕವನ್ನು ಹೊರಡಿಸಿದರು. ಕೊಡಗು ಸಭಾಕ್ಕೆ ಬಹುಪಾಲು ಕೊಡವರ ಪ್ರೋತ್ಸಾಹ ದೊರೆತದ್ದರಿಂದ ಅದು ಪ್ರಬಲ ಶಕ್ತಿಯಾಗಿ ಬೆಳೆಯಿತು; ತನ್ನ ವಿರೋಧಿ ಸಂಸ್ಥೆಯಾದ ಜಮೀನ್ದಾರ್ ಸಂಘದ ಪ್ರಾಬಲ್ಯವನ್ನು ಕುಗ್ಗಿಸಿತು. ಈ ಸಭಾದ ನೀತಿ-ಧೋರಣೆಗಳನ್ನು 'ಲೋಕಪಾವನ' ಪತ್ರಿಕೆಯು ಚೆನ್ನಾಗಿ ಪ್ರತಿಬಿಂಬಿಸಿತು. ಅಲ್ಲದೆ, ವ್ಯಕ್ತಿಗತವಾದ ಟೀಕೆ-ಟಿಪ್ಪಣಿಗಳೂ ಈ ಪತ್ರಿಕೆಯಲ್ಲಿ ಧಾರಾಳವಾಗಿ ಕಂಡುಬಂದವು. ಕೊಡಗರಲ್ಲಿ ರಾಜಕೀಯವಾಗಿ ಜಾಗೃತಿಯನ್ನುಂಟು ಮಾಡುವಲ್ಲಿ ಇದು 'ಕೊಡಗು' ಪತ್ರಿಕೆಯಷ್ಟೇ ಪ್ರಭಾವಶಾಲಿ ಪಾತ್ರ ವಹಿಸಿತೆನ್ನಬಹುದು. ಬಲ್ಲಚಂಡ ಬೆಳ್ಯಪ್ಪ ಅವರ ತರುವಾಯ ಬೊಳಕಾರಂಡ ಕಾರ್ಯಪ್ಪ ಅವರು ಇದರ ಸಂಪಾದಕರಾಗಿದ್ದರು. ಇದು ಒಟ್ಟು ಎಂಟು ವರುಷಗಳ ಕಾಲ ಪ್ರಚಲಿತದಲ್ಲಿದ್ದಿತು.

ಅಬ್ದುಲ್ ಗಫೂರ್‌ಖಾನ್ ಅವರು 1925ರಲ್ಲೇ 'ಕೊಡಗು ಬೋಧಿನಿ' ಎಂಬ ಕನ್ನಡ ಮಾಸಿಕವನ್ನು ಅಮ್ಮತ್ತಿಯಿಂದ ಹೊರಡಿಸಿದರು. ಬ್ರಿಟಿಷ್ ಸರಕಾರದ ನೀತಿಯನ್ನು ಟೀಕಿಸುವ ಧೈರ್ಯ ಇವರದಾಗಿದ್ದಿತು. ಸರಕಾರದ ಪತ್ರಿಕಾ ದಮನ ನೀತಿಯನ್ನು ಎದುರಿಸಿ ಸೆಕ್ಯೂರಿಟಿ ಹಣ ಕಟ್ಟದೆ ಈ ಪತ್ರಿಕೆಯನ್ನು ನಿಲ್ಲಿಸಲಾಯಿತು. ಅದೇ ವರುಷದಲ್ಲಿ ಕೆ. ನಾರಾಯಣರಾಯರ ಸಂಪಾದಕತ್ವದ 'ಲೋಕರಹಸ್ಯ' ಎಂಬ ಮಾಸಿಕವು ವೀರರಾಜಪೇಟೆಯಿಂದ ಹೊರಬಿದ್ದಿತು. ಜಿ.ಹೆಚ್. ಹೌಸಿನ ರಾಮಕೃಷ್ಣರು ಇದನ್ನು ಹೊರಡಿಸಿದ್ದರು. ಹಲವು ವೈವಿಧ್ಯಮಯ ಲೇಖನ, ಕಥೆ–ಕಾದಂಬರಿ, ಇತ್ಯಾದಿಗಳಿಂದ ಕೂಡಿದ ಈ ಪತ್ರಿಕೆಯು ಕರ್ನಾಟಕದಲ್ಲೇ ಪ್ರಸಿದ್ಧಿ ಪಡೆದಿದ್ದಿತು. ಇದು ಎಂಟು ವರುಷಗಳ ಕಾಲ ನಡೆಯಿತು. ಗಮನಾರ್ಹ ಸಂಗತಿಯೆಂದರೆ, 1932ರಲ್ಲಿ ಮಡಿಕೇರಿಯಿಂದ ಪ್ರಕಟಗೊಳ್ಳತೊಡಗಿದ 'ಜನ್ಮಭೂಮಿ' ಕನ್ನಡ ಸಾಪ್ತಾಹಿಕವು 1962ರ ವರೆಗೆ ನಡೆಯಿತು. 'ಲೋಕಪಾವನ' ಪತ್ರಿಕೆಯನ್ನು ಸಂಪಾದಿಸಿದ ಬಲ್ಲಚಂಡ ಬೆಳ್ಯಪ್ಪ ಅವರೇ ಅಲ್ಲದೆ, ಅವರ ನಂತರ ಮಕ್ಕಿ ಸುಬ್ರಾಯರೂ ಈ ಪತ್ರಿಕೆಯ ಸಂಪಾದಕರುಗಳಾಗಿದ್ದರು. 1961ರ ವೇಳೆಗೆ ಈ ಪತ್ರಿಕೆಯನ್ನು ವಹಿಸಿಕೊಂಡ ಕೋಟೇರ ಎ. ಸೋಮಣ್ಣ ಅವರು 1962ರ ಡಿಸೆಂಬರ್‌ವರೆಗೆ ಇದನ್ನು ನಡೆಸಿದರು.

ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿದ್ದು ದ್ವಿಭಾಷಾ ಪತ್ರಿಕೆಯೆನಿಸಿದ 'ಉದಯ' ('ಡಾನ್') ಸಾಪ್ತಾಹಿಕವು ಬೊಳಕಾರಂಡ ಕಾರ್ಯಪ್ಪ ಅವರ ಸಂಪಾದಕತ್ವದಲ್ಲಿ 1936ರಲ್ಲಿ ಆರಂಭವಾಗಿ ಮೂರುವರುಷಗಳ ಕಾಲ ನಡೆಯಿತು. 1948ರಲ್ಲಿ ಒಂದು ವರುಷದ ಮಟ್ಟಿಗೆ ನಡೆದ 'ಪ್ರಭಾತ' ಕನ್ನಡ ಮಾಸಪತ್ರಿಕೆಯು ಐ.ಮಾ. ಮುತ್ತಣ್ಣ ಅವರ ಸಂಪಾದಕತ್ವದಲ್ಲಿ ಆರಂಭಗೊಂಡಿತು. ಇದು ಸಾಹಿತ್ಯ ಪತ್ರಿಕೆಯಾಗಿದ್ದು, 1947ರ ಅಕ್ಟೋಬರ್‌ನಲ್ಲಿ ಐ.ಮಾ. ಮುತ್ತಣ್ಣ ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟ ಪ್ರಗತಿಪರ ಸಾಹಿತ್ಯ ಸಂಘದ ಪತಿಯಿಂದ ಇದು ಹೊರಟಿತು. ಕೊಡವ ಮತ್ತು ಕನ್ನಡ ಭಾಷೆಗಳ ಅಭಿವೃದ್ಧಿಗಾಗಿ ಕೊಡಗಿನಲ್ಲಿ ಇವರು ಕೈಗೊಂಡ ಸೇವೆಯನ್ನು ಈ ಪತ್ರಿಕೆಯು ದಾಖಲಿಸಿದೆ. 1949ರಲ್ಲಿ ಪೊನ್ನಂಪೇಟೆಯಿಂದ 'ಸತ್ಯಾರ್ಥಿ' ಎಂಬ ಇನ್ನೊಂದು ಕನ್ನಡ ಮಾಸಪತ್ರಿಕೆ ಹೊರಟಿತು. ಎಂ.ಬಿ. ಮುತ್ತಣ್ಣ ಅವರು ಸಂಪಾದಕರಾಗಿದ್ದ ಈ ಪತ್ರಿಕೆಯು ನಾಲ್ಕು ವರುಷಗಳ ಕಾಲ ನಡೆಯಿತು. ಬಿ.ಕೆ.ಎಸ್. ಮೂರ್ತಿ ಅವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳತೊಡಗಿದ 'ಕೊಡಗು ಸಮಾಚಾರ' ಕನ್ನಡ ಸಾಪ್ತಾಹಿಕವು ಮೂರು ವರುಷಗಳ ಕಾಲ ಪ್ರಚಲಿತದಲ್ಲಿದ್ದಿತು.

ಪತ್ರಿಕೋದ್ಯಮದಲ್ಲಿ ಸಾಹಸಮಯ ಹಾಗೂ ವೈವಿಧ್ಯಮಯ ಪ್ರಯೋಗಗಳನ್ನು ಕೈಗೊಳ್ಳುವುದರ ಮೂಲಕ ದಿನಪತ್ರಿಕೆ, ಸಂಜೆ ದಿನಪತ್ರಿಕೆ, ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳನ್ನು ಕನ್ನಡದಲ್ಲಿ ಪ್ರಕಟಿಸಿದವರು ಸಾಹಿತಿ ಮತ್ತು ಪ್ರಸಿದ್ಧ ಪತ್ರಕರ್ತರಾದ ಬಿ. ಎಸ್. ಗೋಪಾಲಕೃಷ್ಣ ಅವರು. 1954ರಲ್ಲಿ 'ನಂದಾದೀಪ' ಮಾಸಿಕವನ್ನೂ 1957ರಲ್ಲಿ 'ಶಕ್ತಿ' ದೈನಿಕವನ್ನೂ 1970ರಲ್ಲಿ 'ಸಂಧ್ಯಾ' ಸಂಜೆ ದಿನಪತ್ರಿಕೆ ಮತ್ತು 'ಚೇತನ' ಸಾಪ್ತಾಹಿಕಗಳನ್ನೂ ಆರಂಭಿಸಿದುದು ಇವರ ಹೆಗ್ಗಳಿಕೆ. ಇವುಗಳಲ್ಲಿ 'ನಂದಾದೀಪ'ವು ಉತ್ಕೃಷ್ಟ ಸಾಹಿತ್ಯ ಪತ್ರಿಕೆಯೆನಿಸಿದ್ದು, ನಾಲ್ಕು ವರುಷಗಳ ಕಾಲ ನಡೆಯಿತು. 'ಸಂಧ್ಯಾ' ಮತ್ತು 'ಚೇತನ'ಗಳು ಒಂದು ವರುಷ ಮಾತ್ರವೇ ನಡೆದವು. 'ಶಕ್ತಿ' ದೈನಿಕವು ಕೊಡಗಿನ ಪ್ರಪ್ರಥಮ ಕನ್ನಡ ದಿನಪತ್ರಿಕೆಯೆಂಬ ಕೀರ್ತಿಗೆ ಪಾತ್ರವಾಗಿದ್ದು, ಇಂದಿಗೂ ಅತ್ಯಧಿಕ ಪ್ರಸಾರದೊಡನೆ ಪ್ರಕಟಗೊಳ್ಳುತ್ತಿದೆ. ಆರಂಭದಲ್ಲಿ ಬಿ. ಎಸ್. ಗೋಪಾಲಕೃಷ್ಣ ಅವರೇ ಸಂಪಾದಕರಾಗಿದ್ದು, ಈಗ ಇವರ ಪುತ್ರ ಜಿ. ಯದುಮಣಿ ಅವರು ಇದರ ಸಂಪಾದಕರಾಗಿದ್ದಾರೆ. ಬಿ. ಎಸ್. ಗೋಪಾಲಕೃಷ್ಣ ಅವರು 'ಸಂಯುಕ್ತ ಕರ್ನಾಟಕ'ದ ಸಂಪಾದಕರಾಗಿಯೂ ಸೇವೆ ಸಲ್ಲಿಸಿರುವರು. 'ಚೇತನ' ಸಾಪ್ತಾಹಿಕವನ್ನು ಮುಗ್ಗುಲದ ಸಿ. ಎಂ. ಚರಮಣ್ಣ ಅವರು ಕೊಂಡು ತಾವೂ ಸ್ವಲ್ಪ ಕಾಲ ಅದರ ಸಂಪಾದಕರಾಗಿದ್ದರು. 'ಶಕ್ತಿ' ಪತ್ರಿಕೆಗೆ ದುಡಿದ ಹಲವಾರು ಉಪಸಂಪಾದಕರುಗಳಲ್ಲಿ ಆ ನಂತರ 'ನವಶಕ್ತಿ' ದೈನಿಕವನ್ನು ಆರಂಭಿಸಿದ ಟಿ. ಎ. ಮದುರೆಸೆಟ್ಟಿ ಅವರೂ ಒಬ್ಬರು.

ಎಂ. ಎಸ್. ಸುಬ್ರಾಯ ಅವರ ಸಂಪಾದಕತ್ವದ 'ಪರಿಮಳ' ಕನ್ನಡ ಮಾಸಿಕವು 1960ರಲ್ಲಿ ಹುಟ್ಟಿ ಅಲ್ಪಾವಧಿಯಲ್ಲೇ ಸ್ಥಗಿತಗೊಂಡಿತು. 1961ರಲ್ಲಿ ಆರಂಭವಾಗಿ ಇಂದಿಗೂ ಪ್ರಕಟಗೊಳ್ಳುತ್ತಿರುವ 'ಹಿತವಾಣಿ' ಕನ್ನಡ ದೈನಿಕವು ಮೊದಲು ಮಡಿಕೇರಿಯಿಂದಲೂ ಆ ನಂತರ ವೀರರಾಜಪೇಟೆಯಿಂದಲೂ ಪ್ರಕಟಗೊಳ್ಳತೊಡಗಿದೆ. ಪ್ರಾರಂಭದಲ್ಲಿ ಹೆಚ್. ವಿ. ಪಾರ್ಥಸಾರಥಿ, ಕೆ. ಗೋವಿಂದರಾವ್, ಸಿ. ಪಿ. ಭರತನ್, ಎ. ಕೆ. ಸುಬ್ಬಯ್ಯ ಮತ್ತು ಕೆ. ಸಿ. ಉತ್ತಯ್ಯ ಅವರುಗಳು ಕ್ರಮವಾಗಿ ಈ ಪತ್ರಿಕೆಯ ಸಂಪಾದಕರಾಗಿದ್ದರು. ಬಿರುನಾಣಿಯ ಎ. ಕೆ. ಸುಬ್ಬಯ್ಯ ಅವರು ಈ ಪತ್ರಿಕೆಯು ದಕ್ಷಿಣ ಕೊಡಗಿನಲ್ಲಿ ವಿಶೇಷ ಪ್ರಚಾರ ಹೊಂದಲು ಕಾರಣರಾದರು. 1975ರಲ್ಲಿ ದೇಶದಲ್ಲಿ ಘೋಷಿಸಲ್ಪಟ್ಟ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇದು ತನ್ನ ಪ್ರಕಟಣೆಯನ್ನು ನಿಲ್ಲಿಸಿದ್ದು, ಆ ನಂತರ ಪುನರಾರಂಭಗೊಂಡಿತು. ಇದರ ಈಗಿನ ಸಂಪಾದಕರು ಪಿ. ನಾರಾಯಣಶೆಟ್ಟಿ ಅವರು. ಹಿಂದೆ ಮಂಗಳೂರಿನಲ್ಲಿ ಪ್ರಸಿದ್ಧ ಸಾಹಿತಿ ಕಡೆಂಗೋಡ್ಲು ಶಂಕರಭಟ್ಟರು ನಡೆಸುತ್ತಿದ್ದ 'ರಾಷ್ಟ್ರಬಂಧು' ಮತ್ತು 'ರಾಷ್ಟ್ರಮತ' ಕನ್ನಡ ಪತ್ರಿಕೆಗಳ ಒಡೆತನವನ್ನು ಪಡೆದ ವೀರರಾಜಪೇಟೆಯ ಕೃಷ್ಣಗಿರಿ ಗೋವಿಂದರಾವ್ ಅವರು 1965 ರಿಂದ ತಮ್ಮ ಸಂಪಾದಕತ್ವದಲ್ಲಿ 'ರಾಷ್ಟ್ರಬಂಧು' ದಿನಪತ್ರಿಕೆಯನ್ನೂ ತಮ್ಮ ಪತ್ನಿ ಕೆ. ಜಯಲಕ್ಷ್ಮಿ ಅವರ ಸಂಪಾದಕತ್ವದಲ್ಲಿ 'ರಾಷ್ಟ್ರಮತ' ವಾರಪತ್ರಿಕೆಯನ್ನೂ ಹೊರಡಿಸಿದರು. ಈ ಎರಡು ಪತ್ರಿಕೆಗಳು ಇಂದಿಗೂ ಪ್ರಚಲಿತವಿದ್ದು, ಕೆ. ಜಿ. ಅರುಣ್‌ಕುಮಾರ್ ಮತ್ತು ಜಿ. ಜಯಲಕ್ಷ್ಮಿ ಅವರುಗಳು ಕ್ರಮವಾಗಿ ಈ ಪತ್ರಿಕೆಗಳ ಸಂಪಾದಕರಾಗಿರುವರು. 'ರಾಷ್ಟ್ರಮತ'ವು ಕೊಡಗಿನ ಪ್ರಥಮ ಮಹಿಳಾ ಸಾಪ್ತಾಹಿಕವೆನಿಸಿದೆ.

ಕೆ. ಕೆ. ಪುಟ್ಟರಾಜು ಅವರು 1965ರಲ್ಲಿ ಮಡಿಕೇರಿಯಿಂದ ಆರಂಭಿಸಿದ 'ರವಿ' ಮತ್ತು ಟಿ. ಎ. ಮದುರೆಸೆಟ್ಟಿ ಅವರು 1972ರಲ್ಲಿ ಆರಂಭಿಸಿದ 'ನವಶಕ್ತಿ'—ಈ ಎರಡೂ ಕನ್ನಡ ಪತ್ರಿಕೆಗಳು. ಎಂ. ಪಿ. ಕೃಷ್ಣರಾಜು ಮತ್ತು ಟಿ. ಎಂ. ಚಂದ್ರಶೇಖರ ಅವರುಗಳು ಕ್ರಮವಾಗಿ ಈ ಪತ್ರಿಕೆಗಳ ಈಗಿನ ಸಂಪಾದಕರು. 1972ರಲ್ಲಿ ಮಡಿಕೇರಿಯಿಂದ

ಪ್ರಕಟಣೆಯನ್ನಾರಂಭಿಸಿದ ಕೆ. ಸಿ. ರಾಮಮೂರ್ತಿ, ಮುಂದೆ ಬಿ. ಜಿ. ಮೋಹನದಾಸ್ ಭಂಡಾರ್ಕರ್ ಅವರುಗಳು ಸಂಪಾದಕರಾಗಿದ್ದ 'ತ್ರಿವಿಕ್ರಮ' ಕನ್ನಡ ಸಾಪ್ತಾಹಿಕ, 1973ರಲ್ಲಿ ಸಿದ್ದಾಪುರದಿಂದ ಆರಂಭಗೊಂಡ ಸಿ. ಎಚ್. ಕೆ. ನಂಬಿಯಾರ್ ಅವರ ಸಂಪಾದಕತ್ವದ 'ಸಂಸಾರಂ' ಎಂಬ ಮಲಯಾಳ ಪಾಕ್ಷಿಕ—ಇವುಗಳು ಅಲ್ಪಾವಧಿಯವು. ಟಿ. ಪಿ. ರಮೇಶ್ ಅವರು ಮಡಿಕೇರಿಯಿಂದ ಹೊರಡಿಸುತ್ತಿರುವ 'ಗಡಿನಾಡ ಸಂಚಾರಿ'ಯು ಕನ್ನಡ ವಾರಪತ್ರಿಕೆಯಾಗಿದೆ. ಸದ್ಯಕ್ಕೆ ಕೊಡಗಿನ ಏಕೈಕ ಸಂಜೆ ದೈನಿಕವಾಗಿ ವಿ. ಪಿ. ಸುರೇಶ್ ಅವರ 'ಪರಾಕ್ರಮ' (1980) ಕನ್ನಡ ಪತ್ರಿಕೆಯು ಮಡಿಕೇರಿಯಿಂದ ಪ್ರಕಟಗೊಳ್ಳುತ್ತಿದೆ.

ಕೊಡವ ಭಾಷೆಯ ಪ್ರಥಮ ವಾರಪತ್ರಿಕೆಯೆನಿಸಿರುವ 'ಬ್ರಹ್ಮಗಿರಿ'ಯು 1980ರಲ್ಲಿ ಆರಂಭಗೊಂಡು ಯು. ಎಂ. ಪೂವಯ್ಯ ಅವರ ಸಂಪಾದಕತ್ವದಲ್ಲಿ ಮಡಿಕೇರಿಯಿಂದ ಹೊರಡುತ್ತಿದೆ. ಕನ್ನಡವೂ ಸೇರಿದಂತೆ ಇತರ ಯಾವುದೇ ಭಾಷೆಯಲ್ಲಿ ಇರಬಹುದಾದ ಪತ್ರಿಕೋದ್ಯಮದ ಪ್ರಕಾರಗಳೆಲ್ಲವನ್ನೂ ಈ ಪತ್ರಿಕೆಯಲ್ಲಿ ಅಳವಡಿಸಲೆತ್ನಿಸಲಾಗಿದೆ. ಹುತ್ತರಿ ವಾರ್ಷಿಕ ವಿಶೇಷ ಸಂಚಿಕೆಯನ್ನು ಪ್ರತೀ ವರುಷವೂ ಪ್ರಕಟಿಸುತ್ತಿರುವ ಈ ಪತ್ರಿಕೆಯ ಹಲವಾರು ಸಂಚಿಕೆಗಳನ್ನು ಅಮೆರಿಕಾದ ಯು. ಎಸ್. ಲೈಬ್ರರಿ ಆಫ್ ಕಾಂಗ್ರೆಸ್ ಸಂಸ್ಥೆಯವರು ಮೈಕ್ರೊಫಿಲ್ಮ್ ಮಾಡಿ ದಾಖಲಿಸಿರುವರು. 1983ರಲ್ಲಿ ಬಲ್ಲಚಂಡ ಮು. ಚಂಗಪ್ಪ ಅವರ 'ತೂಕ್‌ಬೊಳಕ್' ಎಂಬ ಇನ್ನೊಂದು ಕೊಡವಭಾಷಾ ವಾರಪತ್ರಿಕೆಯು ವೀರರಾಜಪೇಟೆಯಿಂದ ಪ್ರಕಟವಾಯಿತು. ಹಾಗೆಯೇ, ಅದೇ ವರುಷದಲ್ಲಿ 'ಜಮ್ಮನಂಗಡ' ಎಂಬ ಇನ್ನೊಂದು ವಾರಪತ್ರಿಕೆಯೂ ಗೋಣಿಕೊಪ್ಪಲಿನಿಂದ ಹೊರಡಲಾರಂಭಿಸಿತು. ಕೊಡವರ ಕ್ರಾಂತಿಕಾರಿ ವಾರಪತ್ರಿಕೆಯೆಂದು ಗುರುತಿಸಿಕೊಂಡ 'ಜಮ್ಮನಂಗಡ'ದ ಮೊದಲ ಸಂಪಾದಕರು ಪಾಲಂದಿರ ಎ. ಪೊನ್ನಣ್ಣ ಅವರು. ಇದು ಕೆಲಕಾಲ ನಿಂತುಹೋಗಿದ್ದು, 1986ರಲ್ಲಿ ಪುನರಾರಂಭಗೊಂಡು ಮೂರ್ನಾಡಿನಿಂದ ಪ್ರಕಟಗೊಳ್ಳತೊಡಗಿತು. ಇದರ ಈಗಿನ ಸಂಪಾದಕರು ಪಾಲಂದಿರ ರಮೇಶ್ ಪೊನ್ನಣ್ಣ ಅವರು. ಕೊಡವ ಭಾಷೆ, ಜನಾಂಗ, ಸಂಸ್ಕೃತಿ, ಇತ್ಯಾದಿಗಳ ಬಗೆಗೆ ಜನಜಾಗೃತಿಯನ್ನು ಉಂಟುಮಾಡುವುದರೊಡನೆ, ಸೋದರ ಸಂಸ್ಕೃತಿಯ ಮೇಲ್ಮೆಯನ್ನೂ ಕೊಡಗರಿಗೆ ಪರಿಚಯಿಸುವ ಹಿರಿಯ ಉದ್ದೇಶವನ್ನು ಈ ಪತ್ರಿಕೆಗಳು ಇಟ್ಟುಕೊಂಡಿವೆ.

ಕೊಡಗಿನ ಮೊದಲ ಇಂಗ್ಲಿಷ್ ಸಾಪ್ತಾಹಿಕವಾಗಿ 'ಆತ್ಮೀಯ'ವು 1984 ರಲ್ಲಿ ಅರವಿಂದ ಆರ್ಯ ಅವರ ಸಂಪಾದಕತ್ವದಲ್ಲಿ ಮಡಿಕೇರಿಯಿಂದ ಒಂದು ವರುಷ ಪ್ರಕಟವಾಯಿತು. 1987ರಲ್ಲಿ ಎ. ಕೆ. ಫಾಲಾಕ್ಷ ಅವರು 'ಸೂಜಿ' ಎಂಬ ಕನ್ನಡ ಸಾಪ್ತಾಹಿಕವನ್ನು ಸಿದ್ದಾಪುರದಿಂದ ಹೊರತಂದರು. ಆ ನಂತರ ಅವರು ಇದನ್ನು ದೈನಿಕವಾಗಿ ಪರಿವರ್ತಿಸಿ ಮಡಿಕೇರಿಯಿಂದ ಪ್ರಕಟಿಸತೊಡಗಿದರು. ಈ ಪತ್ರಿಕೆಯು ಸ್ವಲ್ಪಕಾಲ ಮಾತ್ರ ನಡೆಯಿತು. ಹಾಗೆಯೇ, ಮಡಿಕೇರಿಯ ಬಿ. ಎ. ಷಂಶುದ್ದೀನ್ 1988ರಲ್ಲಿ ಆರಂಭಿಸಿದ 'ಕೊಡಗು ಕೇಸರಿ' ಕನ್ನಡ ಪತ್ರಿಕೆಯು ಮೊದಲಿಗೆ ದೈನಿಕವಾಗಿದ್ದು, ಆ ನಂತರ ಸಾಪ್ತಾಹಿಕವೆನಿಸಿತು. ಇದು ಎರಡು ವರುಷಗಳ ಕಾಲ ಪ್ರಚಲಿತದಲ್ಲಿದ್ದಿತು. 1988ರಲ್ಲಿ ಮಡಿಕೇರಿಯಿಂದ 'ಕೊಡಗಿನ ಅಕ್ಷಿ' ಎಂಬ ಕನ್ನಡ ಸಾಪ್ತಾಹಿಕವನ್ನು ಕೆ. ಯು. ಮಾಚಯ್ಯ ಹೊರಡಿಸಿದ್ದರಲ್ಲದೆ, ಇದು ಅಲ್ಪಾವಧಿಯಲ್ಲಿಯೇ ಸ್ಥಗಿತವಾಯಿತು. 1989ರಲ್ಲಿ ಆರಂಭವಾದ 'ಸಿಡಿಲು' ಕನ್ನಡ ವಾರಪತ್ರಿಕೆಯನ್ನು ಡಿ. ಎಂ. ಚಿಣ್ಣಪ್ಪ ಅವರು ಸೋಮವಾರಪೇಟೆಯಿಂದ ಸಂಪಾದಿಸಿ ಪ್ರಕಟಿಸುತ್ತಿರುವರು.

ಇವಲ್ಲದೆ, ವೀರರಾಜಪೇಟೆಯಿಂದ ಹೊರಡಿಸಲಾದ ಇಂಗ್ಲಿಷ್ ಸಾಪ್ತಾಹಿಕ 'ಸ್ಟಾರ್ ಆಫ್ ಕೊಡಗು'ವಿನ ಸಂಪಾದಕರಾಗಿದ್ದವರು ಎಸ್.ಎಚ್.ಅಬೂಬಕರ್.ಹಾಗೆಯೇ, ಬಿ. ಎಂ. ಚೆಂಗಪ್ಪ (ಶೆರ್ರಿ) ಅವರು ಸಹಾ 1990ರಲ್ಲಿ ಬೇಟೋಳಿ—ವೀರರಾಜಪೇಟೆಯಿಂದ 'ವಾಯ್ಸ್ ಆಫ್ ಕೊಡಗು' ಎಂಬ ಇಂಗ್ಲಿಷ್ ಬೈ—ವೀಕ್ಲಿಯನ್ನು ಆರಂಭಿಸಿದರು. ಈ ಪತ್ರಿಕೆಯು ಪ್ರಚಲಿತವಿದೆ. ಕುಶಾಲನಗರದಿಂದ ಹೊರಡಿಸಲಾದ 'ವೋಕ್ಸ್ ಕೂರ್ಗಿ' ಎಂಬ ಇನ್ನೊಂದು ಇಂಗ್ಲಿಷ್ ಸಾಪ್ತಾಹಿಕವು ಬಿ. ಆರ್. ನಾರಾಯಣರಿಂದ ಸಂಪಾದಿಸಲ್ಪಟ್ಟು ಹೊರಬರುತ್ತಿದೆ.

ಶೈಕ್ಷಣಿಕ ಸಂಘಟನೆಗಾಗಿ ಈ ಜಿಲ್ಲೆಯಲ್ಲಿ ಪ್ರಕಟವಾದ ಕೆಲವಾರು ಪತ್ರಿಕೆಗಳಲ್ಲಿ 1926ರಲ್ಲಿ ಡಿ.ಎಂ. ಸಿದ್ದಲಿಂಗಯ್ಯ ಅವರ ಸಂಪಾದಕತ್ವದಲ್ಲಿ ಮಡಿಕೇರಿಯಿಂದ ಹೊರಟ 'ವಿದ್ಯಾರ್ಥಿ' ಎಂಬ ಕನ್ನಡ ದ್ವಿಮಾಸಿಕ ಪತ್ರಿಕೆಯು ಮೊದಲನೇಯದು. ಮರುವರುಷವೇ, ಅಂದರೆ 1927ರಲ್ಲಿ ಮಡಿಕೇರಿಯ ಅಖಿಲ ಕೊಡಗು ಅಧ್ಯಾಪಕರ ಸಂಘದ ಪತ್ರಿಕೆಯಾಗಿ 'ಶಾರದಾ' ಎಂಬ ಇನ್ನೊಂದು ಕನ್ನಡ ದ್ವಿಮಾಸಿಕವು ಪ್ರಕಟಿಸಲ್ಪಟ್ಟಿತಲ್ಲದೆ, ಬಿ.ಎಸ್. ಕುಶಾಲಪ್ಪ ಅವರು ಇದರ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಕೊಡಗು ಶಿಕ್ಷಣ ಇಲಾಖೆಯ ಪತ್ರಿಕೆಯಾಗಿ ಸುಮಾರು 1948ರಲ್ಲಿ ಮಡಿಕೇರಿಯಿಂದ ಪ್ರಕಟಗೊಂಡುದು 'ನವೀನ ಶಿಕ್ಷಕ' ಎಂಬ ಕನ್ನಡ

ಮಾಸಿಕ. ಜಿ.ಎಸ್. ಕೇಶವಾಚಾರ್ಯರು ಇದರ ಸಂಪಾದಕರಾಗಿದ್ದರು. ಹಾಗೆಯೇ, 1973ರಲ್ಲಿ ಅಖಿಲ ಕೊಡಗು ಅಧ್ಯಾಪಕರ ಸಂಘದ ಮುಖಪತ್ರಿಕೆಯಾಗಿ ಆರಂಭಗೊಂಡ 'ಕೊಡಗು ಗುರುವಾಣಿ' ಕನ್ನಡ ಮಾಸಿಕವು 'ಭಾರತೀಸುತ'ರ ಸಂಪಾದಕತ್ವದಲ್ಲಿ ನಡೆಯಿತು. ಇದು ಇಂದಿಗೂ ಪ್ರಸಾರದಲ್ಲಿದೆ. ಗಮನಾರ್ಹ ಅಂಶವೆಂದರೆ, ಬಿ.ಎಸ್. ಕುಶಾಲಪ್ಪ ಅವರು ಸಂಪಾದಕರಾಗಿ ಪ್ರಕಟಿಸಿದ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಳೆಯ ವಿದ್ಯಾರ್ಥಿ ಸಂಘದ ಕನ್ನಡ ತ್ರೈಮಾಸಿಕದಲ್ಲಿ ಖ್ಯಾತ ಕವಿ ಪಂಜೆ ಮಂಗೇಶರಾಯರು ರಚಿಸಿದ 'ಹುತ್ತರಿ ಹಾಡು' ಮೊದಲಬಾರಿಗೆ ಬೆಳಕು ಕಂಡಿತು.

ಜಿಲ್ಲಾಧಿಕಾರಿಗಳು ಸಂಪಾದಕರಾಗಿರುವ ಕೊಡಗು ಜಿಲ್ಲಾ ಅಭಿವೃದ್ಧಿ ವಾರ್ತಾ ಪಾಕ್ಷಿಕ 'ಕರ್ನಾಟಕ ಮುನ್ನಡೆ' ಪ್ರಕಟಗೊಳ್ಳುತ್ತಿದೆ. 'ಕೊಡಗು ಸಹಕಾರ ಬಂಧು' ಎಂಬ ಕನ್ನಡ ಮಾಸಿಕವು 1941ರಲ್ಲಿ ಮಡಿಕೇರಿಯಿಂದ ಹೊರಡುತ್ತಿತ್ತಲ್ಲದೆ, ಪಿ.ಪಿ. ಬೆಳ್ಯಪ್ಪ ಅವರು ಇದರ ಸಂಪಾದಕರಾಗಿದ್ದರು.

ಕೊಡಗಿನ ಪತ್ರಕರ್ತರು ಇತರೆಡೆಗಳಲ್ಲಿಯೂ ಪತ್ರಿಕೆಗಳನ್ನು ಆರಂಭಿಸುವುದರೊಡನೆ ವೃತ್ತಪತ್ರಿಕಾ ರಂಗಕ್ಕೆ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವರು. ಮೈಸೂರಿನಲ್ಲಿ ಕೆ.ಬಿ. ಗಣಪತಿ ಅವರು ಹೊರಡಿಸುತ್ತಿರುವ ಕನ್ನಡ ದೈನಿಕ 'ಮೈಸೂರು ಮಿತ್ರ' ಮತ್ತು ಇಂಗ್ಲಿಷ್ ದೈನಿಕ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಗಮನಾರ್ಹವಾದುವು. ಹಾಗೆಯೇ, ಮೈಸೂರಿನ ಇಂಗ್ಲಿಷ್ ದೈನಿಕ 'ಮೈಸೂರು ಮಾನಿಟರ್' ಹಾಗೂ ಬೆಂಗಳೂರಿನ ಕನ್ನಡ ಸಾಪ್ತಾಹಿಕ 'ಕಿತ್ತಳೆನಾಡು'–ಇವೆಲ್ಲವೂ ಕೊಡಗರಿಂದ ಪ್ರಕಾಶಿತಗೊಂಡವು. ದೇಶ–ವಿದೇಶಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿರುವ ಎನ್.ಎಸ್. ಮುತ್ತಣ್ಣ, ಪತ್ರಕರ್ತ ಪಿ.ಆರ್. ನಾರಾಯಣರಾವ್ ಮೊದಲಾದವರು ಈ ಜಿಲ್ಲೆಯವರು.

ಮಡಿಕೇರಿಯಲ್ಲಿರುವ ಕೊಡಗು ಜಿಲ್ಲಾ ಪತ್ರಕರ್ತರ ಸಂಘವು 1980 ರಿಂದಲೂ ಕ್ರಿಯಾಶೀಲವಾಗಿದೆ. ಪತ್ರಕರ್ತರ ಸಂಘಟನೆ, ಪರಸ್ಪರ ಸಹಕಾರ, ವೃತ್ತಿಪರ ಘನತೆಯ ಹೆಚ್ಚಳ, ಸದಸ್ಯರ ಹಿತಸಾಧನೆ, ನಿಧಿ ಸ್ಥಾಪನೆ, ತರಬೇತಿ, ಪ್ರವಾಸ, ಗೋಷ್ಠಿ–ವಿಚಾರ ಸಂಕಿರಣ–ಉಪನ್ಯಾಸ, ಇತ್ಯಾದಿ ಉದ್ದೇಶಗಳನ್ನು ಹಾಗೂ ಯೋಜನೆಗಳನ್ನು ಈ ಸಂಘವು ಹೊಂದಿದೆ. ಇದು ಈವರೆಗೆ ನಡೆಸಿರುವ ಕಾರ್ಯಕ್ರಮಗಳಲ್ಲಿ ಪತ್ರಕರ್ತರಿಗಾಗಿ ನಡೆಸಿದ ಕಾರ್ಯಾಗಾರವು ಮುಖ್ಯವಾದುದು. ರಾಜ್ಯ ಪ್ರಶಸ್ತಿ ವಿಜೇತ ಬಿ. ಎಸ್. ಗೋಪಾಲಕೃಷ್ಣ ಅವರಿಗೆ ಸರಕಾರವು ನೀಡಿದ ಪ್ರಶಸ್ತಿ ಮೊತ್ತವು ಈ ಸಂಘದಲ್ಲಿ 'ಶಕ್ತಿ ಗೋಪಾಲಕೃಷ್ಣ' ಎಂಬ ಹೆಸರಿನಲ್ಲಿ ದತ್ತಿನಿಧಿಯಾಗಿ ಸ್ಥಾಪಿಸಲ್ಪಟ್ಟದ್ದು, ಮೊದಲ ಬಾರಿಗೆ ಈ ಜಿಲ್ಲೆಯ ಪತ್ರಕರ್ತರೊಬ್ಬರಿಗೆ ಈ ನಿಧಿಯ ಬಡ್ಡಿಯನ್ನು ಪ್ರಶಸ್ತಿಯಾಗಿ ನೀಡಲಾಗಿದೆ. 'ನವಶಕ್ತಿ'ಯ ಸಂಪಾದಕರಾಗಿದ್ದ ಟಿ. ಎ. ಮದುರಿಸೆಟ್ಟಿ ಈ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದು, ಆ ನಂತರ 'ಶಕ್ತಿ' ಸಂಪಾದಕ ಜಿ. ರಾಜೇಂದ್ರ, 'ಬ್ರಹ್ಮಗಿರಿ' ಸಂಪಾದಕ ಯು. ಎಂ. ಪೂವಯ್ಯ ಅವರುಗಳು ಕ್ರಮವಾಗಿ ಈ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. 1991 ರಿಂದ 'ಪರಾಕ್ರಮ' ಸಂಪಾದಕ ವಿ. ಪಿ. ಸುರೇಶ್ ಅಧ್ಯಕ್ಷರಾಗಿರುವರು. ಈ ಸಂಘದ ವಿವಿಧ ಅಧಿಕಾರ ವರ್ಗಗಳಲ್ಲಿರುವ ಈ ಜಿಲ್ಲೆಯ ಪತ್ರಕರ್ತರುಗಳೆಂದರೆ, ಟಿ. ಕೆ. ತ್ಯಾಗರಾಜು, ಬಿ. ಜಿ. ಅನಂತಶಯನ, ರವಿ ಕುಶಾಲಪ್ಪ, ಸಿ. ಟಿ. ಅಪ್ಪಯ್ಯ, ಕೆ.ಕೆ. ಶಶಿಧರ, ಶ್ರೀಧರ ಹೂವಲ್ಲಿ, ಎನ್. ಕೆ. ರಾಜೇಂದ್ರ, ಕೆ. ಕೆ. ದಿನೇಶ್ ಕುಮಾರ್, ಟಿ. ಕೆ. ಗಣೇಶ್‌ಕುಮಾರ್, ಪಿ. ಎನ್. ಮನು ಶೆಟ್ಟಿ, ಜಿ. ಸಂಧ್ಯಾಪ್ರಕಾಶ್, ಉದಯಕುಮಾರ್‌ರಾವ್ ಬೇಕಲ್ ಮತ್ತು ಎಸ್. ಜಿ. ನರೇಶ್‌ಚಂದ್ರ ಇವರುಗಳು.

## ಕೊಡಗು ಜಿಲ್ಲೆಯ ವೃತ್ತಪತ್ರಿಕೆಗಳು

| ಪತ್ರಿಕೆಯ ಹೆಸರು | ಭಾಷೆ | ಪ್ರಕಟಣೆಯ ಅವಧಿ | ಆರಂಭಗೊಂಡ ವರ್ಷ | ಸ್ಥಳ | ಸಂಪಾದಕರ ಹೆಸರು |
|---|---|---|---|---|---|
| 1 | 2 | 3 | 4 | 5 | 6 |
| ಕೊಡಗು ಚಂದ್ರಿಕೆ | ಕನ್ನಡ | ಸಾಪ್ತಾಹಿಕ | 1884 | ಶನಿವಾರಸಂತೆ | ಮೈಸೂರು ರಂಗರಾಯರು |
| ಕೊಡಗು | ” | ” | 1921 | ಮಡಿಕೇರಿ | ಪಂದ್ಯಂಡ ಬೆಳ್ಯಪ್ಪ<br>ಚೆಪ್ಪುಡಿರ ಎಂ. ಪೂಣಚ್ಚ<br>ಬಿ. ಡಿ. ಗಣಪತಿ<br>ಬಿ. ಡಿ. ಸುಬ್ಬಯ್ಯ (ಕಾಕೆಮಾನಿ)<br>ಕೆ. ಬಿ. ಕಾಳಪ್ಪ |
| ಲೋಕಪಾವನ | ” | ” | 1925 | ಮಡಿಕೇರಿ | ಬಲ್ಲಚಂಡ ಬೆಳ್ಯಪ್ಪ<br>ಬೊಳಕಾರಂಡ ಕಾರ್ಯಪ್ಪ |
| ಕೊಡಗು ಬೋಧಿನಿ | ” | ಮಾಸಿಕ | 1925 | ಅಮ್ಮತ್ತಿ | ಅಬ್ದುಲ್ ಗಫೂರ್ ಖಾನ್ |
| ಲೋಕರಹಸ್ಯ | ” | ” | 1925 | ವೀರರಾಜಪೇಟೆ | ಕೆ. ನಾರಾಯಣರಾವ್ |
| ವಿದ್ಯಾರ್ಥಿ | ” | ದ್ವಿಮಾಸಿಕ | 1926 | ಮಡಿಕೇರಿ | ಡಿ. ಎಂ. ಸಿದ್ದಲಿಂಗಯ್ಯ |
| ಶಾರದಾ | ” | ” | 1927 | ಮಡಿಕೇರಿ | ಬಿ. ಎಸ್. ಕುಶಾಲಪ್ಪ |
| ಜನ್ಮಭೂಮಿ | ” | ಸಾಪ್ತಾಹಿಕ | 1932 | ಮಡಿಕೇರಿ | ಬಲ್ಲಚಂಡ ಬೆಳ್ಯಪ್ಪ<br>ಮುಕ್ಕಿ ಸುಬ್ರಾಯ<br>ಕೋಟಿರ ಎ. ಸೋಮಣ್ಣ |
| ಉದಯ (ಡಾನ್) | ಕನ್ನಡ, ಇಂಗ್ಲಿಷ್ | ” | 1936 | ಮಡಿಕೇರಿ | ಬೊಳಕಾರಂಡ ಎಂ. ಕಾರ್ಯಪ್ಪ |

| 1 | 2 | 3 | 4 | 5 | 6 |
|---|---|---|---|---|---|
| ಕೊಡಗು ಚಂದ್ರಿಕೆ | ಕನ್ನಡ | ಮಾಸಿಕ | 1939 | ಮಡಿಕೇರಿ | ಬಿ. ಆರ್. ಸುಬ್ರಾಯ |
| ಕೊಡಗು ಸಹಕಾರ ಬಂಧು | ” | ” | 1941 | ಮಡಿಕೇರಿ | ಪಿ. ಪಿ. ಬೆಳ್ಯಪ್ಪ |
| ಪ್ರಭಾತ | ” | ” | 1948 | ಮಡಿಕೇರಿ | ಐ. ಮಾ. ಮುತ್ತಣ್ಣ |
| ನವೀನ ಶಿಕ್ಷಕ | ” | ” | 1948 | ಮಡಿಕೇರಿ | ಜಿ. ಎಸ್. ಕೇಶವಾಚಾರ್ಯ |
| ಸತ್ಯಾರ್ಥಿ | ” | ” | 1949 | ಪೊನ್ನಂಪೇಟೆ | ಎಂ. ಬಿ. ಮುತ್ತಣ್ಣ |
| ಕೊಡಗು ಸಮಾಚಾರ | ” | ಸಾಪ್ತಾಹಿಕ | 1952 | — | ಬಿ. ಕೆ. ಎಸ್. ಮೂರ್ತಿ |
| ನಂದಾದೀಪ | ” | ಮಾಸಿಕ | 1954 | ಮಡಿಕೇರಿ | ಬಿ. ಎಸ್. ಗೋಪಾಲಕೃಷ್ಣ |
| ಶಕ್ತಿ | ” | ದೈನಿಕ | 1957 | ಮಡಿಕೇರಿ | ಬಿ. ಎಸ್. ಗೋಪಾಲಕೃಷ್ಣ<br>ಜಿ. ಯದುಮಣಿ |
| ಪರಿಮಳ | ” | ಮಾಸಿಕ | 1960 | ಮಡಿಕೇರಿ | ಎಂ. ಎಸ್. ಸುಬ್ರಾಯ |
| ಹಿತವಾಣಿ | ” | ದೈನಿಕ | 1961 | ಮಡಿಕೇರಿ<br>ವೀರರಾಜಪೇಟೆ | ಹೆಚ್. ವಿ. ಪಾರ್ಥಸಾರಥಿ<br>ಕೆ. ಗೋವಿಂದರಾವ್<br>ಸಿ. ಪಿ. ಭರತನ್<br>ಎ. ಕೆ. ಸುಬ್ಬಯ್ಯ<br>ಕೆ. ಸಿ. ಉತ್ತಯ್ಯ<br>ಪಿ. ನಾರಾಯಣ ಶೆಟ್ಟಿ |
| ರಾಷ್ಟ್ರಬಂಧು | ” | ” | 1965 | ವೀರರಾಜಪೇಟೆ | ಕೃಷ್ಣಗಿರಿ ಗೋವಿಂದರಾವ್<br>ಕೆ. ಜಿ. ಅರುಣ್‌ಕುಮಾರ್ |

| 1 | 2 | 3 | 4 | 5 | 6 |
|---|---|---|---|---|---|
| ರಾಷ್ಟ್ರಮತ | ಕನ್ನಡ | ಸಾಪ್ತಾಹಿಕ | 1965 | ವೀರರಾಜಪೇಟೆ | ಕೆ. ಜಯಲಕ್ಷ್ಮಿ<br>ಜಿ. ಜಯಲಕ್ಷ್ಮಿ |
| ರವಿ | ” | ದೈನಿಕ | 1966 | ಮಡಿಕೇರಿ | ಕೆ. ಕೆ. ಪುಟ್ಟರಾಜು<br>ಎಂ. ಪಿ. ಕೃಷ್ಣರಾಜು |
| ಸಂಧ್ಯಾ | ” | ಸಂಜೆ ದೈನಿಕ | 1970 | ಮಡಿಕೇರಿ | ಬಿ. ಎಸ್. ಗೋಪಾಲಕೃಷ್ಣ |
| ಚೇತನ | ” | ಸಾಪ್ತಾಹಿಕ | 1970 | ಮಡಿಕೇರಿ | ಬಿ. ಎಸ್. ಗೋಪಾಲಕೃಷ್ಣ<br>ಸಿ. ಎಂ. ಚರಮಣ್ಣ |
| ನವಶಕ್ತಿ | ” | ದೈನಿಕ | 1972 | ಮಡಿಕೇರಿ | ಟಿ. ಎ. ಮದುರಿಸೆಟ್ಟಿ<br>ಟಿ. ಎಂ. ಚಂದ್ರಶೇಖರ್ |
| ತ್ರಿವಿಕ್ರಮ | ” | ಸಾಪ್ತಾಹಿಕ | 1972 | ಮಡಿಕೇರಿ | ಕೆ. ಸಿ. ರಾಮಮೂರ್ತಿ<br>ಬಿ. ಜಿ. ಮೋಹನದಾಸ್ ಭಂಡಾರ್ಕರ್ |
| ಕೊಡಗು ಗುರುವಾಣಿ | ” | ಮಾಸಿಕ | 1973 | ಮಡಿಕೇರಿ | ಭಾರತೀಸುತ |
| ಸಂಸಾರಂ | ಮಲಯಾಳಂ | ಪಾಕ್ಷಿಕ | 1973 | ಸಿದ್ದಾಪುರ | ಸಿ. ಎಚ್. ಕೆ. ನಂಬಿಯಾರ್ |
| ಕೊಡಗು ದೈನಿಕ | ಕನ್ನಡ | ದೈನಿಕ | 1976 | ಮಡಿಕೇರಿ | ಬಿ. ಡಿ. ಸುಬ್ಬಯ್ಯ (ಕಾಕಮಾನಿ)<br>ಕೆ. ಬಿ. ಕಾಳಪ್ಪ<br>ಎಂ. ಯು. ಕಾಳಪ್ಪ |
| ಗಡಿನಾಡ ಸಂಚಾರಿ | ” | ಸಾಪ್ತಾಹಿಕ | — | ಮಡಿಕೇರಿ | ಟಿ. ಪಿ. ರಮೇಶ್ |
| ಪರಾಕ್ರಮ | ” | ಸಂಜೆ ದೈನಿಕ | 1980 | ಮಡಿಕೇರಿ | ವಿ. ಪಿ. ಸುರೇಶ್ |

| 1 | 2 | 3 | 4 | 5 | 6 |
|---|---|---|---|---|---|
| ಬ್ರಹ್ಮಗಿರಿ | ಕೊಡವ | ಸಾಪ್ತಾಹಿಕ | 1980 | ಮಡಿಕೇರಿ | ಯು. ಎಂ. ಪೂವಯ್ಯ |
| ತೂಕ್ ಬೊಳಕ್ | ” | ” | 1983 | ವೀರರಾಜಪೇಟೆ | ಬಲ್ಲಚಂಡ ಮು. ಚಂಗಪ್ಪ |
| ಜಮ್ಮನಂಗಡ | ” | ” | 1983, 1986 | ಗೋಣಿಕೊಪ್ಪಲು<br>ಮೂರ್ನಾಡು | ಪಾಲಂದಿರ ಎ. ಪೊನ್ನಣ್ಣ<br>ಪಾಲಂದಿರ ರಮೇಶ್ ಪೊನ್ನಣ್ಣ |
| ಆತ್ಮೀಯ | ಇಂಗ್ಲಿಷ್ | ” | 1984 | ಮಡಿಕೇರಿ | ಅರವಿಂದ ಆರ್ಯ |
| ಕರ್ನಾಟಕ ಮುನ್ನಡೆ | ಕನ್ನಡ | ಪಾಕ್ಷಿಕ | 1986 | ಮಡಿಕೇರಿ | ಜಿಲ್ಲಾಧಿಕಾರಿಗಳು |
| ಸೂಜಿ | ” | ಸಾಪ್ತಾಹಿಕ, ದೈನಿಕ | 1987 | ಸಿದ್ದಾಪುರ, ಮಡಿಕೇರಿ | ಎ. ಕೆ. ಫಾಲಾಕ್ಷ |
| ಕೊಡಗು ಕೇಸರಿ | ” | ದೈನಿಕ, ಸಾಪ್ತಾಹಿಕ | 1988 | ಮಡಿಕೇರಿ | ಬಿ. ಎ. ಷಂಶುದ್ದೀನ್ |
| ಕೊಡಗಿನ ಅಕ್ಷಿ | ” | ಸಾಪ್ತಾಹಿಕ | 1988 | ಮಡಿಕೇರಿ | ಕೆ. ಯು. ಮಾಚಯ್ಯ |
| ಸಿಡಿಲು | ” | ” | 1989 | ಸೋಮವಾರಪೇಟೆ | ಡಿ. ಎಂ. ಚಿಣ್ಣಪ್ಪ |
| ಕೊಡಗು ಮಿತ್ರ | ” | ” | 1990 | ಕಣಿವೆ | ಭಾರದ್ವಾಜ |
| ವೋಕ್ಸ್ ಕೂರ್ಗಿ | ಇಂಗ್ಲಿಷ್ | ” | 1990 | ಕುಶಾಲನಗರ | ಬಿ. ಆರ್. ನಾರಾಯಣ |
| ವಾಯ್ಸ್ ಆಫ್ ಕೊಡಗು | ” | ಬೈ ವೀಕ್ಲಿ | 1990 | ವೀರರಾಜಪೇಟೆ | ಬಿ. ಎಂ. ಚೆಂಗಪ್ಪ (ಶೆರ್ರಿ) |
| ಸ್ಟಾರ್ ಆಫ್ ಕೊಡಗು | ” | ಸಾಪ್ತಾಹಿಕ | — | ವೀರರಾಜಪೇಟೆ | ಎಸ್. ಎಚ್. ಅಬೂಬಕರ್ |